

894.814 308 72
ANA N91
ಗ್ರಂಥ ಸ್ವಾಮ್ಯ ವಿಭಾಗ

# ಜರ್ನಿ ಟು ಹೆಲ್

ಬಿ. ವಿ. ಅನಂತರಾಮ್

ಸಪ್ತಗಿರಿ ಪ್ರಕಾಶನ

2, ಮದಾರ್‌ಸಾಬ್ ಗಲ್ಲಿ, ಬೆಂಗಳೂರು-53.

ಪ್ರಥಮ ಮುದ್ರಣ : 1991
ಕೃತಿಯ ಹೆಸರು : ಜರ್ನಿ ಟು ಹೆಲ್
ಕೃತಿಕಾರ : ಬಿ. ವಿ. ಅನಂತರಾಮ್
ಹಕ್ಕುಗಳು : ಲೇಖಕರದು
ಕಲೆ : ಸ್ಯಾಂ
ಬೆಲೆ : ರೂ. 12-00

501644R

---

ಮುದ್ರಕರು :

**ಸಾಧನಾ ಮುದ್ರಣಾಲಯ,**

2/2, 1ನೇ ಕ್ರಾಸ್, ತೋಟದ ದೇವರ ಗಲ್ಲಿ,
ಅರಳೇಪೇಟೆ, ಬೆಂಗಳೂರು-560 053.

---

First Edition : 1991
Title of the Novel : JOURNEY TO HELL
Author : B: V Anantharam
Rights : B. V. Anantharam
Design : Sam
Price : Rs 12-00.

S0164UR

## ಮುನ್ನುಡಿ....

ಆತ್ಮೀಯ ಓದುಗ ಗೆಳೆಯ, ಗೆಳತಿಯರೇ,

ಜಿಂಕೆಯ ಹೊಸದ್ದೊಂದು ಅಸ್ಸೈನ್‌ಮೆಂಟ್ ಇದೀಗ ನಿಮ್ಮ ಕೈನಲ್ಲಿಡುತ್ತಿದ್ದೇನೆ. ಹೇಗಿದೆ ಎಂಬುದನ್ನು ತಿಳಿಸಿ, ಎಂದಿನ ಆದರವೀಯುತ್ತಿರೆಂದು ನಂಬಿರುತ್ತೇನೆ.

ಪುಸ್ತಕ ಪ್ರಕಟಿಸುತ್ತಿರುವ ಸಪ್ತಗಿರಿ ಪ್ರಕಾಶನದವರಿಗೆ ನಮ್ಮ. ಮುಖಪುಟ ವಿನ್ಯಾಸಕಾರರಿಗೆ, ಅಚ್ಚುಕೂಟದ ಗೆಳೆಯರಿಗೆ ನಮನ.

ವಿಶ್ವಾಸ ವಿರಲಿ, ಬಿ. ವಿ. ಅನಂತರಾವ್.

1652, ಪ್ರಕಾಶನಗರ,
ಮೂರನೇ ಹಂತ
ಬೆಂಗಳೂರು-560021.

META ENTERED

## ನಮ್ಮಲ್ಲಿ ದೊರೆಯುವ ಶ್ರೀ ಬಿ.ವಿ ಅನಂತರಾಮ್ ರವರ ಕಾದಂಬರಿಗಳು

| | | |
|---|---|---|
| ಜರ್ನಿ ಟು ಹೆಲ್ | ರೂ. | 12 - 00 |
| ಕೋಡ್‌ವರ್ಡ್ ಅಲ್ಫಾ ಬೀಟಾ | | 12 - 00 |
| ಆಪರೇಷನ್ ಡ್ರಗ್ ಚೈನ್ | | 12 - 00 |
| ಸಾವಿನ ನೆರಳು | | 12 - 00 |
| ಕಪ್ಪು ಕತ್ತಲಿನ ಕೆಂಪು ಚುಕ್ಕೆ | | 11 - 00 |
| ಬ್ಲಡ್ ಹಂಟ್ | | 9 - 00 |
| ಮೃತ್ಯುವಿನೊಡನೆ ಸರಸ | | 9 - 00 |
| ಜಿಂಕೆ ರೋಷ ಶತ್ರುನಾಶ | | 8 - 00 |
| ಕಿಲ್ ಮಾಸ್ಟರ್ ಕೆ-7 | | 8 - 00 |
| ಅಪಾಯಕ್ಕೆ ಅಂಜಬೇಡ | | 8 - 00 |
| ಪತ್ತೇದಾರ ಮಹೇಶ | | 8 - 00 |
| ಕಾಯುತ್ತಿದೆ ಅಪಾಯ | | 6 - 00 |
| ಅಪಾಯಕ್ಕೊಂದು ಸವಾಲ್ | | 6 - 00 |

### ಮುಂಬರುವ ಕಾದಂಬರಿಗಳು

ಎಸ್ಕೇಪ್ ಸ್ಪೆಷಲಿಸ್ಟ್
ಸ್ಪಾನಿಷ್ ಕನೆಕ್ಷನ್
ಸ್ಪೈ ಕಿಲ್ಲರ್ಸ್

**ಸಪ್ತಗಿರಿ ಪ್ರಕಾಶನ**

2, ಮದಾರ್‌ಸಾಬ್ ಲೇನ್

ಬೆಂಗಳೂರು - 560053

# ೧

ಸಿಗರೇಟ್ ಲಾಸ್ಟ್‌ಡ್ರಾಗ್ ಎಳೆದು ಬಿಟ್ ದೂರ ಎಸೆದು ಬಾಯಲ್ಲಿ ತುಂಬಿದ್ದ ಹೊಗೆ ಉಂಗುರಾಕಾರದಲ್ಲಿ ಹೊರಬಿಡುತ್ತಾ ತೀಕ್ಷ್ಣವಾಗಿ ಮುಂದೆ ದಿಟ್ಟಿಸಿದ ಮಹೇಶ.

ಅವನ ಪಕ್ಕದಲ್ಲೇ ನಿಂತಿದ್ದಳು 'ಸೆಂಟ್ರಲ್ ಸರ್ವಿಸಿಂಗ್ ಸೆಲ್'ನ ಟಾಪ್ ಲೇಡಿ ಏಜೆಂಟ್. 'ಜಿಂಕೆ'ಯ ಎಷ್ಟೋ ಅಸೈನ್‌ಮೆಂಟ್‌ಗಳ ಸಂಗಾತಿ ಡೆಡ್ಲಿ ಸೋಫಿಯಾ ಅವಳ ನೋಟವೀಗ ಎಡಗೈನಲ್ಲಿರುವ ರಿಸ್ಟ್‌ವಾಚ್‌ನತ್ತ. ಮುಖದಲ್ಲಿ ಅಸಹನೆ

ಸರಿಯಾಗಿ ಅರ್ಧರಾತ್ರಿ ಕಳೆದು ಹತ್ತು ನಿಮಿಷವಾಗಿದೆ ಆಗ ವೇಳೆ

ಗ್ರೇಟರ್‌ಬಾಂಬೆಯ ಮೆಹರ್‌ವಾಡೆ ಏರಿಯಾ ಅದು ರಸ್ತೆಗಳಲ್ಲಿ ಜನಸಂಚಾರವಿಲ್ಲ. ದೇದೀಪ್ಯಮಾನವಾಗಿ ಬೆಳಗುತ್ತಿರುವ ಸ್ಟ್ರೀಟ್ ಲೈಟ್ಸ್.

ಮಹೇಶ, ಸೋಫಿಯಾ ನಿಂತಿರುವ ಜಾಗದಿಂದ ಸರಿಯಾಗಿ ನೂರು ಮಾರುಗಳಷ್ಟು ದೂರದಲ್ಲಿರುವ ಇರಾನಿ ಹೋಟೆಲ್‌ನಲ್ಲಿ ಸುಮಾರು ಜನ ಸಂದಣಿ. ಆ ಪ್ರದೇಶದಲ್ಲಿಯೇ ಬಹಳ ಪ್ರಸಿದ್ಧ ಹೋಟೆಲ್ ಅದು. ರಾತ್ರಿ ಹತ್ತು ಗಂಟೆಯ ಮೇಲೆ ಬಾಂಬೆ ನಗರದ ಚಿಲ್ಲರೆ ಕಳ್ಳರಿಂದ ಹಿಡಿದು, ಕೈ ಕಾಲು ತೆಗೆಯುವ ದಾದಾಗಳವರೆಗೆ, ತಿಜೋರಿಗೆ ಕನ್ನ ಹಾಕುವವರಿಂದ ಹಿಡಿದು ನೇರ ಮೇಲ್ಗಡಿಗೆ ರವಾನಿಸುವ ಕಾಂಟ್ರ್ಯಾಕ್ಟ್ ಹಂತಕರವರೆಗೆ......ಆ ಹೋಟೆಲ್‌ನಲ್ಲಿ ಕಾಣಬಹುದು. ಇನ್‌ಫ್ಯಾಕ್ಟ್ ಆ ಹೋಟೆಲ್ ಅವರೆಲ್ಲರ ಮೀಟಿಂಗ್ ಪ್ಲೇಸ್ ಅನ್ನಲಡ್ಡಿಯಿಲ್ಲ.

ಒಂಬತ್ತು ಗಂಟೆಗೆಲ್ಲಾ ಆ ಏರಿಯಾದಲ್ಲಿ ಪ್ರತ್ಯಕ್ಷವಾಗಿ ಹೋಟೆಲ್‌ಗೆ ಬಂದು ಹೋಗುತ್ತಿರುವ ಕಸ್ಟಮರ್‌ಗಳನ್ನೆಲ್ಲಾ ತಮ್ಮ ಎಕ್ಸ್‌ರೇ ನೋಟಕ್ಕೆ ಒಳಪಡಿಸುವ ಕಾಯಕದಲ್ಲಿ ಮಗ್ನರಾಗಿದ್ದರು ಮಹೇಶ್, ಸೋಫಿಯಾ. ಹನ್ನೆರಡು ಕಳೆದರೂ ಬೇಕಾದ ಪರ್ಸನಾಲಿಟಿ ಮಾತ್ರ ಇನ್ನೂ ಹಾಜರಾಗಿಲ್ಲ!

ಕೆಲ ದೃಢಕಾಯರ ಸಂಶಯಭರಿತ ನೋಟ ಈಗಾಗಲೇ ತಮ್ಮ ಪ್ರೆಸೆನ್ಸ್ ತುಸು ಕಲರವ ಸೃಷ್ಟಿಸಿದೆಯೆಂಬುದನ್ನು ಮನನ ಮಾಡಿಸಿತ್ತು ಮಹೇಶನಿಗೆ.

ಹನ್ನೆರಡನೇ ನಿಮಿಷ ಕಳೆದು ಹದಿಮೂರರತ್ತ ಮುನ್ನಡೆಯಿತು ಗಡಿಯಾರದ ಮುಳ್ಳು. ರಸ್ತೆ, ಹೋಟೆಲ್, ಹೋಟೆಲ್, ರಸ್ತೆಗಳ ಕಡೆಗೇ ನೋಟ ಬದಲಾಯಿಸಿ ಡೆಸ್ಪರೇಟ್ ಆಗಿ ದಿಟ್ಟಿಸುತ್ತಿದ್ದ ಮಹೇಶನೆದೆ ಒಮ್ಮೆಲೇ ಒಂದು ಪಲ್ಟಿ ಹೊಡೆಯಿತು. ಏಕ್ ದಂ ಮೈ ಬಿಗಿಯಿತು.

"ವಾಟೀಸ್ ಮಹೇಶ್ ?" ಮೆಲುಧ್ವನಿಯಲ್ಲಿ ಕೇಳಿದಳು ಸೋಫಿಯಾ. ಅವನೆಲ್ಲಾ ಮೂಡ್‌ಗಳೂ ಚೆನ್ನಾಗಿ ಪರಿಚಯ ಅವಳಿಗೆ

ಜೋರುಗಂಟಲಲ್ಲಿ ಏನೇನೋ ಮಾತನಾಡುತ್ತಾ ವಿಕಟವಾಗಿ ನಗುತ್ತಾ ಅವರಿದ್ದ ಕಡೆಗೆ ಬರುತ್ತಿದ್ದರು ಡಝನ್ ದೃಢಕಾಯರು. ಅವರ ಹಾವಭಾವ ಗಮನಿಸಿಯೋ ತುಸು ಆತಂಕವಾಗಿದ್ದದ್ದು ಮಹೇಶನಿಗೆ ಬೀದಿ ದೀಪದ ಬೆಳಕಿನಲ್ಲಿ ಅವರ ಮುಖಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದ್ದ ಅವನಿಗೆ ತಾವು ಬೇಕಾಗಿದ್ದವನ ಸುಂದರವದನ ಮಾತ್ರ ದರ್ಶನವಿತ್ತಿರಲಿಲ್ಲ !

ಎಲ್ಲಿಲ್ಲದ ನೀರಸವಾವರಿಸಿತು ಅವನ ದೇಹವನ್ನ.

"ಪ್ಚ್...... ಕಮಾನ್ ಸೋಫಿ...... ಲೇಡಿಲಕ್ ಅದೇಕೋ ನಮಗೆ ಬೆನ್ನು ತಿರುಗಿಸಿಬಿಟ್ಟದ್ದಳೆ." ನಿರಾಸೆಯ ದನಿಯಲ್ಲಿ ನಿಧಾನವಾಗಂದ ಮಹೇಶ.

"ಮಹೇಶ್..... ಆ ಬಾಸ್ಟರ್ಡ್ ಈ ಮುದ್ದು ಮುಖಗಳ ನಡುವೆ ಇಲ್ಲವೆನ್ನುವೆಯಾ ?" ತುಸು ಸಂಶಯದೊಡನೆ ಕೇಳಿದಳು ಸೋಫಿಯಾ.

"ನೋಡೌಟ್ ಹನಿ..... ನನ್ನ ಕ್ಯಾಲಿಕ್ಯುಲೇಷನ್ ಪ್ರಕಾರ ಇಷ್ಟು ಬೇಗ ಅವನು ತನ್ನ ತಲೆ ಹೊರಕ್ಕಿಡಲಾರ! ಅವನನ್ನು ಹೇಗೆ ಬಯಲಿಗೆ ತರಬೇಕೆನ್ನುವುದು ನನಗೆ ಚೆನ್ನಾಗಿ ಗೊತ್ತು. ಕಮಾನ್... !" ಅವಳ ತೋಳಿಗೆ ತನ್ನ ಕೈಲಿಂಕ್ ಮಾಡಿ ಹಿಂದೆ ತಿರುಗಿ ಪಕ್ಕದಲ್ಲೇ ಚಾಚಿಸುತ್ತಿದ್ದ ಗಲ್ಲಿಯ ಕಡೆಗೆ ಹೆಜ್ಜೆ ಹಾಕಿದ.

ಐದನೇ ಹೆಜ್ಜೆ ಎತ್ತಿಡಹೋದಾಗ ಕೇಳಿ ಬಂದಿತ್ತೊಂದು ಕರಕು ಧ್ವನಿ.

"ಹಾಲ್ಟ್...... ಅಂಡ್ ಡೋಂಟ್ ಪ್ರೊಸೀಡ್ ! ಹೆಜ್ಜೆ ಮುಂದಿಟ್ಟರೆ ಪ್ರಾಣ ಉಳಿಯದು !"

ಅಕ್ಷರಶಃ ಆ ಆಜ್ಞೆ ಪಾಲಿಸಿದ ಮಹೇಶ ಎತ್ತಿದ್ದ ಹೆಜ್ಜೆ ಕೆಳಗಿಟ್ಟು

ನಿಧಾನವಾಗಿ ಹಿಂದೆ ತಿರುಗಿದ. ತಮ್ಮ ಪ್ರಾಣಕ್ಕೆರವಾಗಬಲ್ಲ ದಾದಾ ಯಾರೆಂದು ನೋಡುವ ಕುತೂಹಲ !

ಎದುರಿಗೆ ಬಂದು ನಿಂತನೊಬ್ಬ ಸಾಲಿಡ್ ಪರ್ಸನಾಲಿಟಿಯ ದೃಢಕಾಯ. ಮುಖ ಗುರುತಿಸಲೇ ಸಾಧ್ಯವಾಗದಷ್ಟು ಒತ್ತಾಗಿ ಬೆಳೆದಿರುವ ಗಡ್ಡ ಮೀಸೆ. ಕಣ್ಣುಗಳು ಮಾತ್ರ ಕೆಂಪು ಗೋಲಿಗಳು. ಅವೀಗ ಸೋಫಿಯಾಳನ್ನೇ ನುಂಗಿ ಹಾಕುವಂತೆ ನೋಡುತ್ತಿದ್ದವು.

ಅವನ ಕಣ್ಣುಗಳೇ ಏನು..... ಈ ವೇಳೆಗೆ ಅವರನ್ನು ಸುತ್ತುವರೆದ ದೃಢ ಕಾಯರ ಟೋಟಲ್ ನೋಟ..... ಅವಳ ಕಡೆಗೇನೇ !

ಆಫ್‌ಕೋರ್ಸ್..... ಎಂತಹವರ ಹೃದಯವೂ ಝಗಿಲ್ ಅನ್ನುವಂತಹ ಉಬ್ಬುತಗ್ಗುಗಳೊಡತಿಯೋ ಸೋಫಿಯಾ!

ಆದರೂ ಈ ಸಾರ್ವಜನಿಕ ಕಣ್ಣುಗಳ ಸ್ಟ್ರಿಪ್‌ಟೀಸ್ ಅವಳಿಗೆ ಬಹಳ ಮುಜುಗರವನ್ನೇ ತಂದಿತು. ಕಣ್ಣಂಚಿನಿಂದಲೇ ಮಹೇಶನನ್ನು ದಿಟ್ಟಿಸಿದಳು.

"ಯಾರು ನೀವು ? ಏನು ದೌರ್ಜನ್ಯ ?" ಪಕ್ಕಾ ಅಮಾಯಕನ ಪೋಜು ಕೊಡುತ್ತಾ ಧ್ವನಿಯಲ್ಲಿ ತುಸು ದಿಗಿಲೂ ಇಂಟ್ರಡ್ಯೂಸ್ ಮಾಡಿ ಕೇಳಿದ ಮಹೇಶ.

ಅವನ ಕಡೆ ಯಾರಿಗೂ ಗಮನವಿರಲಿಲ್ಲ ಇದುವರೆಗೆ. ಈಗ ಇದ್ದಾಪ್ ಸೊಳ್ಳೆಯೆಂಬಂತೆ ಎಲ್ಲರೂ ಒಟ್ಟಿಗೆ ಗುರಾಯಿಸಿದರು.

"ದೌರ್ಜನ್ಯ ! ಹ್ಹ..... ಹ್ಹ..... ಹ್ಹಾ..... ನಮ್ಮ ಏರಿಯಾಗೆ ಬಂದು ನಮಗೆ ರೋಫ್ ಹಾಕುವೆಯೇನೋ ಮಗನೇ ? ಯಾರು ಗೊತ್ತೆ ನಾವು? ದಾವೂದ್ ಹೆಸರು ಕೇಳಿರುವೆಯಾ ? ಅವನ ಗ್ಯಾಂಗ್‌ನವರು ನಾವು !" ಸಿಡಿಲಿನಂತೆ ಗುಡುಗಿದ ಒಬ್ಬ ದೃಢಕಾಯ.

"ಅವನೊಡನೇನು ಮಾತು! ಹಾಗೂ ಮಾತಾಡಬೇಕೆಂದಿದ್ದರೆ ಆಮೇಲೆ ನೋಡಿಕೊಳ್ಳೋಣ. ಮೊದಲು ಈ ಪಾರಿವಾಳವನ್ನು ಎತ್ತಿಕೊಂಡು ನಡೆಯಿರಿ. ಮಿಸ್ಟರ್ ಇಂಡಿಯಾದ ಶ್ರೀದೇವಿಯಂತೆ ಹೇಗೆ ಕಳಿತ ಹಣ್ಣಿನಂತಿದ್ದಾಳೆ ನೋಡಿದಿರಾ ?" ಲೊಟ್ಟೆ ಹಾಕುತ್ತಾ ಹೇಳಿದ ಇನ್ನೊಬ್ಬ ದೃಢಕಾಯ, "ನನಗಂತೂ ಅವಳನ್ಯಾವಾಗ ಹಿಂಡಿ ಹಿಪ್ಪೆ ಮಾಡುವೆನೋ ಅನ್ನಿಸುತ್ತಿದೆ ?"

ಅದುಮಿಟ್ಟ ಸ್ಪ್ರಿಂಗ್‌ನಂತೆ ಬಿಗಿದುಕೊಂಡವು ಮಹೇಶನ ಬಾಹುಗಳು ಆ ಮಾತುಗಳು ಕಿವಿಗೆ ಸೋಕುತ್ತಿದ್ದಂತೆ. ಎಳೆದೊಂದು ಡಿಚ್ಚಿ ಹೊಡೆಯುವ ಆಕಾಂಕ್ಷೆಗೆ ಅತಿ ಕಷ್ಟದೊಡನೆ ಅಣೆಕಟ್ಟು ಹಾಕಿಕೊಂಡು ಸೋಫಿಯಾಳ ಕಡೆ ನೋಡಿದ.

ಬೀಟ್‌ರೂಟ್‌ನಂತಾಗಿತ್ತು ಅವಳ ಮುಖ. ಆವೇಶದೊಡನೆ ಎಗರಿ ಬೀಳುತ್ತಿತ್ತು ಎದೆ. ರಾಕ್ಷಸರ ರಕ್ತ ಹರಿಸಲು ಸನ್ನದ್ಧಳಾಗಿ ಅವತರಿಸಿದ ಮಹಾಕಾಳಿಯಂತೆ ಈ ಆಧುನಿಕ ರಕ್ಕಸರ ತಲೆ ತರಿಯಲು ಆಕ್ಷನ್‌ಗಿಳಿಯುವ ತವಕ ಕಣ್ಣುಗಳಲ್ಲಿ ಸ್ಪಷ್ಟವಾಗಿ ಕಾಣಬಹುದಿತ್ತು.

ಕಾಮ್ ಆಗಿರುವಂತೆ ಅವಳಿಗೆ ಕಣ್ಣಿನಲ್ಲೇ ಸೂಚಿಸಿದ ಮಹೇಶ. ಅಗ್ನಿ ಪರ್ವತದಂತೆ ಸ್ಫೋಟಿಸಲು ಸಿದ್ಧವಾಗುತ್ತಿದ್ದ ಸೋಫಿಯಾ ಹಾಗೆಯೇ ಶಾಂತಳಾದಳು.

"ಯಾರು ನೀವು ? ಇಲ್ಲೇನು ಮಾಡುತ್ತಿದ್ದೀರಿ ?" ಗದರಿಸಿ ಕೇಳಿದ ಗುಂಪಿನಲ್ಲಿದ್ದ ಒಬ್ಬ ವೃದ್ಧಕಾಯ.

ಅವನು ಬಾಯಿ ಬಿಟ್ಟೊಡನೆ ಕಳ್ಳಭಟ್ಟಿ ಸಾರಾಯಿ ವಾಸನೆ ಗುಪ್ಪೆಂದು ನುಗ್ಗಿಬಂತು ಮೂಗಿನತ್ತ. ಹೊಟ್ಟೆಯೊಳಗಿನ ವಸ್ತುಗಳಲ್ಲೂ ಒಂದು ರೌಂಡ್ ತಿರುವಿದಂತೆ ಫೀಲಾದ ಮಹೇಶ.

"ಕ್ಷಮಿಸಿ ಸಾರ್......ನಮ್ಮ ಸೋದರತ್ತೆ ಮನೆ ಇದೇ ಏರಿಯಾದಲ್ಲಿದೆ. ಕತ್ತಲಾದ ಕಾರಣ ಮನೆ ಗುರುತಿಸಲಾಗದೆ ಸುಮ್ಮನೆ ರೌಂಡ್ ಹೊಡೆಯುತ್ತಿದ್ದೇವೆ......" ಬಾಯಿಗೆ ಬಂದ ರೀಲ್ ಬಿಟ್ಟ ಮಹೇಶ. ಅವಶ್ಯಕ ರಗಳೆ ಮಾಡಿಕೊಳ್ಳುವ ಆಸಕ್ತಿಯಿಲ್ಲ ಅವನಿಗೆ.

"ನಿಮ್ಮ ಸೋದರತ್ತೆಯ ಹೆಸರು!" ಕೇಳಿದ ಆ ವೃದ್ಧಕಾಯ.

"ರಂಗೂನ್ ರಾಜಮ್ಮ !" ತಡಬಡಿಸದೆ ಉತ್ತರವಿತ್ತ ಮಹೇಶ.

ಅದಕ್ಕೇನೋ ಕಾಮೆಂಟ್ ಮಾಡಲು ಇನ್ನೊಬ್ಬ ವೃದ್ಧಕಾಯ ತುಟಿ ತೆರೆಯಹೋದ. ಅವನ ಬಾಯಿಂದೊಂದು ಮಾತು ಹೊರಬೀಳುವ ಮೊದಲೇ ಆತುರಾತುರವಾಗಿ ಅಲ್ಲಿಗೋಡಿ ಬಂದನೊಬ್ಬ ವ್ಯಕ್ತಿ ಬರುತ್ತಿದ್ದಂತೆ ಏಕ್‌ದಂ ರಾಂಗಾಗಿಬಿಟ್ಟ.

"ಕತ್ತೆ ಕಾಯುತ್ತಿದ್ದೀರಾ ಇಲ್ಲಿ ? ನಿಮಗೋಸ್ಕರ ದಾವೂದ್‌ಸಾಬ್

ಕಣ್ಣಿಗೆಣ್ಣೆ ಬಿಟ್ಟುಕೊಂಡು ಕಾಯುತ್ತಿದ್ದಾರೆ. ಇನ್ನೊಂದು ನಿಮಿಷ ತಡ ಮಾಡಿ ಹೋದಿರೋ......ಚರ್ಮ ಸುಲಿದು ಬಿಡುತ್ತಾರೆ..." ಹೂಂಕರಿಸಿದ.

ಆ ಮಾತುಗಳ ಕೇಳುತ್ತಿದ್ದಂತೆ ಹುಡುಗಿಯ ಮೇಲಿನ ಆಸೆ ದಿಢೀರನೆ ಕಮರಿಹೋಯಿತು ದೃಢಕಾಯರಿಗೆ. "ಬನ್ನಿ ಬನ್ನಿ......ಬೇಗ ಹೋಗೋಣ. ದಾವೂದ್‌ಗೆ ಕೈ ಎತ್ತಲು ಕಾರಣವೇ ಬೇಕಿಲ್ಲ. ಇನ್ನು ಕಾರಣ ಸಿಕ್ಕಿಬಿಟ್ಟರಂತೂ ಕತ್ತರಿಸಿ ಹಾಕಿಬಿಡುತ್ತಾನೆ !" ಎಂದು ಹಿಂದೆ ತಿರುಗಿ ಓಡುವ ನಡಿಗೆಯಲ್ಲಿ ಜಾಗ ಖಾಲಿಮಾಡಿಬಿಟ್ಟರು.

ಮೈ ಕೈಗೆ ಎಕ್ಸರ್‌ಸೈಜ್ ಕೊಡಲೇಬೇಕಾದ ಅನಿವಾರ್ಯ ಪರಿಸ್ಥಿತಿ ಸೃಷ್ಟಿಯಾಗಿಬಿಟ್ಟಿತೆಂಬ ಆತಂಕದೊಡನಿದ್ದ ಮಹೇಶ ನೆಮ್ಮದಿಯ ಉಸಿರೊಂದನ್ನು ಹೊರಚೆಲ್ಲಿ ಮನದಲ್ಲೇ ಅದಕ್ಕೆ ಕಾರಣಕರ್ತನಾದ ದೃಢಕಾಯನಿಗೆ ಅಭಿನಂದನೆಗಳನ್ನರ್ಪಿಸಿದ. ಹಾಗೆಯೇ ಅವರು ಹೋದ ದಿಕ್ಕಿನತ್ತಲೇ ಸಾಗಿತವನ ನೋಟ.

ಇರಾನಿ ಹೋಟೆಲಿನ ಹಿಂಬದಿಗಿದ್ದ, ಹೋಟೆಲ್‌ಗೆ ಅಂಟಿಕೊಂಡಿರುವಂತೆ ಕಾಣುತ್ತಿದ್ದ ಹೆಂಚಿನ ಮನೆಯೊಳಕ್ಕೆ ನುಸುಳಿದ್ದರು ದೃಢಕಾಯರು.

"ಆಸ್ಪತ್ರೆ ಸೇರುವುದನ್ನು ಅದೃಷ್ಟವಶಾತ್ ತಪ್ಪಿಸಿಕೊಂಡರು ಬಾಸ್ಟರ್ಡ್ಸ್ ! ಈಗೇನು ನಮ್ಮ ಪ್ರೋಗ್ರಾಂ ಮಹೇಶ ? ವಾಪಸ್ಸು ಹೋಗೋಣವೇ ಅಥವ ಏನಾದರೆಂದು ಫಲಿತಾಂಶ ಸಿಗುವವರೆಗೆ ಇಲ್ಲೇ ಠಳಾಯಿಸೋಣವೇ ?" ಕೇಳಿದಳು ಸೋಫಿಯಾ.

"ಇಲ್ಲೇ ರೌಂಡ್ ಹೊಡೆಯುವುದರಿಂದೇನೂ ಪ್ರಯೋಜನವಿಲ್ಲ ಅನ್ನಿಸುತ್ತದೆ ಸೋಫಿಯಾ......ನಮ್ಮ ಚಲವಲನ ಬಯಲಿಗೆ ಬಂದಷ್ಟು ಆ ಬದ್ಮಾಷ್ ಅಂಡರ್‌ಗ್ರೌಂಡ್ ಆಗುವ ಸಾಧ್ಯತೆ ಹೆಚ್ಚು. ಅವನು ಸರಿಯಾಗಿ ನಮ್ಮ ದೃಷ್ಟಿಗೆ ನಿಲುಕುವವರೆಗೆ ಅಂದರೆ ಅವನ ವೇರ್‌ಎಬೌಟ್ಸ್ ಬಗ್ಗೆ ನಮಗೆ ಸೂಕ್ತ ಮಾಹಿತಿ ಸಿಗುವವರೆಗೆ ನಾವು ಆತುರಪಡುವುದು ಸಲ್ಲ." ಅಂದ ಮಹೇಶ.

"ರೈಟ್ ಸರ್. ಹಾಗಾದರೆ ತಕ್ಷಣದ ಕೆಲಸ ?" ಹುಬ್ಬು ಕುಣಿಸಿದಳು ಸೋಫಿಯಾ.

ಉತ್ತರಿಸಲಿಲ್ಲ ಮಹೇಶ ತಕ್ಷಣ. ಇನ್‌ಫ್ಯಾಕ್ಟ್ ಅದೇ ವಿಷಯದ ಬಗ್ಗೆಯೇ ಓವರ್ ಟೈಂ ಮಾಡುತ್ತಿತ್ತು ಅವನ ಮಿದುಳು.

ಹೀಗೆ ಬೀದಿ ಬೀದಿ ಸರ್ವೆ ಹೊಡೆಯುವುದರ ಬದಲು ತಮ್ಮನ್ನೀಗ ಅಟಕಾಯಿಸಿದ ದೃಢಕಾಯರ ಬೆನ್ನ ಬಿದ್ದು ಈ ದಾವೂದ್‌ಮಿಯಾನ ಸೆಟಪ್ ಏನೆಂದು ಅರಿತರೆ ತಾವು ಹುಡುಕುತ್ತಿರುವ ವ್ಯಕ್ತಿಯ ಕ್ಲೂ ಏನಾದರೂ ಸಿಗುವ ಸಾಧ್ಯತೆಯಿರಬಹುದೆಂಬ ಯೋಚನೆ ಬಂತು. ಗುಡ್.... ಅದು ಸರಿಯಾದ ನಡೆ! ತಕ್ಷಣ ನಿರ್ಣಯಕ್ಕೆ ಬಂದು ಸೋಫಿಯಾ ಕೈ ಹಿಡಿದು ದೃಢಕಾಯರೋದ ಕಡೇ ಹೆಜ್ಜೆ ಹಾಕಿದ. ಅವನ ಮನದಿಂಗಿತವನ್ನು ಅರಿತು ಮುಗುಳ್ನಕ್ಕಳು ಸೋಫಿಯಾ. ತನ್ನ ಹಿಂದಿ ಹಿಪ್ಪೆ ಮಾಡುವ ಆಶಯ ವ್ಯಕ್ತಪಡಿಸಿದವನ ಮುಖ ಪಚಡಿ ಮಾಡಬೇಕೆನ್ನುವ ಆಶಯ–ಚಾನ್ಸ್ ಸಿಕ್ಕದೆ–ಮನದೊಂದು ಮೂಲೆಯಲ್ಲಿ ಇನ್ನೂ ಕುಳಿತೇ ಇತ್ತು ಅವಳಿಗೆ!

ಅಲ್ಲಿಯವರೆಗೆ ಮನೆಯೊಂದರ ಕತ್ತಲ ಮರೆಯಲ್ಲಿ ನಿಂತು ಅವರಿಬ್ಬರನ್ನೇ ಗಮನಿಸುತ್ತಿರುವ ಎರಡು ಜೊತೆ ಕಂಗಳು ಅವರು ಮುನ್ನಡೆದ ಸ್ವಲ್ಪ ಹೊತ್ತಿನ ನಂತರ ತಾವೂ ಮುಂದುವರೆದು ಅವರ ಹೆಜ್ಜೆಗಳನ್ನೇ ಟ್ರ್ಯಾಕ್ ಮಾಡತೊಡಗಿದವು!

ಮುಂದೆಮುಂದೆ ಹೋಗುತ್ತಿದ್ದರೂ ಅದೇನೋ ನೋಡಿ ಫೀಲಿಂಗ್ ಶುರುವಾಗಿತ್ತು ಮಹೇಶನ ಅಂತರಂಗದೊಳಗೆ. ಈ ಸೇಟಪ್‌ನೊಳಾಗುವುದೋ ಅರ್ಥವಾಗದ ರಹಸ್ಯ ಅಡಗಿದೆಯೆಂಬ ದಟ್ಟ ಅನುಮಾನದ ಛಾಯೆಮನದಲ್ಲಿ. ವೈಲಿ ದೂರದಿಂದಲೇ ಅಪಾಯವನ್ನು ಗ್ರಹಿಸಿ ರೆಡ್ ಸಿಗ್ನಲ್ ಫ್ಲಾಷ್ ಮಾಡುವ ಆರನೇ ಇಂದ್ರಿಯ ಬೇರೆ ಇದ್ದಕ್ಕಿದ್ದಂತೆ ಬೊಂಬ್ಡಾ ಹೊಡೆಯತೊಡಗಿತ್ತು. ಯಾವ ರೂಪದಲ್ಲಿ... ಯಾವ ರೂಪದಿಂದ ಅಪಾಯದ ಪಿಡುಗು ಮೈ ಮೇಲೆರಗಲಿದೆ ಎಂಬುದನ್ನೆಷ್ಟು ಥಿಂಕ್ ಮಾಡಿದರೂ ಕ್ಯಾಚ್ ಮಾಡಲಾಗುತ್ತಿಲ್ಲ ಮಹೇಶನಿಗೆ

ತಮ್ಮನ್ನು ಫಾಲೋ ಮಾಡುತ್ತಿರುವ ಎರಡು ಜೊತೆ ಕಂಗಳ ವಿಷಯ ಅವನರಿವಿಗೆ ಬಂದಿದ್ದರೆ..... ಮುಂದಿನ ಎಷ್ಟೋ ತಾಪತ್ರಯಗಳನ್ನವನು ಫೇಸ್ ಮಾಡುವ ಅವಶ್ಯಕತೆಯೇ ಬರುತ್ತಿರಲಿಲ್ಲ ಎನ್ನುವುದು ಮಾತ್ರ ನಿಜಕ್ಕೂ ನಿಜ!

ಇರಾನಿ ಹೋಟೆಲ್ ಹಿಂಬದಿಯ ಮನೆಯನ್ನು ಈ ವೇಳೆಗೆ ಸಮೀಪಿಸಿದ್ದರು ಮಹೇಶ, ಸೋಫಿಯಾ ಕತ್ತಲಲ್ಲೊಂದೆಡೆ ನಿಂತು ಪರಿಸರವನ್ನೊಮ್ಮೆ ಗಮನವಿಟ್ಟು ಪರಿಶೀಲಿಸಿದರು.

ಜನರ ಸುಳಿವೇ ಇಲ್ಲ! ದೂರದಿಂದೆಲ್ಲೊ ಕೇಳಿಬರುತ್ತಿರುವ ನಾಲ್ಕೈದು ಬೀದಿನಾಯಿಗಳ ಕರ್ಕಶ ರಾಗಲಾಪನೆಯ ವಿನಹ ವಾತಾವರಣದಲ್ಲಿ ಇನ್ನಾವುದೆ ಅಸಹಜ ಶಬ್ದವಿಲ್ಲ.

ಅಭ್ಯಾಸಬಲದಂತೆ ಬಲಗೈ ಎಡಕಂಕುಳಲ್ಲಿ ಚಾಚಿದ ಮಹೇಶ. ಬಿಲ್-ಇನ್-ಹೋಲ್‌ಸ್ಟರ್‌ನಲ್ಲಿರುವ ಟೈಗರ್ ಪಿಸ್ತೂಲು 'ರಾಣಿ'ಯ ತಣ್ಣನೆಯ ಹಿಡಿ ಮಾಮೂಲಿನಂತೆ ಅಂಗೈಗೆ ಸೋಕಲಿಲ್ಲ! ಹೋಲ್‌ಸ್ಟರ್ ಇದ್ದರೆ ತಾನೆ 'ರಾಣಿ'? ಓ ಗಾಡ್......ಈಗ ತನ್ನ ಮೈಮೇಲೆ 'ರಾಜ', 'ರಾಣಿ' ಎರಡೂ ಇಲ್ಲ! ರಜಾದಿನಗಳನ್ನನುಭವಿಸಲು ಚಾನ್ಸ್ ದೊರಕದೊಡನೆ ಸೋಫಿಯಾಳ ಜೊತೆ ಬಾಂಬೆಗೆ ಓಡೋಡಿ ಬಂದಿದ್ದ ಅವನು. ರಿಲ್ಯಾಕ್ಸ್ ಆಗಲು ಬಂದಿರುವಾಗ ಅವೇಕೆ ಎಂದು ದೆಹಲಿಯಲ್ಲೇ ತನ್ನ ಅವಿರತ ಸಂಗಾತಿಗಳನ್ನು ಬಿಟ್ಟು ಬಂದದ್ದು ಈಗ ಬೆರಳು ಕಚ್ಚುವ ಪರಿಸ್ಥಿತಿಯನ್ನು ನಿರ್ಮಿಸಿತ್ತು.

ಅತ್ತಿತ್ತ ನೋಡಿ ನೆಲದ ಮೇಲಿದ್ದ ನಾಲ್ಕು ಸುಮಾರು ಗಾತ್ರದ ಕಲ್ಲುಗಳನ್ನಾಯ್ದು ಕೈನಲ್ಲಿಡಿದು ಅಡ್ಡಾದಿಡ್ಡಿ ಬೆಳೆದಿದ್ದ ಹೂವಿನ ಗಿಡಗಳನ್ನು ತುಳಿಯುತ್ತಾ ನಿಶ್ಶಬ್ದ ನಡಿಗೆಯೊಡನೆ ಸಾಗಿ ಹೆಂಚಿನ ಮನೆಯ ಹಿಂಭಾಗದ ಕಿಟಕಿಯ ಬಳಿಗೆ ಸೇರಿಕೊಂಡರು ಮಹೇಶ, ಸೋಫಿಯಾ. ಅಲ್ಲಿನ ಪರಿಸ್ಥಿತಿಯನ್ನೊಮ್ಮೆ ಅವಲೋಕಿಸಿ ನಿಧಾನವಾಗಿ ಕಿಟಕಿಯ ಒಂದು ಬಾಗಿಲನ್ನು ತುಸುವೇ ತೆರೆದು ಒಳಕ್ಕಿಣಿಕಿದ ಮಹೇಶ.

ದೊಡ್ಡ ಕೊಠಡಿ ಅದು. ಡಝನ್ ದೃಢಕಾಯರಿದ್ದರು ಒಳಗೆ ಅವರೆದುರಿಗೆ ನಿಂತು ನುಂಗುವಂತೆ ನೋಡುತ್ತಿದ್ದ ದಾವೂದ್‌ಮಿಯಾ.

ನಲವತ್ತೈದರೊಳಗೇ ವಯಸ್ಸು. ಐದೂಮುಕ್ಕಾಲಡಿಯ ಸಾಲಿಡ್ ಪರ್ಸ ನಾಲಿಟಿ. ಕಬ್ಬಿಣದ ತೊಲೆಗಳಂತಿರುವ ಕೈಕಾಲುಗಳು, ಬಲಿಷ್ಠ ಶರೀರ. ಸಿಡುಬಿನ ಕಲೆಗಳಿಂದ ತುಂಬಿಹೋಗಿರುವ ಮುಖ ಮಾತ್ರ ನೋಡಲು ಮಹಾ ಘೋರ. ಅಗಲ ಹೂಗಳ ಆ ಡಿಸೈನ್‌ನ ಲುಂಗಿಯ ಮೇಲೆ ಅಂಗೈಯಗಲದ ಬೆಲ್ಟ್ ಕಟ್ಟಿ ರೌಂಡ್‌ನೆಕ್ ಬನಿಯನ್ ತೊಟ್ಟಿದ್ದ ಅವನ ತಲೆಗೂದಲು ಭುಜದವರೆಗೆ ತೂಗಾಡುತ್ತಿತ್ತು.

ಒಮ್ಮೆಲೇ ನಿಶ್ಶಬ್ದವನ್ನು ಕಲಕುತ್ತಾ ಯಾರದೋ ಮಾತುಗಳು ಕೇಳಿ ಬಂದಾಗ ಕಿವಿ ನಿಮಿರಿಸಿದ ಮಹೇಶ.

"ಏನ್ರೋ ಹೈವಾನ್‌ಗಳಾ......ನಾನು ಹೇಳಿದ್ದೇನು......ನೀವು ಮಾಡು ತ್ತಿರುವುದೇನು ? ತಿಂದು ಕುಡಿದು ನಿಮ್ಮ ತಿಮಲುಗಳನ್ನೆಲ್ಲಾ ತೀರಿಸಿಕೊಂಡು ಈಗ ಇಲ್ಲಿ ಮುಖ ತೋರುತ್ತಿರುವಿರಾ ?" ದಾವೂದ್ ಧ್ವನಿ ಅದು. ಬಹಳ ಗಂಭೀರವಾಗಿತ್ತು.

"ಇಲ್ಲಿ ಬಾಸ್.....ನಾವು...... .." ಏನೋ ವಿವರಿಸ ಹೋದ ಒಬ್ಬ ದೃಢಕಾಯ.

"ಷಟಪ್ ಬಾಸ್ಟರ್ಡ್ ! ನನಗೇ ಎದುರುತ್ತರ ಕೊಡುವ ಮಟ್ಟಕ್ಕೆ ಬಂದೆಯಾ ?" ಎಂದು ಗರ್ಜಿಸುತ್ತಾ ಒಂದೇ ಹೆಜ್ಜೆಯಲ್ಲಿ ಆ ದೃಢಕಾಯನನ್ನ ಸಮೀಪಿಸಿದ ದಾವೂದ್.

ಗಂಟಲಲ್ಲಿ ಸೀಸದ ಗುಂಡೊಂದು ಸಿಕ್ಕಿಕೊಂಡಂತೆ ಫೀಲಾದ ಆ ದೃಢ ಕಾಯ. ಎಲ್ಲರ ಮೇಲಿನ ಕೋಪ ತನ್ನೊಬ್ಬನ ಮೇಲೇ ತೋರಿಸುವಂತೆ ಕಾಣುತ್ತಾನೆ ಈ ರಾಕ್ಷಸ ಎಂಬ ಯೋಚನೆ ಮಾಡಿದ ಮಾತ್ರಕ್ಕೇ ಬೆವರಿ ನೊರೆಯಾಯಿತು ಶರೀರ ! ನಾಲಿಗೆಯಲ್ಲಂತೂ ತೇವವೇ ಇಲ್ಲ.

"ನನ್ನ ಕೈಕೆಳಗೆ ಬದುಕಿರಬೇಕಾದ ಕಂತ್ರಿನಾಯಿ _ ನನ್ನೆದುರಿಗೆ ಎದೆ ಸೆಟೆಸಿ ನಾಲಿಗೆ ಹರಿಬಿಡುವೆಯಾ ?" ಎಂದು ಮತ್ತೊಮ್ಮೆ ಗರ್ಜಿಸಿದ ದಾವೂದ್.

ಮರುಕ್ಷಣ ಅಪರಿಮಿತ ವೇಗದೊಡನೆ ಮೇಲೆದ್ದಿತ್ತು ಅವನ ಬಲಗಾಲು. ಕಿಟಾರನೆ ಕಿರುಚಿಕೊಂಡ ಆ ದೃಢಕಾಯ. ಸರಿಯಾಗಿ ಅವನೆದೆಗಪ್ಪಳಿಸಿತ್ತು ದಾವೂದ್‌ನ ಪಾದ. 'ಧಪ್' ಎಂದು ಬಂದಿತ್ತು ಶಬ್ದ ಗೋಡೆಗೆ ದೃಢಕಾಯನ

ತಲೆ ತಾಗಿದ ಬಿರುಸಿಗೆ. ಸ್ಕಲ್‌ನಲ್ಲಿ ಹೇರ್‌ಲೈನ್ ಕ್ರಾಕ್ ಆಗಿ ದಾರದೆಳೆಯಷ್ಟು ರಕ್ತ ಹೊರಹನಿಯತೊಡಗಿತು. ಆ ಜಾಗವನ್ನು ಬಿಗಿಯಾಗಿ ಅದುಮಿ ಹಿಡಿದು ನೆಲಕ್ಕೆ ಕುಸಿದು ಸಣ್ಣ ದನಿಯಲ್ಲಿ ವಿಲಪಿಸತೊಡಗಿದ ಆ ದೃಢಕಾಯ. ಜೋರಾಗಿ ವಿಲಪಿಸಿದರೆ ಇನ್ನೊಂದಿಕ್ಕಾನೆಂಬ ಭಯ !

ಆ ದೃಶ್ಯವನ್ನು ನೋಡುತ್ತಿದ್ದಂತೆ ತಲೆಗೇರಿದ್ದ ನಿಶಾ ಸಂಪೂರ್ಣ ಇಳಿದು ಹೋಗಿತ್ತು ಮಿಕ್ಕ ದೃಢಕಾಯರಿಗೆ !

ಆಗಲೇ ಹೊರಗಿನಿಂದೊಬ್ಬ ದೃಢಕಾಯ ಆತುರವಾಗಿ ಒಳಕ್ಕೆ ನುಗ್ಗಿ ಬಂದ. ಏನು ವಿಷಯ ಅನ್ನುವಂತೆ ಹುಬ್ಬೆಗರಿಸಿ ಅವನನ್ನೇ ತೀಕ್ಷ್ಣವಾಗಿ ನೋಡಿದ ದಾವುದ್.

"ಬಾಸ್......ಅರ್ಧರಾತ್ರಿ ವೇಳೆಯಲ್ಲಿ ಸುಂದರ ಯುವತಿಯೊಡಗೂಡಿ ಒಬ್ಬ ಯುವಕ ನಮ್ಮ ಏರಿಯಾದಲ್ಲಿ ಸರ್ವೆ ಹೊಡೆಯುತ್ತಿದ್ದ. ಇನ್ನೂ ಇಲ್ಲಿಂದ ಜಾಗ ಖಾಲಿ ಮಾಡಿದಂತಿಲ್ಲ ನಮ್ಮವರು ಅವರನ್ನು ಅಡ್ಡ ಹಾಕಿ ಮಾತಾಡಿಸಿಯೇ ಇತ್ತಕಡೆಗೆ ಬಂದದ್ದು." ವಿವರಿಸಿದ ದೃಢಕಾಯ.

"ಐ ಸೀ......!" ಸೀರಿಯಸ್ ಆಗಿ ತಲೆ ಕುಣಿಸಿದ ದಾವೂದ್.

ಆ ವಿಷಯ ನಿಜ ಬಾಸ್ !" ಗುಂಪಿನಿಂದ ಒಂದು ಧ್ವನಿ ಒತ್ತು ಕೊಟ್ಟಿತು.

"ಯಾರವರು ?"

"ಗೊತ್ತಿಲ್ಲ ಬಾಸ್......"

ಆ ದೃಢಕಾಯ ಇನ್ನೂ ಏನೋ ಹೇಳುವುದರೊಳಗೆ ಬಲಮುಷ್ಟಿ ಬಿಗಿದು ರಪ್ಪನೆ ಅವನ ಮುಖಕ್ಕೆ ಗುದ್ದಿದ್ದ ದಾವೂದ್. ವಿಕೃತವಾಗಿ ಕೂಗಿ ಗಿರ್ರನೆ ತಿರುಗುತ್ತಾ ಹೋಗಿ ಒಂದು ಮೂಲೆಯಲ್ಲಿ ಬಿದ್ದ ಆ ದೃಢಕಾಯನ ಮುಖದ ತುಂಬಾ ರಕ್ತ !

ಗಿರ್ರನೆ ತಮ್ಮ ಕಡೆ ದಾವೂದ್ ತಿರುಗಿದೊಡನೆ ಪ್ಯಾನಿಕ್‌ನಿಂದ ಎರಡೆಜ್ಜೆ ಹಿಂದೆ ಸರಿದರು ಮಿಕ್ಕವರು. "ಬಾಸ್..... ಬಾಸ್......ಇಲ್ಲೆಲ್ಲೋ ಅವರ ಸೋದರತ್ತೆಯ ಮನೆಯಿದೆಯೆಂದು ಹುಡುಕಾಡುತ್ತಿದ್ದರಷ್ಟೇ !" ಒಬ್ಬ ಬಾಯ್ಬಿಟ್ಟ.

"ಸೋದರತ್ತೆ ? ಯಾರಂತೆ ಆ ಬಿಕನಾಸಿಗಳ ಸೋದರತ್ತೆ ?"

"ರಂಗೂನ್ ರಾಜಮ್ಮ !"

ಆ ಹೆಸರು ಕೇಳಿದೊಡನೆ ಮಹೇಶನ ಎದೆಗೆ ಛಳುಕು ಹೊಡೆದಂತಾಯಿತು. ಸೋಫಿಯಾ ಮುಖವೂ ಟೆನ್ಷನ್‌ನಿಂದ ಬಿಗಿಯಿತು.

ಆ ಸಮಯಕ್ಕೆ ಸರಿಯಾಗಿ ಇಬ್ಬರೂ ನಿರೀಕ್ಷಿಸಿಯೇ ಇರದ ಇನ್ನೊಂದು ಆಪತ್ತು ಬಂಡೆಯಂತೆ ಮೇಲೆರಗಿತ್ತು !

ಅಕಸ್ಮಾತ್ ಕಿಟಕಿಯ ಕಡೆಗೆ ನೋಟ ಹರಿಸಿದ್ದ ಒಬ್ಬ ದೃಢಕಾಯ ಮುಂದಿನ ಕ್ಷಣ ಆಘಾತಕ್ಕೊಳಗಾದವನಂತೆ ಸ್ತಬ್ಧನಾಗಿಬಿಟ್ಟ. ಅಯಾಚಿತವಾಗಿ ತೆರೆದುಕೊಂಡಿತ್ತವನ ನೋಟದಳತೆಗೆ ಸಿಕ್ಕಿದ ಮಹೇಶ್ ಸೊಫಿಯಾರನ್ನು ಕಂಡು,

"ಅಯ್ಯಯ್ಯೋ..... ಆ ಕಿಟಕಿಯ ಬಳಿ ಯಾರೋ ಇದ್ದಾರೆ ?" ಸೈರನ್‌ಗಿಂತಲೂ ಟಾಪ್ ಪಿಚ್‌ನಲ್ಲಿ ಅರಚಿಕೊಂಡ.

ಮರುಕ್ಷಣ ಪ್ರಶಾಂತ ಕೊಳದೊಳಕ್ಕೆ ಕಲ್ಲು ಬಿದ್ದಂತಾಯಿತು ಅಲ್ಲಿನ ಪರಿಸರ.

"ಹೋಗಿ......ಅವರನ್ನು ತಂದು ಹಾಕಿ !" ಆಕ್ರೋಶದೊಡನರಚಿದ ದಾವುದ್.

ಸರಸರ ಹೊರಕ್ಕೋಡಿದರು ದೃಢಕಾಯರು.

"ಸೋಫಿ......ಮೂವ್‌ಫಾಸ್ಟ್ !" ಅದೃಷ್ಟ ಇಷ್ಟೊಂದು ಹೀನಾಯ ಸ್ಥಿತಿಗೆ ನಮ್ಮನ್ನು ದೂಡುತ್ತದೆಂದುಕೊಂಡಿರಲಿಲ್ಲ !" ಅನ್ನುತ್ತಾ ಕೈನಲ್ಲಿದ್ದ ಕಲ್ಲುಗಳನ್ನು ಹಿಡಿಬರುತ್ತಿದ್ದ ದೃಢಕಾಯರ ಕಡೆಗೊಗೆದು ಸೋಫಿಯಾಳ ಕೈ ಹಿಡಿದು ಹಿಂದೆ ತಿರುಗಿ ಫಾಸ್ಟಾಗಿ ದೌಡೆತ್ತುವ ಪ್ರಯತ್ನ ಮಾಡಿದ.

ಹತ್ತೆಜ್ಜೆ ಮುನ್ನುಗ್ಗುವಷ್ಟರಲ್ಲೇ ರಾಡ್‌ಗಳನ್ನು ಹಿಡಿದ ಇಬ್ಬರು ದೃಢಕಾಯಕರು ಎದುರಾದರು !

"ಸೋಫಿ .....ಎಡಕ್ಕಿರುವವ ನಿನ್ನ ಬಲಿ !" ತುಟಿಯಂಚಿನಿಂದ ಹೇಳುತ್ತಿದ್ದಂತೆ ಬಲಕ್ಕಿದ್ದವನನ್ನು ಅಟ್ಯಾಕ್ ಮಾಡಿದ ಮಹೇಶ.

ಜುಂಯ್ಯನೆ ಪಕ್ಷಿಯಂತೆ ಗಾಳಿಯಲ್ಲಿದ್ದ ಅವನನ್ನೇ ಅಚ್ಚುಕಟ್ಟಾಗಿ ಅನುಕರಿಸಿದಳು ಸೋಫಿಯಾ.

ಆದರೆ ಈ ಸಲವೂ ದಾರುಣವಾಗಿ ವಿಫಲವಾಗಿತ್ತು ಅವರ ಅಟಾಕಿಂಗ್ ಪ್ಲಾನ್ಸ್ !

ನೆಲಬಿಟ್ಟು ಎರಡಡಿ ಮೇಲಕ್ಕವರ ದೇಹಗಳು ಪ್ರಯಾಣಿಸುವಷ್ಟರಲ್ಲೇ ರಪರಪನೆ ಕಬ್ಬಿಣದ ರಾಡ್‌ಗಳು ಅವರ ಹಿಂತಲೆಗಳ ಮೇಲೆ ಗಟ್ಟಿಸಿದ್ದವು. ಹಿಂಬದಿಯಿಂದ ಅಮರಿಕೊಂಡಿದ್ದ ದೃಢಕಾಯರ ಪರಾಕ್ರಮದ ಫಲಿತಾಂಶ !

ಇಬ್ಬರ ತಲೆಗಳೂ ಸೀಳಿ ರಕ್ತ ಕೊಟಕೊಟ ಹೊರಹನಿಯ ತೊಡಗಿದಂತೆ ಕಣ್ಣುಗಳ ಮುಂದೆ ಕಪ್ಪುತೆರೆ ನೆಲದಿಂದ ಬಾನವರೆಗೆ ವ್ಯಾಪಿಸಿದಂತೆ ಫೀಲಾಗಿ ಸ್ಪೃಹೆ ಕಳೆದುಕೊಂಡು ಧೊಪ್ಪನೆ ನೆಲಕ್ಕುರುಳಿದರು.

“ಇಬ್ಬರನ್ನು ಒಳಗೆ ಬಂಧಿಸಿಡಿ. ಆಮೇಲೆ ಬಂದು ವಿಚಾರಿಸಿಕೊಳ್ಳುತ್ತೇವೆ.” ಎಂದು ಸೂಚನೆಗಳನ್ನು ನೀಡಿ ಹೊರ ನಡೆದ ದಾವೂದ್.

## ೨

‘ಡಮಾರ್’ ಎಂಬ ಶಬ್ದ ಕೇಳಿ ಗಾಬರಿಗೊಂಡು ಮುಂದೆ ನೋಡಿದ ಮಹೇಶ. ಮಸಕುಬೆಳಕು ಬೆಳಕಲ್ಲಿ ರೇಡಿಯಂನಷ್ಟೇ ಹೊಳಪಿನ ಕಂಗಳೊಡನೆ, ಉದ್ದನೆಯ ಕೈಗಳೊಡನೆ, ಕೆದರಿದ ಕೂದಲು, ಮುಖದ ಬಲಪಾರ್ಶ್ವ ಸಂಪೂರ್ಣ ಸುಟ್ಟುಹೋಗಿ ಪರಮ ಅಸಹ್ಯವಾಗಿ ತೋರುತ್ತಿರುವ ಆ ಆಕಾರ ಕಿಲಕಿಲನಗುತ್ತಾ ನಿಂತಿತ್ತು !

ನಕ್ಕಾಗ ಒಂದಡಿ ಹೊರಕ್ಕೆ ನುಸುಳುತ್ತಿತ್ತು ಆಕಾರದ ನಾಲಿಗೆ......ನಗು ಕೇಳಿದಾಗ ಗುಂಡಿಗೆಯಲ್ಲಿ ವಿಚಿತ್ರ ಭೀತಿ.

ಕೈಗಳನ್ನು ಮುಂದೆ ಚಾಚಿ ವಿಕಟವಾಗಿ ನಗುತ್ತಾ ಒಂದೊಂದೆ ಹೆಜ್ಜೆ ಮುನ್ನಡೆಯುತ್ತಾ ಮಹೇಶನನ್ನು ಸಮೀಪಿಸುತ್ತಿತ್ತು ಆ ಆಕಾರ.

ಗಂಟಲಪಸೆ ಆರಿಹೋಯಿತು ಮಹೇಶನಿಗೆ. ಮೈಯ್ಯೆಲ್ಲಾ ಬೆವರಿ

ನಿಂದಾವೃತಗೊಂಡಿತು. ಆಕಾರದ ದಾರಿಯಿಂದ ದೂರವಾಗಲು ತೀವ್ರ ಪ್ರಯತ್ನವೆನಿಸಿದ.

ಅವಯವಗಳು ಸಹಕರಿಸಲಿಲ್ಲ ಜಡಗಟ್ಟಿದಂತೆ ನಿಷ್ಕ್ರಿಯವಾಗಿ ಬಿಟ್ಟಿದ್ದವವು !

ಏಕ್‌ದಂ ಅವನ ಮೇಲಕ್ಕೆಗರಿತು ಆಕಾರ. ಸಂಪೂರ್ಣ ವಿಲ್‌ಪವರ್ ಕ್ರೋಢೀಕರಿಸಿಕೊಂಡು ಪಕ್ಕಕ್ಕುರುಳಿದ ಮಹೇಶ.

ಮರುಕ್ಷಣ ಗೋಡೆಗೆ ಡೀ ಕೊಟ್ಟು ಧಿಮ್ಮೆಂದಿತು ತಲೆ! ನೋವಿಗೆ ಮೈ ನರಗಳೆಲ್ಲಾ ಕುಂಯ್ಯ್‌ಗುಟ್ಟಿದವು. ಬೆಚ್ಚಿಬಿದ್ದು ಕಣ್ಣು ತೆರೆದ ಮಹೇಶ.

ತಲೆಯ ಸುತ್ತಮುತ್ತ ಗುಂಡುಸೂಜಿಗಳಿಂದ ಚುಚ್ಚುತ್ತಿರುವಂತೆ, ಇಕ್ಕಳದಿಂದ ಕೂದಲು ಹಿಡಿದೆಳೆಯುತ್ತಿರುವಂತೆ ನೋವು. ಆಗಾಗ ತಾನೇ, ಹೊರ ಬರುತ್ತಿದ್ದ ರಕ್ತ ನಿಂತಿದ್ದ ಪ್ರದೇಶವೇ ಈಗ ಗೋಡೆಗೆ ತಗುಲಿ ಮತ್ತೆ ತೊಟ್ಟಿಕ್ಕ ತೊಡಗಿತು ಬಿಸಿ ರಕ್ತ.

ಕಣ್ಣುಜ್ಜಿಕೊಳ್ಳುತ್ತಾ ನಿಧಾನವಾಗಿ ತಲೆ ಅತ್ತಿತ್ತ ಆಡಿಸುತ್ತಾ ಮೆಲ್ಲ ನೆದ್ದು ಕುಳಿತ ಮಹೇಶ.

ನಾಲಿಗೆ ನಾರ್ಪುಲೆಗಿಂತಾ ನಾಲ್ಕುಪಟ್ಟು ಸೈಝಾದಂತೆ ಫೀಲಿಂಗ್. ಆರಿಹೋದ ಗಂಟಲು ನೀರಿಗಾಗಿ ತಹತಹಿಸುತ್ತಿತ್ತು. ಬಾಯಾರಿಕೆ ತೀರಿಸಿ ಕೊಳ್ಳುವ ಆಸೆಯನ್ನು ಸದ್ಯಕ್ಕೆ ಒತ್ತಟ್ಟಿಗಿಟ್ಟು ಅತ್ತಿತ್ತ ಕಣ್ಣಾಡಿಸಿದ.

ಪಕ್ಕದಲ್ಲೇ ಮುದುರಿಕೊಂಡು ಮಲಗಿದ್ದಳು ಸೋಫಿಯಾ. ಅವಳು ತೊಟ್ಟಿರುವ ಬಟ್ಟೆಗಳ ಮೇಲೆ ಅಲ್ಲಲ್ಲಿ ರಕ್ತದ ಕಲೆಗಳು.

ಆಟೋಮ್ಯಾಟಿಕ್ ಆಗಿ ರಿಸ್ಟ್ ವಾಚ್ ಕಡೆಗೆ ಹೊರಳಿತು ನೋಟ. ಮೂರು ಗಂಟೆ ತೋರಿಸುತ್ತಿತ್ತದು. ಒಂದೆರಡು ನಿಮಿಷಗಳ ನಂತರ ಮಿದು ಳೊಂದಷ್ಟು ಕ್ಲಿಯರ್ ಆದ ಮೇಲೆ ಎಲ್ಲಾ ವಿಷಯಗಳು ಒಂದೊಂದಾಗಿ ನೆನಪಾಗತೊಡಗಿದವು.

ಜೇಬುಗಳನ್ನು ತಡವಿಕೊಂಡ ಮಹೇಶ. ಶತ್ರುಗಳದ್ಯಾಕೋ ಸಿಗರೇಟ್ ಲೈಟರ್ ಕಾನ್‌ಫಿಸ್ಕೇಟ್ ಮಾಡಿರಲಿಲ್ಲ. ಸಿಗರೇಟೊಂದು ಹಚ್ಚಿ ಹೊಗೆ ಪುಪ್ಪುಸದ ತುಂಬಾ ತುಂಬಿಕೊಂಡು ಮೂಗಿನಿಂದ ನಿದಾನವಾಗಿ ಹೊರಚೆಲ್ಲಿದ. ಎಷ್ಟೋ ರಿಲೀಫ್ ಸಿಕ್ಕಂತೆ ಭಾಸವಾಯಿತು !

ಹೆಂಚಿನ ಮನೆಯಲ್ಲಿನ ಒಂದು ಕೊಠಡಿಯಲ್ಲಿ ಅವರನ್ನು ಬಂಧಿಸಿಟ್ಟಿದ್ದರು. ಭಾವಣೆಯಲ್ಲೊಂದೆಡೆ ಬೆಳಗುತ್ತಿರುವ ಜೀರೋವಾಟ್ ಬಲ್ ಕೊಠಡಿಯಲ್ಲಿ ಸೀಮಿತ ಬೆಳಕನ್ನು ಪಸರಿಸಿತ್ತು. ಅವರ ಬಿಡುಬಿರುಸಾದ ಹೊಡೆತಗಳು, ಆ ಕೊಠಡಿಯಲ್ಲಿನ ಭದ್ರತೆ, ಕೊಠಡಿಯ ಗಟ್ಟಿಮುಟ್ಟಾದ ಬಾಗಿಲುಗಳು__ಇವುಗಳ ಮೇಲೆ ಬಹಳ ನಂಬಿಕೊಂಡಿದ್ದಂತಿತ್ತು ಬಂಧಿಸಿದ್ದ ಪುಣ್ಯಾತ್ಮರಿಗೆ ಆದ್ದರಿಂದಲೇ ಕೈ ಕಾಲುಗಳು ಫ್ರಿಯಾಗಿದ್ದವು–ಹಗ್ಗದ ಗಂಟುಗಳ ಕೋಟಲೆಯಿಲ್ಲದೆ !

ಈಗ ತನ್ನ ಮುಂದಿನ ನಡೆ ? ಶರವೇಗದಲ್ಲಿ ಯೋಚಿಸ ತೊಡಗಿತ್ತು ಮಿದುಳು.

ದಾವೂದ್ ಮನುಷ್ಯರು ತಮ್ಮನ್ನು ಬಂಧಿಸಿದ್ದಾರೆ. ಅದು ಸ್ಪಷ್ಟವಾಗಿಯೇ ಅರ್ಥವಾಗುತ್ತಿದೆ. ಹಾಗಿದ್ದಲ್ಲಿ ದಾವೂದ್ ಎಲ್ಲಿ ಹಾಳಾಗಿಹೋದ? ಒಳಗೇ ಇದ್ದಾನೆಯೆ ? ತಮ್ಮನ್ನು ಬಂಧಿಸಿಟ್ಟ ಅವನ ಉದ್ದೇಶವೇನಿರಬಹುದು? ಯಾವುದು ಹೇಗಾದರೂ ಇರಲಿ,ಮೊದಲು ತಾವಿಲ್ಲಿಂದ ತಪ್ಪಿಸಿಕೊಳ್ಳಬೇಕಾದ್ದು ಮಾತ್ರ ಬಹಳ ಮುಖ್ಯ ! ತನಗೆ ಬೇಕಾದ ವ್ಯಕ್ತಿ ಕಣ್ಣಿಗೆ ಬೀಳುವವರೆಗೆ ತಾನು ಯಾರ ಕೈಗೂ ಸಿಕ್ಕಬಾರದು......ಬಂಧನದಲ್ಲಂತೂ ಇರಲೇಬಾರದು.

ಹಾಗೆಯೆ ಮುಂದುವರೆಯಿತು ಅವನ ಆಲೋಚನೆ ಲಹರಿ.

ಅಪರೂಪಕ್ಕೆ ಸಿಕ್ಕಿ ತಿಂಗಳ ರಜಾದಲ್ಲಿನ್ನಲ್ಲೂ ವಾರ ಉಳಿದಿದೆ. ‘ಆಪರೇಷನ್ ಮೆರೀನಾ’ ಅಸೈನ್‌ಮೆಂಟ್ ವೇಳೆಯಲ್ಲಿ ಪರಿಚಯವಾಗಿ ಕ್ಲೋಸ್ ಆದ ಪೋಲಿಸ್‌ಚೀಫ್ ಫರ್ನಾಂಡಿಸ್‌ನ ಆಹ್ವಾನದ ಮೇರೆಗೆ ಅಕಸ್ಮಾತ್ ಸಿಕ್ಕಿ ಸೋಫಿಯಾಳ ತಲೆ ಕೆಡಿಸಿ ಬಾಂಬೆಗೆಳೆ ತಂದಿದ್ದ–ಕಂಪನಿಗಿರಲೆಂದು ! ಅವಳಂತಾ ಬ್ಯೂಟಿ ಬಾಂಬೆಯಲ್ಲೆಲ್ಲೂ ಸಿಕ್ಕಳೆಂಬ ಮುಂದಾಲೋಚನೆ ಅವನದು !

ಬಾಂಬೆಗೆ ಬಂದೆನೋ ಎರಡು ದಿನಗಳಾಗಿದ್ದವು. ಆದರೆ ಆಹ್ವಾನಿಸಿದ್ದ ಫರ್ನಾಂಡಿಸ್, ಸ್ಮಗ್ಲರ್ ಒಬ್ಬನ ಬೆನ್ನು ಬಿದ್ದು ಸಿಂಗಪುರ್ ಹೋದವನು ಇನ್ನೂ ವಾಪಸ್ಸಾಗಿರಲಿಲ್ಲ. ಬೇಜಾರ್ ಅನ್ನಿಸಿಲಿಲ್ಲ ಮಹೇಶನಿಗೆ, ಮಾದಕ ಮೈನ ಸಂಪೂರ್ಣ ಸಹಕಾರದ ಡಾರ್ಲಿಂಗ್ ಸೋಫಿಯಾಳ ಕಂಪನಿಯ ಕಾರಣ ! ಇರುವ ಇನ್ನೂ ನಾಲ್ಕು ದಿನ ಜಾಲಿಯಾಗಿ ಕಳೆದು ಆಮೇಲೆ

ದೆಹಲಿ ಫ್ಲೈಟ್‌ಹತ್ತುತ್ತೇವೆಂದುಕೊಂಡಿದ್ದ ಅವನಿಗೆ, ಸೋಫಿಯಾಳ ಕಾರ್ಯಕ್ರಮದಪಟ್ಟಿಯು ಕಾರಣ ಎದೆಧಸಕ್ಕೆಂದಿತ್ತು.

ಅಟ್ ಎನಿಕಾಸ್ಟ್ ಸೋಫಿಯಾ ನಾಳೆ ರಾತ್ರಿಯೊಳಗೆ ಪ್ಯಾರಿಸ್‌ನಲ್ಲಿರಬೇಕು–ಸ್ಪೆಷಲ್ ಟ್ರೈನಿಂಗ್‌ಗಾಗಿ !

ಯಾಂಗೂ ಸುಳಿವು ಕೊಡದೆ ಅವಳನ್ನೇ ತನ್ನೊಡನೆಳೆ ತಂದಿದ್ದ ಮಹೇಶ. ಅಡ್ರೆಸ್ ಕೊಡದೆ ನಾಯವಾದ ಅಂಗನೆಯ ಬಗ್ಗೆ ಸೆಲ್ ಈಗಾಗಲೇ ತಲಾಷ್ ಶುರುಮಾಡಿರಲು ಸಾಧ್ಯ. ಅಕಸ್ಮಾತ್ ಯಾವುದೇ ಕಾರಣದಿಂದ ಅವಳು ಪ್ಯಾರಿಸ್‌ಗೋಗೆಲಾಗದಿದ್ದರೆ, ಅದಕ್ಕೆ ಕಾರಣ ತಾನೆಂದು ಕರ್ನಲ್‌ಗೆ ತಿಳಿದರೆ.....ಅಂಗೈಗಳಲ್ಲಿ ಬೆವರುದಯಿಸಿತು ಮಹೇಶನಿಗೆ. ಸಾಮ್ಯಕ್ಕೆ ನನ್ನನ್ನು ನಂಜಿಕೇ ಂಡು ತಿಂದುಬಿಡುತ್ತಾರಷ್ಟೇ ?

ಸೋಫಿಯಾಳ ಅಚೇತನ ದೇಹ ಮೆಲ್ಲನೆ ಕದಲಿದಾಗ ಅವನ ಯೋಚನಾಲಹರಿಗೆ ಬ್ರೇಕ್ ಬಿತ್ತು.

"ಸೋಫಿ......ಸೋಫಿಯಾ !" ಮೃದುವಾಗಿ ಕರೆದ.

ಬೆಚ್ಚಿ ಕಣ್ಣು ತೆರೆದಳು ಸೋಫಿಯಾ. ಮಹೇಶನ ನಗುಮುಖ ಕಾಣಿಸಿತು. ತಲೆಯನ್ನೊಮ್ಮೆ ಬಲವಾಗಿ ಒದರಿ ನಿದಾನವಾಗೆದ್ದು ಗೋಡೆಗೊರಗಿ ಕುಳಿತಳು.

ಅವಳ ತುಟಿಗಳ ನಡುವೆ ಒಂದು ಸಿಗರೇಟ್ ಇರಿಸಿ ಲೈಟರ್‌ನಿಂದ ಅಗ್ನಿಸ್ಪರ್ಶ–ಮಾಡಿದ ಮಹೇಶ. "ಹೌ ಆರ್ ಯು ಬೇಬಿ ?" ಕೇಳಿದ.

"ನೋಪ್ರಾಬ್ಲಂ?" ಅಂದಳು ಸೋಫಿಯಾ ಕಿರುನಗೆಯೊಡನೆ

ಅವಳ ಭುಜದ ಮೇಲೆ ಕೈ ಹಾಕಿ ಹತ್ತಿರಕ್ಕೆಳೆದುಕೊಂಡ.

"ಮಹೇಶ ?" ದಂ ಎಳೆದು ತುಟಿಯಂಚಿನಿಂದ ಹೊಗೆ ಹೊರಚೆಲ್ಲುತಾ ಹೇಳಿದಳು ಸೋಫಿಯಾ, "ದಾವೂದ್‌ನನ್ನು ಒಂದು ಕೈ ನೋಡೋಣವೆನ್ನುವೆಯಾ ? ಸರಿಯಾಗಿ ಕೆಲಸ ಕೊಡದೆ ಕೈಗಳು ಮೃದುವಾಗಿ ಬಿಟ್ಟಿವೆ."

"ನಥಿಂಗ್ ಡೂಯಿಂಗ್ ಸೋಫಿ......ನಾವು ಸೈಲೆಂಟಾಗಿ ಇಲ್ಲಿಂದ ಜಾಗ ಖಾಲಿ ಮಾಡಬೇಕೀಗ. ದಟ್ ಟೂ ಇಸ್ ಅರ್ಜೆಂಟ್ ! ಆಮೇಲೆ ದಾವೂದ್‌ನ ಗ್ರಹಚಾರ ನಾನು ಬಿಡಿಸುತ್ತೇನೆ ಯು ಡೋಂಟ್ ವರಿ !" ಗಂಭೀರವಾಗೆಂದ ಮಹೇಶ.

"ಈಗವನನ್ನು ನಿನ್ನ ಗ್ರಹಚಾರ ಬಿಡಿಸಿದ ರೀತಿಯಲ್ಲೇನು ?" ತುಟಿ ಕೊಂಕಿಸಿ ಕಿಂಡಲ್ ಮಾಡಿದ್ಧಳು ಸೋಫಿಯಾ.

ರಪ್ಪನೆ ಅವಳ ತಲೆಯ ಮೇಲೊಂದು ಮೊಟಕಿದ ಮಹೇಶ. "ಸ್ವಲ್ಪ ಮೆಲ್ಲಗೆ ಮಾತಾಡು ಹನ್ನಿ ! ನಾವು ನಿದ್ರೆಯಿಂದೆದ್ದದ್ದು ಅವರಿಗೆ ತಿಳಿದು ಹೋದರೆ ಬಂದು ಕೈಕಾಲು ಕಟ್ಟಿ ರಿಪೇರಿ ಮಾಡುವ ಪ್ರಯತ್ನ ಮಾಡಿ ಯಾರು !" ನಗುಮುಖದೊಡನೆ ಹೇಳಿದ.

"ಸರಿ........" ಅವನ ಕೆನ್ನೆಗೆ ಲೊಚಕ್ಕನೆ ಮುತ್ತಿಟ್ಟು ಹೇಳಿದಳು ಸೋಫಿಯಾ.

ಮೇಲೆದ್ದು ಬೆಕ್ಕಿನ ನಡಿಗೆಯಲ್ಲಿ ಬಾಗಿಲ ಕಡೆಗೆ ಸಾಗಿದ ಮಹೇಶ ನಿದಾನವಾಗಿ ಅಲ್ಲಾಡಿಸಿ ನೋಡಿದ. ಒಂದಿಚೂ ಕದಲಲಿಲ್ಲ ಅದು ! ಹೊರಗೆ ಗಟ್ಟಿ ಮುಟ್ಟಾದ ಚಿಲಕವಿದೆ ಎಂದು ತಿಳಿಯಲು ಹೆಚ್ಚು ಹೊತ್ತೇನೂ ಬೇಕಾಗಲಿಲ್ಲ. ಆ ಕ್ಷಣವೇ ನಿರ್ಧಾರವೊಂದಕ್ಕೆ ಬಂದು ರಿಲ್ಯಾಕ್ಸಾಯಿತು ಅವನ ಮುಖ.

ಅವನ ಮುಖಭಾವ ಗಮನಿಸುತ್ತಿದ್ದ ಸೋಫಿಯಾಗೆ ಕ್ಷಣ್ಣವಾಗಿ ಅರ್ಥವಾಯಿತು ಆ ಡಿಸಿಷನ್ ಏನೆಂದು ?

ಮಡಿಚಿಟ್ಟ ಸ್ಪ್ರಿಂಗ್‌ನೋಪಾದಿಯಲ್ಲಿ ಬಿಗಿದುಕೊಂಡವು ಮಹೇಶನವ ಯವಗಳು. ಯಾವಕ್ಷಣದಲ್ಲಾದರೂ ಒಡ್ಡು ಹೊಡೆದ ನದಿಯೋಪಾದಿಯಲ್ಲಿ ಮೂವ್ ಆಗಲು ಸನ್ನದ್ಧಳಾಗಿ ಅವನ ಬೆನ್ನ ಹಿಂದೆಯೇ ನಿಂತಿದ್ದಳು ಸೋಫಿಯಾ.

ಅವಳ ಕಡೆ ನೋಡಿ ಲೇಝಿ ಸ್ಮೈಲ್ ಮಾಡಿ ಕೌಂಟ್‌ಡೌನ್ ಶುರು ಮಾಡಿದ ಮಹೇಶ, "ಒನ್......ಟು......ತ್ರೀ......ಫೋರ್......ಫೈವ್...... !"

ಜೋರಾಗಿ ಉಸಿರೆಳೆದುಕೊಂಡ ಅವನು ಒಂದೆಜ್ಜೆ ಮುಂದಿಟ್ಟು ನಡು ತುಸುವೇ ಕುಗ್ಗಿಸಿ ಬಲಗಾಲನ್ನೆತ್ತಿ ಮುಂದಕ್ಕೆ ಬೀಸಿದ. ಸರಿಯಾಗಿ ಚಿಲಕದ ಮೇಲ್ಭಾಗಕ್ಕಪ್ಪಳಿಸಿತ್ತು ಅವನ ಪಾದ.

ಅದೇ ಕ್ಷಣ......ಚಿಲಕದ ತಳಬಾಗವನ್ನು ಸಂಪರ್ಕಿಸಿತ್ತು ಸೋಫಿಯಾಳ ಎಡಪಾದ.

'ಭಡಾರ್' ಎಂಬ ಶಬ್ದದೊಡನೆ ತೆರೆದುಕೊಂಡಿತ್ತು ಬಾಗಿಲು. ಅಧ

ರಿಂದ ಬೇರೆಯಾದ ಚಿಲಕ ಕ್ಷಿಪಣಿಯಂತೆ ಹಾರುತ್ತಾ ಹೋಗಿ ಗೋಡೆಯ ಪಕ್ಕದಲ್ಲಿ ಮುದುರಿಕೊಂಡು ಮಲಗಿ ಗೊರಕೆ ಹೊಡೆಯುತ್ತಿದ್ದ ದೃಢಕಾಯರ ಮೇಲೆ ಬಿತ್ತು.

ಚಿವ್ವನೆ ಚೀರುತ್ತಾ ಎದ್ದ ಅವರಲ್ಲೊಬ್ಬ. ಆ ಕೂಗಿಗೆ ಮಿಕ್ಕವರೂ ಕಣ್ಣು ಹೊಸಕುತ್ತಾ ಮೇಲೆದ್ದರು.

"ಅರೆರೇ _ ಬಂದಿಗಳು ತಪ್ಪಿಸಿಕೊಳ್ಳುತ್ತಿದ್ದಾರೆ..... ಹಿಡಿಯಿರಿ.... ಬಡಿಯಿರಿ...." ಬೊಬ್ಬೆ ಹೊಡೆಯತೊಡಗಿದರು ಒಂದಿಬ್ಬರು.

"ಸೋಫಿ.....ಫಾಲೋಮಿ ಫಾಸ್ಟ್ !" ಅನ್ನುತ್ತಾ ಮುಂದಕ್ಕೆ ನುಗ್ಗಿದ ಮಹೇಶ.

ಸರಿಯಾಗಿ ಅವನ ದಾರಿಗಡ್ಡ ಬಂದರು ನಾಲ್ವರು ದೃಢಕಾಯರು. ಎಕ್ಸ್‌ಪ್ರೆಸ್ ಟ್ರೈನೊಂದರ ಎದುರಿಗೆ ಸಿಕ್ಕಿಕೊಂಡೆವೆಂಬ ಸತ್ಯ ಅವರಿಗೆ ಅರಿವಾದದ್ದು ಅರೆಕ್ಷಣದ ನಂತರ !

ಎರಡು ಮುಷ್ಟಿಗಳು ರಾಕೆಟ್ ವೇಗದೊಡನೆ ಸಾಗಿ ಇಬ್ಬರ ಮುಖಗಳನ್ನು ಪಚಡಿ ಮಾಡಿದ್ದವು. ಮೂರನೆಯವನ ಮಂಡಿ ಲೊಟಕ್ಕೆಂದಿತ್ತು ಕಾಲುಗುಟ್ಟಿಸಿದ ಬಿರುಸಿಗೆ. ಮೂಳೆ ಹೊರಬಂದು ಭಯಾನಕದಲ್ಲಿ ಆಕ್ರಂದನವೆಸಗಿದ ಅವನು ನಾಲ್ಕನೆಯವನ ಮೇಲೆ ಬಿದ್ದು ಕನ್ನೊಡಗೂಡಿ ಕೆಳಗೆಳೆದುಕೊಂಡ.

"ನಮ್ಮವರ ಮೇಲೇ ಕೈಯ್ಯೆತ್ತಿದ್ದಾನೆ......ಅವನನ್ನು ಮುಗಿಸಿಬಿಡಿ......" ಎಲ್ಲರಿಂದ ಸ್ವಲ್ಪ ದೂರದಲ್ಲಿದ್ದ ಒಬ್ಬ ದೃಢಕಾಯ ಆರ್ಡರ್ಸ್ ಪಾಸ್ ಮಾಡಿದ ಗತ್ತಿನ ಧ್ವನಿಯಲ್ಲಿ.

ಅವನನ್ನೆ ತನ್ನ ಮುಂದಿನ ಟಾರ್ಜೆಟ್‌ಪ್ರಾಕ್ಟೀಸ್‌ಗಾಗಿ ಉಪಯೋಗಿಸಿಕೊಂಡ ಮಹೇಶ !

ಕಣ್ಣಿಗೂ ಸಿಲುಕದ ವೇಗದೊಡನೆ ಫಾರ್ಟಿಫೈವ್ ಡಿಗ್ರಿಸ್ ಆಂಗಲ್‌ನಲ್ಲಿ ಮೇಲೆದ್ದಿತ್ತು ಅವನ ಬಲಗಾಲು. ದೇಹದ ಶಕ್ತಿಯೆಲ್ಲವನ್ನೂ ಆ ಕಾಲಿನಲ್ಲಿ ಕೇಂದ್ರೀಕರಿಸಿ ಅಪ್ಲೈ ಮಾಡಿದ್ದ ಮಹೇಶ ಸೈಡ್‌ಕಿಕ್ !

ತನ್ನ ಗಮ್ಯ–ದೃಢಕಾಯನ ಎದೆ–ಅರ್ಧಕ್ಷಣದ ನಂತರ ತಲುಪಿತ್ತು ಹೊಡೆತ,

ಕಾಂಕ್ರೀಟ್ ಕಂಬವೊಂದು ಎದೆಯ ಮೇಲೆ ಬಿದ್ದಂತೆ ಫೀಲಾಗಿದ್ದ ಆ ದೃಢಕಾಯ. ಉಸಿರುಗಟ್ಟಿ ಸಣ್ಣ ಕೀರಲು ಧ್ವನಿ ಮಾತ್ರ ಹೊರಹೊಮ್ಮಿಸಲು ಸಾಧ್ಯವಾಗಿತ್ತಷ್ಟೇ ಅವನಿಗೆ. ಮೂರಡಿ ಮೇಲೆದ್ದು ಗೋಡೆಗೆ ಡಿಕ್ಕಿಹೊಡೆದು ಉಪ್ಪಿನ ಮೂಟೆಯಂತೆ ನೆಲದ ಮೇಲೆ ಬಿದ್ದರೂ ಇನ್ನೂ ಅವನ ಪುಪ್ಪುಸ ತಹಬಂದಿಗೆ ಬಂದಿರಲಿಲ್ಲ !

ಮಿಕ್ಕ ದೃಢಕಾಯರಿಗೆ ಇನ್ನೊಂದು ರೀತಿಯ ಹೆಲ್ ಸೃಷ್ಟಿಸಿದ್ದಳು ಸೋಫಿಯಾ.

ಅಪ್ಪರಾಲ್ ಒಬ್ಬ ಹೆಣ್ಣೆಂದು ರಿಲಾಕ್ಸಾಗಿ ದೊಡ್ಡ ತಪ್ಪೆಸಗಿದ್ದರು ಆ ಜನ.

ಇದು ಡೆಡ್ಲಿ ಕ್ಯಾಟ್ ಎಂದು ಅರಿವಾಗುವ ವೇಳೆಗೆ ಇಬ್ಬರ ದವಡೆಗಳು ಫ್ರಾಕ್ಚರ್ ಆಗಿದ್ದವು. ಇನ್ನೊಬ್ಬನ ತುಟಿ ಸೀಳಿ ನಾಲ್ಕು ಹಲ್ಲುಗಳು ಹೊರ ಬಂದಿದ್ದವು !

“ಇವರು ಸಾಮಾನ್ಯ ಜನರಂತೆ ಕಾಣುವುದಿಲ್ಲ. ಅಕಸ್ಮಾತ್ ತಪ್ಪಿಸಿಕೊಂಡು ಆ ವಿಷಯ ದಾವೂದ್‌ಗೆ ತಿಳಿದರೆ ನಮ್ಮನ್ನ ಹುಚ್ಚು ನಾಯಿಗಳಂತೆ ಅಟ್ಟಾಡಿಸಿ ಕೊಂದುಬಿಡುತ್ತಾನೆ. ಆದ್ದರಿಂದ ಇವರು ಜೀವಂತವಾಗಿ ಹೊರಗೆ ಹೋಗಬಾರದು......” ಜೋರು ಧ್ವನಿಯಲ್ಲಿ ಎಲ್ಲರಿಗೂ ತಿಳುವಳಿಕೆ ಕೊಟ್ಟ ಒಬ್ಬ ದೃಢಕಾಯ.

ಆ ಮಾತಿನಿಂದ ಉತ್ತೇಜಿತಗೊಂಡು ಹೂಂಕರಿಸುತ್ತಾ ಮುಂದಕ್ಕೆ ಕುಪ್ಪಳಿಸಿದ ಒಬ್ಬ ದೃಢಕಾಯನೊಬ್ಬ. ಅಂಗೈ ಅರಳಿಸಿ ರಪ್ಪನೆ ಅವನ ಮುಖದ ಮಧ್ಯಕ್ಕೆ ಗಟ್ಟಿಸಿದ ಮಹೇಶ. ಕೀರಾಡುತ್ತಾ ರಕ್ತಸಿಕ್ತ ಮುಖದೊಡನೆ ಹಿಂದಕ್ಕೆ ಬಿದ್ದ ಅವನ ಎರಡೂ ಕಾಲುಗಳನ್ನಿಡಿದು ಮೇಲೆತ್ತಿ ಚಕ್ರದಂತೆ ಗಿರ್ರನೆ ತಿರುಗಿಸುತ್ತಾ ಆರ್ಗನೈಸ್ ಆಗುತ್ತಿದ್ದ ಗುಂಪಿನ ನಡುವೆ ನುಗ್ಗಿದ ಮಹೇಶ.

ಫಟ್......ಫಟ್..... ಫಟಾರ್......

ಮೂವರ ಷೇಪ್ ಚೇಂಜ್ ಆದವು ತಮ್ಮವನ ಲಿಂಬ್ಸ್‌ಗಳಿಗಡ್ಡ ಸಿಕ್ಕಿ.

ಅವರ ಚೀರಾಟ, ಕೂಗಾಟ ಹೊರಗಿನವರ ಕಿವಿಗೆ ಬಿದ್ದಂತಿತ್ತು. ಇರಾನಿ ಹೋಟೆಲ್ ಕಡೆಯಿಂದ ಓಡಿಬರುತ್ತಿರುವ ಜನರ ಕಲರವ......

"ಸೋಫಿಯಾ......ಇಲ್ಲಿಂದ ಡಿಢೀರ್ ಅದೃಶ್ಯರಾಗಬೇಕಾದ ಸಮಯ ಸನ್ನಿಹಿತವಾಗಿದೆ. ಕಮಾನ್.....!" ಅನ್ನುತ್ತಾ ಹಿಡಿದಿದ್ದ ಕಾಲುಗಳನ್ನು ಗಿರ್ರನೊಂದು ಸುತ್ತು ತಿರುಗಿಸಿ ಬಿಟ್ಟು ಬೆವರಿದ್ದ ಅಂಗೈಗಳನ್ನು ಪ್ಯಾಂಟಿಗೆ ಒರೆಸಿಕೊಳ್ಳುತ್ತಾ ಬಿಲ್ಲಿನಿಂದ ಬಿಟ್ಟ ಬಾಣದೋಪಾದಿಯಲ್ಲಿ ಮುಂದಕ್ಕೋಟ ಕಿತ್ತ.

ಮಿಂಚಿನ ವೇಗದೊಡನೆ ಅವನನ್ನು ಫಾಲೋ ಮಾಡಿದಳು ಸೋಫಿಯಾ.

ಏನಾಗುತ್ತಿದೆಯೆಂದು ಅಲ್ಲಿದ್ದವರೆಲ್ಲಾ ಗ್ರಹಿಸುವ ವೇಳೆಗೆ ಎದುರಿಗಿದ್ದ ಗಲ್ಲಿಯ ಕೊನೆ ತಲುಪಿಬಿಟ್ಟಿದ್ದರು ಮಹೇಶ, ಸೋಫಿಯಾ.

"ಓಡಿಹೋಗುತ್ತಿದ್ದಾರೆ..... ಹಿಡಿಯಿರಿ......ಹಿಡಿಯಿರಿ......" ಎಂದು ಚೀರಾಡುತ್ತಾ ಅವರ ಬೆನ್ನು ಬಿದ್ದರು ಕೆಲವರು ದೃಢಕಾಯರು.

ಮುಂದೆ ಓಡುತ್ತಿದ್ದ ಮಹೇಶ, ಸೋಫಿಯಾರನ್ನು ಎತ್ತಿ ತೋರುತ್ತಿದ್ದವು ಸ್ಟ್ರೀಟ್‌ಲೈಟ್ಸ್. ಅದನ್ನು ಗಮನಿಸಿದ ಕಿಲಾಡಿ ಮಹೇಶ ! ವೇಗವನ್ನು ತುಸುವಾದರೂ ತಗ್ಗಿಸದೆ ಒಂದು ಸೈಡ್‌ಗೆ ವಾಲಿ ಒಂದೆಡೆ ನೆಲದ ಮೇಲಿದ್ದ ಜಲ್ಲಿಕಲ್ಲುಗಳನ್ನು ಮುಷ್ಠಿಯಲ್ಲಿ ತುಂಬಿಕೊಂಡ. ದೇಹ ಸ್ಟ್ರೈಟ್ ಆಗುತ್ತಿದ್ದಂತೆ ಸರಸರ ಕೈ ಬಿಟ್ಟಿದ್ದವು ಕಲ್ಲುಗಳು ಇನ್ನೊಂದು ಜಾಯಿಂಟ್ ರಸ್ತೆ ತಲುಪುವಷ್ಟರಲ್ಲಿ ಮುಗಿದಿತ್ತು ಕಲ್ಲುಗಳ ಸಂಗ್ರಹ.

ಹಿಂದೆಯೇ ಹಾದಿನ ರಸ್ತೆ ಕತ್ತಲಗರವಾಗಿತ್ತು !

ದೃಢಕಾಯರು ಆ ರಸ್ತೆಗೆ ಬರುವ ವೇಳೆಗೆ ಆಸಾಮಿಗಳ ಅಡ್ರಸ್ ಇರಲಿಲ್ಲ. ಇದ್ದರೂ ಟಾರ್ಚ್ ಇಲ್ಲದೆ ಅವರು ಹುಡುಕುವಂತಿರಲಿಲ್ಲ ? ನಡೆದ ವಿಷಯವೇನೆಂದು ಅವರಿಗೆ ಅರ್ಥವೇ ಆಗಿರಲಿಲ್ಲ. ಸರಿಯಾಗಿ ಸ್ಟ್ರೀಟ್ ಲೈಟ್ಸ್ ಮೈನ್‌ಟೆನ್ ಮಾಡಲಾಗದ ಬಾಂಬೆ ಕಾರ್ಪೊರೇಷನ್‌ನವರನ್ನು ಬಾಯಿಗೆ ಬಂದಂತೆ ಹಳಿಯುತ್ತಾ ಕಾಷಿಯಸ್ ಆಗಿ ಮುಂದುವರೆಯತೊಡಗಿದರು.

ಅಷ್ಟರಲ್ಲಾಗಲೇ ಅವರಿಗೆ ಗಸ್ತು ಕೊಟ್ಟ ಜನ ಬಾಂಬೆ ಸೆಂಟ್ರಲ್

ಸ್ಟೇಷನ್ ತಲುಪಿಬಿಟ್ಟಿದ್ದರು. ಅವರಲ್ಲಿ ಸೇರಿದ ಅರ್ಧ ಗಂಟೆಗೆಲ್ಲಾ ಬಾಂಬೆ ಸೆಂಟ್ರಲ್‌ನಿಂದ ದೆಹಲಿಗೆ ಹೊರಡುವ ಸೂಪರ್ ಎಕ್ಸ್‌ಪ್ರೆಸ್ ಟ್ರೇನ್ ಹಳಿಗಳ ಮೇಲೆ ಪ್ರೆಸೆಂಟ್ ಆಗಿತ್ತು.

ಟಿ.ಟಿ.ಯೊಬ್ಬನನ್ನು ಅಡ್ಜಸ್ಟ್ ಮಾಡಿಸಿಕೊಂಡು ಎ.ಸಿ ಕಂಪಾರ್ಟ್‌ಮೆಂಟನಲ್ಲಿ ಸೋಫಿಯಾಗೊಂದು ಸೀಟು ಕೊಡಿಸಿ ಹತ್ತಿಸಿದ ಮಹೇಶ ಅವಳಿಗಷ್ಟು ಸೂಚನೆಗಳನ್ನಿತ್ತ.

ಮನಸ್ಸಿಲ್ಲದ ಮನಸ್ಸಿನೊಡನೆ ಅವನ ಮಾತಿಗೆಲ್ಲಾ ತಲೆಯಾಡಿಸುತ್ತಿದ್ದಳು ಸೋಫಿಯಾ. ಪ್ಯಾರಿಸ್‌ಗೆ ಹೋಗುವ ಅನಿವಾರ್ಯತೆಯಿಲ್ಲದಿದ್ದಲ್ಲಿ ಮಹೇಶನ ಯಾವುದೇ ಕೋಕ್ಸಿಂಗ್‌ಗೂ ತಲೆಬಾಗುವವಳಲ್ಲ ಅವಳು. ಆದರೀಗ ವಿಧಿಯಿಲ್ಲ.

ಎರಡನೇ ಸೈರನ್ ಮೊಳಗಿ ಮುಂದಕ್ಕೆ ಚಲಿಸಿತು ಎಕ್ಸ್‌ಪ್ರೆಸ್. ಕೈಯ್ಯಾಡಿಸುತ್ತಾ ಟ್ರೈನ್ ಕಣ್ಮರೆಯಾಗುವವರೆಗೆ ಅಲ್ಲೇ ನಿಂತಿದ್ದ ಮಹೇಶ ಸಿಗರೇಟೊಂದು ಹಚ್ಚಿ ಕ್ಯಾಂಟೀನ್ ಕಡೆಗೆ ನಡೆದ. ಎರಡು ಕಪ್ ಬಿಸಿ ಟೀ ಕುಡಿದು ಸ್ಟೇಷನ್‌ನಿಂದ ಹೊರಬಂದ ಅವನ ಮಿದುಳಲ್ಲಾಗಲೇ ಪಥಕವೊಂದು ರೂಪಿತಗೊಳ್ಳುತ್ತಿತ್ತು. ಆದರದನ್ನು ಜಾರಿಗೊಳಿಸಲು ಕತ್ತಲ ಅವಶ್ಯಕತೆಯಿದೆ. ಸೋ......ಅಲ್ಲಿಯವರೆಗೆ ಮಾಡಲೇನೂ ಕೆಲಸವಿಲ್ಲ !

ಟ್ಯಾಕ್ಸಿಯೊಂದನ್ನು ಕರೆದು ಹೋಟೆಲ್ ಇಂಪೀರಿಯಲ್‌ಗೆ ಕರೆದೊಯ್ಯುವಂತೆ ಆದೇಶಿಸಿ ಒಳಕ್ಕೆ ತೂರಿದ. ಸೋಫಿಯಾಳೊಡನೆ ಆ ಹೋಟೆಲ್‌ನಲ್ಲೇ ಅವನು ಇಳಿದುಕೊಂಡಿದ್ದದ್ದು. ಇಂಪೀರಿಯಲ್ ಪೋರ್ಟಿಕೋದಲ್ಲಿಳಿದು ಫೇರ್ ಸಲ್ಲಿಸಿ ರಿಸೆಪ್ಷನ್‌ಲಾಬಿಯೊಳಕ್ಕೆ ಎಂಟರಾದ.

ರಾತ್ರಿ ಒಂಭತ್ತು ಗಂಟೆಯಲ್ಲಿ ಜಂಟಿಯಾಗಿ ಹೋಗಿ ಒಂಟಿಯಾಗಿ ಬಂದ ಮಹೇಶನನ್ನು ನೋಡಿ ರಾತ್ರಿ ಪಾಳಿಯ ರಿಸೆಪ್ಷನಿಸ್ಟ್‌ಗೆ ಸಣ್ಣ ಅನುಮಾನ. ಅದನ್ನು ಬಗೆಹರಿಸಿಕೊಳ್ಳಲು ಅವಳು ಬಾಯಿ ತೆರೆಯುವ ವೇಳೆಗೆಲ್ಲಾ ಲಿಫ್ಟ್‌ನೊಳಕ್ಕೆ ನುಸುಳಿಬಿಟ್ಟಿದ್ದ ಮಹೇಶ. ನಿಮಿಷದ ನಂತರ ಥರ್ಡ್‌ಫ್ಲೋರ್‌ನ ತನ್ನ ಕೊಠಡಿಯಲ್ಲಿದ್ದ.

ಫೋನ್‌ನಲ್ಲಿ ಈಗ ಬಂದ ಆಸಾಮಿಯ ಧ್ವನಿ ಕೇಳಿದಾಗ ನಿಜಕ್ಕೂ ಅಚ್ಚರಿಗೊಂಡಿದ್ದಳು ರಿಸೆಪ್ಷನಿಸ್ಟ್.

"ಲೇಡಿ......ಐ ವಾಂಟ್ ಎ ಗುಡ್ ಡಿನ್ನರ್ ! ಕಿಚನ್‌ಗೆ ತಿಳಿಸಿ ಕಾಲು ಗಂಟೆಯಲ್ಲಿ ವ್ಯವಸ್ಥೆ ಮಾಡುವೆಯಾ ? ಡಿನ್ನರ್ ಜೊತೆಗೆ ನಿನ್ನ ಕಂಪನಿ ಇರುವುದಾದರೆ......ಇಟ್ ವಿಲ್ ಬಿ ರಿಯಲಿಸ್ಪ್ಲೆಂಡಿಡ್?" ಅನ್ನುತ್ತಾ ಮುಗುಳ ನಗೆಯೊಡನೆ ಕಾಲ್ ಡಿಸ್‌ಕನೆಕ್ಟ್ ಮಾಡಿದ್ದ ಮಹೇಶ.

"ಆ ಆಹ್ವಾನಕ್ಕೆ ಅದೆಷ್ಟು ಬೈದುಕೊಳ್ಳುತ್ತಾಳೋ ಎಂಬ ಊಹೆ ಯಿಂದಲೇ ಅವನಿಗೆ ನಗು !

ವೈಟರೊಬ್ಬ ಟ್ರಾಲಿಯಲ್ಲಿ ಡಿನ್ನರ್‌ಪ್ಲೇಟ್ ತಂದಿಟ್ಟು ಹೋದ ಐದು ನಿಮಿಷಗಳ ನಂತರ ಬಾಗಿಲ ಮೇಲೆ ಯಾರದೋ ಬೆರಳ ಶಬ್ದ. ಪ್ರಶ್ನಾರ್ಥಕ ಮುಖಭಾವದೊಡನೆಯೇ ಬಾಗಿಲು ತೆರೆದ ಮಹೇಶನಿಗೆ ಷಾಕ್.

ರಿಸೆಪ್ಷನಿಸ್ಟ್ ನಿಂತಿದ್ದಳಲ್ಲಿ ಸೆಕ್ಸಿ ಸ್ಮೈಲ್‌ನೊಡನೆ !

## ೪

"ಸಂಜೆ ಆರರ ಫ್ಲೈಟಿಗೆ ಪಾರ್‍ಯಿಸ್‌ಗೆ ಹೋಗಬೇಕೆಂಬ ವಿಷಯ ಸೋಫಿಯಾಗೆ ಗೊತ್ತಿದೆ ತಾನೇ ?" ಗಂಭೀರವಾಗಿ ಮೊಳಗಿತು ಕರ್ನಲ್‌ರ ಧ್ವನಿ.

ಸರಿಯಾಗಿ ಇಪ್ಪತ್ತೈದನೇ ಸಲ ಈ ಡೈಲಾಗ್ ಅವರ ಬಾಯಿಂದ ಹೊರಬಂದಿರುವುದು !

ಎದುರಿಗೆ ಕುಳಿತು ಎಣಿಸತೊಡಗಿದ್ದ ಶ್ಯಾಂ. ಪಿನ್ ಸ್ಟಕ್ ಆದ ಗ್ರಾಮಾಫೋನ್ ರೆಕಾರ್ಡ್ ಒಂದೆ ಲೈನನ್ನು ಚಿತ್ರಿಸುವಂತೆ ಒಂದೆ ಡೈಲಾಗ್ ಡೆಲಿವರಿ ಮಾಡುತ್ತಿರುವ ನಿಮ್ಮ ರೀತಿ ನನಗೆ ಎಳ್ಳಷ್ಟು ಹಿಡಿಸುತ್ತಿಲ್ಲ ಅನ್ನುವ ಆಸೆ. ಅದೇಕೋ ಧೈರ್ಯವೇ ಬರಲಿ ಆದರೂ ಅವರನ್ನು ನೋಡಿದ ಅವನ ನೋಟದಲ್ಲಿ ಒಂದಿಷ್ಟು ಆಗ್ರಹವಿಲ್ಲದಿರಲಿಲ್ಲ.

"ಏನು ನುಂಗಿಹಾಕುವ ನೋಟ? ಹೇಳಿದ್ದು ಕೇಳಿಸಲಿಲ್ಲವೇನು?" ಸಿಗಾರ್ ಹೊಗೆ ಬುಸ ಬುಸ ಹೊರಚೆಲ್ಲುತ್ತಾ ಕಟುಧ್ವನಿಯಲ್ಲಿ ಕೇಳಿದರು ಕರ್ನಲ್.

ಉಗುಳು ನುಂಗಿದ ಲೋಕಲ್ ಏಜೆಂಟ್ ಶ್ಯಾಂ "ಕೇಳಿಸಿತು ಸಾರ್ ಪ್ರತಿಸಲವೂ ಒಂದೇ ಉತ್ತರ ಕೊಟ್ಟು ಕೊಟ್ಟು ಬೇಜಾರಾಗಿದೆ. ಹೊಸ ಶಬ್ದಗಳಿಗಾಗಿ ಹುಡುಕಾಡುತ್ತಿದ್ದೇವೆ" ಅಂದುಬಿಟ್ಟ.

ದಂಗಾದರು ಕರ್ನಲ್. "ಷಟಪ್......ಡೋಂಟ್ ಟಾಕ್ ನಾನ್‌ಸೆನ್ಸ್ ......ಕೇಳಿದ್ದಕ್ಕೆ ನೇರವಾಗಿ ಉತ್ತರಿಸುವುದು ಕಲೀ" ಗುಡುಗಿದರು.

ಹಣೆಯ ಮೇಲೆ ಪ್ರತ್ಯಕ್ಷವಾದ ಬೆವರೊರೆಸಲೂ ಧೈರ್ಯ ಸಾಲಲಿಲ್ಲ ಶ್ಯಾಂಗೆ.

"ಅದು......ಅದು......ಪ್ಯಾರಿಸ್‌ಗೆ ಹೋಗಬೇಕೆಂದು ಸೋಫಿಯಾಗೆ ಚೆನ್ನಾಗಿ ಗೊತ್ತು ಸಾರ್. ಆದರೆ......ಅವಳೆಲ್ಲಿಗೆ ಹೋದಳೆಂಬುದು ಮಾತ್ರ ಗೊತ್ತಿಲ್ಲ!" ನಿಧಾನವಾಗಿ ಹೇಳಿದ.

"ಡರ್ಟಿ–ರಾಸ್ಕಲ್ಸ್....ನಿಮ್ಮೆಲ್ಲರ ವೇರ್ ಎಬೌಟ್ಸ್ ಹುಡುಕಲೆಂದೇ ಒಂದು ಡಿಟೆಕ್ಟಿವ್ ಏಜೆನ್ಸಿ ಓಪನ್ ಮಾಡುವ ದಿನಗಳು ಹತ್ತಿರವಾಗುತ್ತಿವೆ! ಎಲ್ಲರನ್ನೂ ಒಂದಷ್ಟು ದಿನ ತಿಹಾರ್ ಜೈಲ್‌ನಲ್ಲಿರಿಸಿದರೆ ಉತ್ತಮ ಅನ್ನಿಸುತ್ತಿದೆ ನನಗೆ" ಅಬ್ಬರಿಸಿದರು.

"ಬೇಗ ಕಳಿಸಿ ಪುಣ್ಯ ಕಟ್ಟಿಕೊಳ್ಳಿ ಬಾಸ್. ಇಲ್ಲಿಗಿಂತ ಅಲ್ಲಿಯೇ ಜೀವನ ಬೊಂಬಾಟ್" ಎಂದು ಜೋರಾಗಿ ಹೇಳಿಬಿಡುವ ತವಕವನ್ನು ಕಷ್ಟಪಟ್ಟು ತಡೆದುಕೊಂಡ. ಶ್ಯಾಂ ಪಕ್ಕದಲ್ಲೆ ಇದುವರೆಗೆ ಸೈಲೆಂಟಾಗಿ ಕೈಕಟ್ಟಿ ಕುಳಿತಿದ್ದ ಚಂದನ್. ಪಿಸುಮಾತಿನಲ್ಲೇ ಶ್ಯಾಂ ಕಿವಿಯಲ್ಲಿ ತನ್ನ ಆಸೆ ವಿವರಿಸಿದ.

ಫ್ಲೇರಪ್ ಆದರು ಕರ್ನಲ್ ಆ ಭಾವವೇನೆಂದು ಅರ್ಥವಾಗುತ್ತಿದ್ದಂತೆ "ಆಲ್‌ರೈಟ್ ಛೋಟಾ ಮಂಕಿ! ನಿನ್ನನ್ನು ಆದಷ್ಟು ಬೇಗ ಅಲ್ಲಿಗೆ ಕಳಿಸುವ ಏರ್ಪಾಟು ಮಾಡುತ್ತೇವೆ. ಡೋಂಟ್‌ವರಿ! ಏಜೆಂಟ್ ಶ್ಯಾಂ......ಮಹೇಶ ಎಲ್ಲಿದ್ದಾನೆ?" ಸೀರಿಯಸ್ಸಾಗಿ ಕೇಳಿದರು.

ಗಂಟಲ ಪಸೆ ಆರಿಹೋದಂತಾಯಿತು ಶ್ಯಾಂಗೆ. ಇಲ್ಲಿಯವರೆಗೆ ಆ ಮಹಾತಾಯಿಯ ಬಗ್ಗೆ ಪ್ರಶ್ನೆ ಕೇಳಿ ಪ್ರಾಣ ತಿಂದರು......ಈಗ ಗುರುವಿನ ವಿವರಗಳನ್ನರಸುತ್ತಾ ಕತ್ತು ಕೊಯ್ಯಲು ಶುರು.

ಇನ್‌ಫ್ಯಾಕ್ಟ್ ಅವರಿಬ್ಬರಿಗೂ ಮಹೇಶ, ಸೋಫಿಯಾ ಸದ್ಯ ಎಲ್ಲಿದ್ದಾರೆಂಬ ವಿವರಗಳು ಗೊತ್ತಿಲ್ಲ !

“ಬಾಯಿಗೇನು ಗರಬಡಿಯಿತೆ? ವೇರ್ ಈಸ್ ಮಹೇಶ್ ಶ್ಯಾಂ ?” ಮೇಜು ಗುದ್ದಿ ಆರ್ಭಟಿಸಿದರು ಕರ್ನಲ್.

ಗೊತ್ತಿಲ್ಲ ಅಂದರೆ ಅವರು ದೂರ್ವಾಸನ ಅಪರಾವತಾರವಾಗುವುದು ಗ್ಯಾರಂಟಿ. ಏನಾದರೊಂದು ಹೇಳಿ ಅವರ ಕೋಪವನ್ನು ಕಡಿಮೆ ಮಾಡುವುದು ಸದ್ಯದ ಅರ್ಜೆಂಟ್ ಕೆಲಸ. ಮಾಡದಿದ್ದರೆ ಅವರ ಕೋಪದ ಬಿರುಗಾಳಿಯಲ್ಲಿ ಸಿಕ್ಕಿ ತಮ್ಮಿಬ್ಬರ ತಿಥಿಯಾದರೂ ಆಶ್ಚರ್ಯವಿಲ್ಲ ! ಶಬ್ದಗಳಿಗಾಗಿ ತಡಕಾಡುತ್ತಾ ಚಂದನ್ ಕಡೆ ನೋಡಿದ ಶ್ಯಾಂ.

ಅವನು ಸೀರಿಯಸ್ ಆಗಿ ಎದುರಿಗಿದ್ದ ಗೋಡೆಯನ್ನೇ ನೋಡುತ್ತಿದ್ದ ಅಲ್ಲೇನೋ ಪವಾಡ ಸದೃಶ ಘಟನೆಯೊಂದು ನಡೆಯುತ್ತಿರುವಂತೆ ! ನೋ...... ಅಲ್ಲಿಂದೇನೂ ಸಹಾಯ ಸಿಗದು !

ಒಣಗಿದ ತುಟಿಗಳ ಮೇಲೆ ನಾಲಿಗೆಯಾಡಿಸಿಕೊಂಡ ಶ್ಯಾಂ. “ಸಾರ್ ಮಹೇಶನಿಗಿನ್ನು ಇಲ್ಲಿಗೆ ಬರಲು ವಾರದ ಗಡುವಿದೆಯಲ್ಲವೆ ? ಲೀವ್‌ನಲ್ಲಿರುವ ಅವನು ಎಲ್ಲಿದ್ದಾನೋ ಏನೋ......ನನಗಂತೂ ಹೇಳಿ ಹೋಗಲಿಲ್ಲ !” ಮೆಲು ಧ್ವನಿಯಲ್ಲಿ ಹೇಳಿದ, “ಆದರೂ ಕಾಶ್ಮೀರಕ್ಕೆ ಹೋಗಿರುವ ಚಾನ್ಸ್ ಇದೆ. ಹಾಗೆಂದು ಯಾವಾಗಲೋ ಹೇಳಿದ ನೆನಪು !”

ಸ್ವಲ್ಪ ಯೋಚಿಸುವಂತೆ ಮಾಡಿತು ಕರ್ನಲ್‌ಗೆ ಆ ಉತ್ತರ.

ಅದೇ ಉತ್ತರ ಚಂದನ್‌ನನ್ನು ಜೋರಾಗಿ ನಗುವ ಸ್ಟೇಜ್‌ನತ್ತ ದೂಡಿತು. ಯಾವುದೇ ಕ್ಷಣದಲ್ಲಾದರೂ ಬಿರಿದು ಹೊರ ಚೆಲ್ಲಬಹುದು ಅವನ ನಗು !

ಅದನ್ನು ಗಮನಿಸಿ ಕಂಗಾಲಾಗಿ ಅವನ ಕಾಲಮೇಲೆ ಕಾಲಿಟ್ಟು ಬಲವಾಗಿ ಅದುಮಿದ ಶ್ಯಾಂ.

"ಆಲ್‌ರೈಟ್ ..... ಮಹೇಶನ ಅಪಾರ್ಟ್‌ಮೆಂಟ್ ಫೋನ್ ನಂಬರ್ ಏನು ?" ದಿಢೀರನೆ ಕೇಳಿದರು ಕರ್ನಲ್.

ಗಂಟಲಲ್ಲೇನೋ ಸಿಕ್ಕಿಕೊಂಡಂತೆ ಫೀಲಾದ ಶ್ಯಾಂ. ಅಲ್ಲಿಗೆ ಫೋನ್ ಮಾಡಿದರೆ ತನ್ನ ಗೋರಿ ತೋಡಿದಂತೆಯೇ ಲೆಕ್ಕ. ಹೌಸ್‌ಕೀಪರ್ ವಿವರಗಳನ್ನೆಲ್ಲಾ ಒಪ್ಪಿಸಿಬಿಡುತ್ತಾಳಷ್ಟೇ.

"ಹ್ಹ ಹ್ಹ ಹ್ಹ .....!" ದೇಶಾವರಿನಗೆಯೊಡನೆ ಹೇಳಿದ ಶ್ಯಾಂ, "ಫೋನೆಲ್ಲಾ ಯಾಕೆ ಸಾರ್."

ಬೀಗ ಹಾಕಿದ್ದರೇನು ಮಾಡುವುದು ? ಕಾರು ಕಳಿಸಿದರೆ.....ಬಾಬು ಕರೆತರುತ್ತಾನೆ....."

"ರಾಸ್ಕಲ್ಸ್.....ಈಡಿಯಟ್ಸ್.....ನೀವೆಲ್ಲಾ ಸೇರಿ ನಾಟಕವಾಡುತ್ತಿದ್ದೀರಿ. ನಿಮ್ಮನ್ನು .... ನಿಮ್ಮನ್ನು......"ಎಂದವರು ಎಕ್ಸ್‌ಪ್ಲೋಡ್ ಆಗುತ್ತಿರುವಾಗಲೇ ಸ್ಪ್ರಿಂಗ್ ಡೋರ್ಸ್ ತಳ್ಳಿಕೊಂಡು ಒಳಕ್ಕಡಿಯಿಟ್ಟಳು ಸೋಫಿಯಾ.

ಅವಳನ್ನು ಕಾಣುತ್ತಿದ್ದಂತೆ ಇನ್ನಷ್ಟು ತಾರಕಸ್ಥಾಯಿ ತಲುಪಿತು ಕರ್ನಲ್‌ರ ಕೋಪ.

"ವೇರೀಸ್ ದಟ್ ಡರ್ಟಿ ಸ್ಕೌಂಡ್ರಲ್ ? ಮೂರು ದಿನಗಳಿಂದ ಎಲ್ಲ ಹಾಳಾಗಿ ಹೋಗಿದ್ದೆ ? ಇಂದು ಪ್ಯಾರಿಸ್‌ಗೆ ಹೋಗಬೇಕೆನ್ನುವ ವಿಷಯ ನೆನಪಿದೆಯೇ ?" ಸಿಡಿಲಿನ ಧ್ವನಿಯೊಡನೆ ಸರ್‍ರನೆ ಅವಳ ಮೇಲೆ ಬಿದ್ದರು.

ಏನೋ ಹೇಳಿದಳು ತುಟಿ ತೆರೆದಳು ಸೋಫಿಯಾ.

ಆಗಲೇ ಟೇಬಲ್ ಮೇಲಿದ್ದ ನೀಲಿರಂಗ್‌ನ ಟೆಲಿಫೋನ್ ಒಂದೇಸಮ ಟ್ರಿಣ್ಣಿಸತೊಡಗಿತು. ಅದರತ್ತ ಎರಡು ಕ್ಷಣ ದುರುದುರು ನೋಡಿ ರಿಸೀವರ್ ಎತ್ತಿ ಕಿವಿಗಾನಿಸಿಕೊಂಡು ಕರ್ನಲ್ "ಹಲೋ......ಕರ್ನಲ್ ಕುಮಾರ್ !" ಅಂದರು.

"ಕರ್ನಲ್.....ಏಕಷ್ಟು ಕೋಪ ? ಎಂದಿನಂತೆ ವಂಡರ್ ಬಾಯ್ ಅಡ್ರಸ್ ಕೊಡದೆ ಅದೃಶ್ಯನಾಗಿದ್ದಾನೆಯೇ ?" ಹಾಸ್ಯ ಮಿಶ್ರಿತ ಹೋಮ್ ಮಿನಿಸ್ಟರ್ ಧ್ವನಿ ಅತ್ತಬದಿಯಿಂದ ಕೇಳಿ ಬಂತು.

"ಓಹ್.....ನೀವಾ ? ಸಾರಿಸರ್ ! ಗುಡ್ ಮಾರ್ನಿಂಗ್, ಖಂಡಿತಾ ಬರುತ್ತಾ ನಮ್ಮ ಅರಿಯದ ಕುದುರೆಗಳು ಕತ್ತೆಗಳಾಗುತ್ತಿರುವ ರೀತಿಗೆ ಸ್ವಲ್ಪ

ಎಕ್ಸೈಟ್ ಆಗಿದ್ದೆನಷ್ಟೇ !" ಕಿರುನಗೆಯೊಡನೆ ಹೇಳಿದರು ಕರ್ನಲ್ "ಏನು ವಿಶೇಷ ?"

"ಕರ್ನಲ್.....ಬಿಡುವಿದ್ದರೆ.....ನನ್ನ ಬಂಗಲೆಗೆ ಬರುವಿರಾ ?" ಪೊಲೈಟ್ ಆಗಿ ಕರೆದರು ಸನ್ಮಾನ್ಯ ಗೃಹಸಚಿವರು.

"ತಕ್ಷಣ ಬರುತ್ತೇನೆ ಸಾರ್ !" ಅನ್ನುತ್ತಾ ರಿಸೀವರ್ ಕೆಳಗಿಟ್ಟರು ಕರ್ನಲ್ ಮುಂದಿದ್ದ ಮೂವರ ಕಡೆ ತಿರುಗಿದರು,"ನಾನೀಗ ಹೊರಗೆ ಹೋಗುತ್ತಿದ್ದೇನೆ. ಬರಲು ಒಂದು ಗಂಟೆಯಾಗಬಹುದು. ನಿಮ್ಮೊಡನೆ ಡಿಸ್ಕಸ್ ಮಾಡುವ ಅನೇಕ ವಿಷಯಗಳಿವೆ. ಸೋ.....ನಾನು ಬರುವವರೆಗೆ ಇಲ್ಲೇ ಇರಿ !" ಎಂದು ಕಮಾಂಡ್ ಮಾಡಿ ಕುರ್ಚಿಗೆ ಸಿಗಿಸಿದ್ದ ಕೋಟೆಳೆದುಕೊಂಡ ಆತುರದ ನಡಿಗೆಯಲ್ಲಿ ಹೊರಕ್ಕೆ ನಡೆದರು.

"ಶ್ರೀ ಮನ್ನಾರಾಯಣ ...... ಗೋವಿಂದಾ .... ಗೋವಿಂದಾ ...... ಹೀಗಿರಲೊಂದು ದಿನ ಶ್ರೀ ಕೃಷ್ಣನು ದ್ವಾರಕೆಯಲ್ಲಿ ಗೋಪಿಕಾ ಸ್ತ್ರೀಯರೊಡನೆ....." ಅನ್ನುತ್ತಾ ಹರಿಕಥೆಯ ತುಣುಕೊಂದನ್ನು ನಾಲಿಗೆಗಂದಿಸಿಕೊಂಡ ಚಂದನ್. ಕರ್ನಲ್ ಎದುರಿಸಿಲ್ಲದಿರುವುದೇ ದೊಡ್ಡ ರಿಲೀಫ್ ಅವನಿಗೆ !

"ಷಟ್ ಇವರ್ ಬ್ಲಡಿ ಮೌತ್ ಸ್ಮಾಲ್ ಮಂಕಿ.....ಸುಮ್ಮನಿರುವೆಯೋ ತಲೆಯ ಮೇಲೆ ಮಹೇಶನಂತೆ ಮೊಟಕಬೇಕೋ ?" ಕೈ ಮೇಲೆತ್ತಿ ಕೋಪದೊಡನೆ ಹೇಳಿದಳು ಸೋಫಿಯಾ.

"ಅಯ್ಯಯ್ಯೋ.... ಒನಕೆಯ ಕಾಟ ತಪ್ಪಿ ಶೆಂದುಕೊಂಡರೆ ಮಿಕ್ಸಿಯೊಳಗೆ ಬೀಳುವ ನೋವು ಬಂತಲ್ಲಪ್ಪೋ...."ಎಂದು ಅರಚಿ ಒಮ್ಮೆಲೇ ಗಪ್‌ಚಿಪ್ಪಾದ ಚಂದನ್.

"ಸೋಫಿಯಾ.....ಮಹೇಶ ಎಲ್ಲಿ ?" ಆತಂಕದ ಧ್ವನಿಯೊಡನೆ ಕೇಳಿದ ಶ್ಯಾಂ.

"ಬಾಂಬೆಯಲ್ಲಿ.....ಮೆಹರ್‌ವಾಡೆ ಏರಿಯಾದಲ್ಲಿದ್ದಾನೆ ಮಹೇಶ ! ನೀವಿಬ್ಬರೂ ತಕ್ಷಣ ಅಲ್ಲಿಗೆ ಹೋಗಬೇಕಂತೆ !" ಎಂದು ಅಲ್ಲಿ ನಡೆದ ಘಟನೆಗಳನ್ನೆಲ್ಲಾ ಡಿಟೈಲಾಗಿ ವಿವರಿಸಿದಳು ಸೋಫಿಯಾ

"ಅಕ್ಕ.....ನೀನು ನಿಜವಾಗಲೂ ದೇವತಾ ಸ್ವರೂಪಿ ! ಬಾಸ್ ಕೋಪ

ದಿಂದನಮ್ಮನ್ನು ರಕ್ಷಿಸಿದೆ. ನೀವೀಗ ಹಾಜರಾಗದಿದ್ದರೆ ನಮ್ಮನ್ನು ಮೆಂಟಲ್ ಹಾಸ್ಪಿಟಲ್‌ಗೆ ಅಡ್ಮಿಟ್ ಮಾಡಬೇಕಾಗಿತ್ತು !" ಅಂದ ಚಂದನ್.

"ರೈಟೋ ಸನ್ನಿ ಬಾಯ್ಸ್.....ಈಗ ನೀವಿಬ್ಬರೂ ಬಾಂಬೆಗೆ ಹೊರಡಿ. ಬಾಸ್ ಬಂದರೆ ನಾನು ಚಂದನನ ತಾತನ ಅಕ್ಕನಿಗೆ ಸಿಕ್ಕಿಬಿಟ್ಟಿ ಸೀರಿಯಸ್ ಎಂದು ಟ್ರಂಕಾಲ್ ಬಂತು. ಮೂರ್ಛೆಹೋದ ಅವನನ್ನು ಟ್ಯಾಕ್ಸಿಯಲ್ಲಿ ಸ್ಟೇಷನ್‌ಗೆ ಶ್ಯಾಂ ಕರೆದೊಯ್ದ ಇಬ್ಬರೂ ನಾಳೆಯೋ, ನಾಳಿದ್ದೋ ಬಂದು ಬಿಡುತ್ತಾರಂತೆ ಎಂದು ಹೇಳಿಬಿಡುತ್ತೇನೆ. ನಾನಂತೂ ಇಂದು ಎಸ್ಕೇಪ್ ಆಗುತ್ತೇನೆ. ಆಮೇಲೆ ನೀವು ಏನುಬೇಕಾದರೂ ಹೇಳಿಕೊಳ್ಳಿ....."ಎಂದು ಉಚಿತ ಸಲಹೆಯೊಂದನ್ನು ನೀಡಿದಳು ಸೋಫಿಯಾ.

ಅಷ್ಟೇ ಸಾಕೆಂಬಂತೆ ಅಲ್ಲಿಂದ ಜಾಗ ಖಾಲಿ ಮಾಡಿದರು ಶ್ಯಾಂ, ಚಂದನ್.

## ೫

ರಾತ್ರಿ ಹತ್ತರ ಮೇಲೆ.

ಸಿಗರೇಟ್ ಚೈನ್ ಸ್ಮೋಕ್ ಮಾಡುತ್ತಾ ಇರಾನಿ ಹೋಟೆಲ್‌ನಿಂದ ನೂರುಗಜಗಳಷ್ಟು ದೂರದಲ್ಲಿ ನಿಂತು ಬಂದು–ಹೋಗುತ್ತಿರುವ ಕಸ್ಟಮರ್‌ಗಳನ್ನೆಲ್ಲಾ ತೀಕ್ಷ್ಣವಾಗಿ ಪರಿಶೀಲಿಸುತ್ತಿದ್ದ ಮಹೇಶ. ಕತ್ತಲಲ್ಲಿ ನಿಂತಿರುವ ಕಾರಣ ಅವನನ್ಯಾರೂ ಅಷ್ಟು ಸಲೀಸಾಗಿ ಗುರುತಿಸಲಾಗದು.

ರಾತ್ರಿಯ ಘಟನೆಗಳ ನಂತರ ದಾವೂದ್‌ನ ಚಂಚಾಗಳು ತನಗಾಗಿ ಊರೆಲ್ಲಾ ಹುಡುಕಾಡುತ್ತಿರುವುದು ಗ್ಯಾರಂಟಿ. ತನಗಾದರೋ ದಾವೂದ್ ಬಾಯಿ ಬಿಡುವವರೆಗೆ ಅವನಿಂದ ಎಷ್ಟು ಉಪಯೋಗ ಎನ್ನುವುದನ್ನು ತಿಳಿಯಲಾಗದ ಸಂಕಷ್ಟ.

ಕತ್ತಲ ಪ್ರಪಂಚದ ಅನಭಿಷಿಕ್ತ ದೊರೆಗಳಲ್ಲೊಬ್ಬನಾದ ದಾವೂದ್‌ನಂತಹ ಘಟಿಂಗರ ಬಾಯಿ ಬಿಡಿಸುವುದು ಅಷ್ಟು ಸುಲಭದ ಕೆಲಸವಲ್ಲ. ಬಿಡಿಸಿದರಂತೂ..... ಮತ್ತೆ ಅವರ ಬಾಯಿ ಮುಚ್ಚಿಸುವುದೇ ಕಷ್ಟ! ತಿಳಿಯುವುದೆಲ್ಲಾ ಕಕ್ಕುವವರೆಗೆ ಅವರಿಗೆ ಸಮಾಧಾನವಿರದು.

ಇನ್ನು ಬೊಂಬಾಯಿಯ ಬಗ್ಗೆ ಯೋಚಿಸಿದರೆ..... ಅಲ್ಲಿರುವ ರೌಡೀಯಿಜಂ, ಅವರು ಆರ್ಗನೈಸ್ ಆಗಿರುವ ರೀತಿ ದೇಶದ ಇನ್ನೆಲ್ಲೂ ಕಾಣಸಿಗದು. ಇಂತಹ ರೌಡಿಗಳ ಹಿಂದೆ ನಿಂತು ತಮ್ಮ ಪಟ್ಟಭದ್ರ ಹಿತಾಸಕ್ತಿ ಕಾಯುಕೊಳ್ಳುವ ಜನರೆಂದರೆ..... ಸ್ಮಗ್ಲರ್ಸ್. ಅವರ ದಾರಿಗಡ್ಡ ಬರುವವರ ನಿರ್ದಯವಾಗಿ ತರಿದು ಹಾಕುವುದೇ ದಾವೂದ್‌ನಂತಹ ದಾದಾಗಳ ದಂಧೆ!

ಕ್ಷಣಕ್ಕೊಂದು ಆಲೋಚನಾಲಹರಿ ಅವನ ಮನದಲ್ಲಿ. ಓವರ್ ಟೈಂ ಮಾಡತೊಡಗಿತ್ತು ಕಂಪ್ಯೂಟರ್ ಮಿದುಳು.

ಹೀಗೆಯೇ ಅರ್ಧ ಗಂಟೆ ಕಳೆಯಿತು.

ಜೇಬಿನಿಂದ ಇನ್ನೊಂದು ಸಿಗರೇಟ್ ತೆಗೆದು ಹತ್ತಿಸಿದ ಮಹೇಶ. ಎರಡು ದಂ ಎಳೆದು ಮೂರನೇ ದಂ ಎಳೆಯುವ ಪ್ರಯತ್ನದಲ್ಲಿರುವಾಗಲೇ.....ಆ ಗಲ್ಲಿಯ ಪ್ರವೇಶದಲ್ಲಿ ಓಡೋಡಿ ಬರುತ್ತಿರುವ ಹತ್ತು ಜನ ದೃಢಕಾಯರು ಕಣ್ಣಿಗೆ ಬಿದ್ದರು.

"ಅಲ್ಲಿ ನೋಡಿ......ಅವನೇ ನಿನ್ನೆ ರಾತ್ರಿ ತಪ್ಪಿಸಿಕೊಂಡವನು......ಮತ್ತೆ ಬಂದಿದ್ದಾನೆ. ಹಿಡಿಯಿರಿ......" ಎಂಬ ಕೂಗುಗಳೊಡನೆ ಪ್ರತಿಧ್ವನಿಸಿತು ಆ ಪ್ರದೇಶ.

ಯಾರೋ ಎಳೆದು ಮುಖಕ್ಕೊಂದು ಬಿಟ್ಟಂತೆ ಕಕ್ಕಾಬಿಕ್ಕಿಯಾದ ಮಹೇಶ. ತಾನಂದುಕೊಂಡಿದ್ದಂತೆಯೆ ಆಗಿಹೋಯಿತೀಗ. ಬೇಗ ಜಾಗ ಖಾಲಿ ಮಾಡುವುದು ತನ್ನ ಆರೋಗ್ಯಕ್ಕೆ ಒಳಿತು!

ಎಲ್ಲಾ ಯೋಜನೆಗಳಿಗಿಂತ ಅಗ್ರಪಂಕ್ತಿಯಲ್ಲಿ ಇದೇ ಯೋಚನೆ ಸುಳಿಯತೊಡಗಿದಾಗ ಗಿರ್ರನೆ ತಿರುಗಿ ಬಿಲ್ಲಿನಿಂದ ಹೊರಬಿಟ್ಟ ಬಾಣದೋಪಾದಿಯಲ್ಲಿ ಒಂದೇ ಓಟಕಿತ್ತ ಮಹೇಶ.

ಹತ್ತಡಿಯಷ್ಟು ಮುನ್ನಡೆದಿರಲಿಲ್ಲ ಅವನು. ಆಗಲೇ ಮೇಲೆ ಬಂದು ಬಿದ್ದನೊಬ್ಬ ದೃಢಕಾಯ.

"ಬನ್ನಿ......ಬನ್ನಿ......ಹಿಡಿದುಬಿಟ್ಟೆ !" ಎಂದು ಕೂಗಿಕೊಂಡ ಸಹ.

ಸ್ಪ್ರಿಂಗ್‌ನಂತೆ ಬಿಗಿದುಕೊಂಡವು ಮಹೇಶನ ಅವಯವಗಳು. ಮುಷ್ಟಿಗಟ್ಟಿ ಬಲವಾಗೊಂದು ಬಿಗಿದ ಅವನ ಮುಸುಡಿಯ ಮೇಲೆ. ಮೂರು ಹಲ್ಲುಗಳಾದರೂ ಪೀಸ್‌ಪೀಸ್ ಆಗಿರಬೇಕಾಗ......ಬಿಸಿರಕ್ತ ಹೊರನುಗ್ಗುತ್ತಿದ್ದಂತೆ ಗೊರಗೊರವೆನ್ನುತ್ತಾ ಬೀಳತೊಡಗಿದ ಅವನನ್ನಿಡಿದು ಅಲಕ್ಕಾಗಿ ಮೇಲೆತ್ತಿ ಬರುತ್ತಿದ್ದ ದೃಢಕಾಯರ ಕಡೆಗೆ ಬೀಸಿ ಒಗೆದ ಮಹೇಶ.

ನೇರ, ನಾಲ್ವರ ಮೇಲೋಗಿ ತನ್ನ ತೂಕಬಿಟ್ಟ ಅವನು. ಬ್ಯಾಲೆನ್ಸ್ ಕಳೆದುಕೊಂಡ ಅವರು ಹಾಹಾಕಾರವೆಸಗುತ್ತಾ ಎರಡೂ ಬದಿಯ ಮೋರಿಗಳೊಳಕ್ಕುರುಳಿದರು. ಮೇಲೆದ್ದಾಗ ಅವರದೆಲ್ಲಾ ಫೇಟ್ ಹಂದಿಗಳ ಅವತಾರವೇ ! ಹೊಲಸುಕೆಸರಿಂದಾವೃತಗೊಂಡ ದೇಹಗಳು.

ಕೆಳಗೆ ಬಿದ್ದವನ ದೇಹವನ್ನೇ ತುಳಿದುಕೊಂಡೇ ಮುಂದೆ ಸಾಗಿದರು ಕೆಲವರು ದೃಢಕಾಯರು.

ಆ ಗಲ್ಲಿಯಿಂದ ಸ್ಕಿಪ್ ಆಗಿ ಬೇರೊಂದು ರಸ್ತೆಗಿಳಿದು ಮುಂದಕ್ಕೋಡಿದ ಮಹೇಶ. ಆದೀಗ ತಾನೇ ತಗ್ಗತೊಡಗಿತ್ತು ಜನ ಸಂದಣಿ ರಸ್ತೆಗಳಲ್ಲಿ. ತನ್ನ ಅತೀ ಆತ್ಮ ವಿಶ್ವಾಸಕ್ಕೆ ಹಳಿದುಕೊಳ್ಳುತ್ತಾ ಜರ್ಮನ್ ಹಂಟಿಂಗ್ ಡಾಗ್‌ಗಳಂತೆ ಬೆನ್ನು ಬಿದ್ದಿರುವ ದೃಢಕಾಯರನ್ನು ನಿಶ್ಶಬ್ದವಾಗಿ ಬೈದುಕೊಳ್ಳುತ್ತಾ ರಸ್ತೆಯ ಕೊನೆ ಸಮೀಪಿಸಿದ.

ಅಲ್ಲ ನಾಲ್ವರು ಪೌರರು ಏನನ್ನೋ ಮಾತಾಡುತ್ತಾ ನಿಂತಿದ್ದರು. ದೂರದಿಂದಲೇ ಮಹೇಶನ ಓಟವನ್ನು ಗಮನಿಸುತ್ತಿದ್ದ ಅವರಲ್ಲೊಬ್ಬ ಕಳ್ಳನಿರಬಹುದೆಂಬ ತೀರ್ಮಾನಕ್ಕೆ ಬಂದವನೆ ರಾಕೆಟ್‌ನಂತೆ ಬರುತ್ತಿರುವ ಮಹೇಶ ಅಡ್ಡ ಬಂದ.

"ಏಯ್......ಯಾರೋ ನೀವು ? ಏಕೆ ಹೀಗೆ ಓಡುತ್ತಿರುವೆ ?" ದರ್ಪದೊಡನೆ ಪ್ರಶ್ನಿಸಿದ.

"ಮನೆಯಲ್ಲಿ ಹೇಳಿ ಬಂದಿರುವೆಯ ತಮ್ಮ ? ಡಝನ್ ಪೋಲೀಸರಿಗೆ ಹೊಡೆದು ಇಬ್ಬರು ಎಸ್‌ಪಿ.ಗಳಿಗೆ ಚಾಕು ಹಾಕಿ ಬಂದಿರುವ ಧೀರ ನಾನು ! ನಿನಗೂ ಹೊಲಿಗೆ ಹಾಕಿಸಿಕೊಳ್ಳುವ ಆಸೆಯೋ ?" ಜೇಬಿಗೆ ಕೈ ಹಾಕುತ್ತಾ ಡೈಲಾಗ್ ಹೊಡೆದ ಮಹೇಶ.

ಅವನ ಅವತಾರ, ಆವೇಶ ನೋಡುತ್ತಿದ್ದಂತೆ ಅಲ್ಲಿಯವರೆಗಿನ ಕುತೂಹಲ, ಪೌರಪ್ರಜ್ಞೆ ಹೇಳ ಹೆಸರಿಲ್ಲದಂತೆ ಪರಾರಿಯಾಗಿ ಎದೆ ಡಗಡಗವೆನ್ನ ತೊಡಗಿತು ಆ ನಾಲ್ವರಿಗೆ. ಅದರಂತೆಯೇ ಮಾಡಿಬಿಟ್ಟರೆ ಎಂಬ ಯೋಚನೆ ಅವರಲ್ಲೊಬ್ಬನಿಗೆ ಹೊಳೆದೊಡನೆ ಹಿಂದೆ ತಿರುಗಿ ದೌಡಾಯಿಸಿಬಿಟ್ಟ ಅವ. ಮಿಕ್ಕ ಮೂವರು ಅವನ ಹಿಂದೆ !

"ಅಲ್ಲಿ....ಅಲ್ಲಿದ್ದಾನೆ ನೋಡಿ......ಹಿಡಿಯಿರಿ......ಕೈ ಕಾಲು ಮುರಿಯಿರಿ" ಎಂದು ಅರ್ಭಟಿಸುತ್ತಾ ಮುನ್ನುಗ್ಗಿ ಬಂದರು ದೃಢಕಾಯರ ಗುಂಪು.

ಅಲ್ಲೇ ನಿಲ್ಲಲು ಮಹೇಶನೇನು ಗಾಂಪನೇ!

ಮತ್ತೆ ತನ್ನ ಕನ್ನಿಂಗ್‌ರೇಸ್ ಶುರು ಮಾಡಿದ. ಹಾಗೆಯೇ ಇವರಿಗೆ ಸಂಪೂರ್ಣ-ಕೈ ಕೊಡುವ ದಾರಿಗಾಗಿ ಅನ್ವೇಷಿಸತೊಡಗಿತು ಮಿದುಳು.

ಕಾರ್ಗತ್ತಲಗವಿಯಂತಿತ್ತು ಆ ರಸ್ತೆ. ಅದರ ನಡುವೆ ಒಂದಡಿ ಮಲಗಿ ಆರಾಮಾಗಿ ವಿಶ್ರಾಂತಿ ತೆಗೆದುಕೊಳ್ಳುತ್ತಿತ್ತೊಂದು ಬೀದಿ ನಾಯಿ. ಜಿಗ್ ಜಾಗಾಗಿ ಓಡಿ ಬರುತ್ತಿದ್ದ ಮಹೇಶನ ಪಾದ ಕಾಲಮೇಲೆ ಸರಿಯಾಗಿ ಬಿದ್ದಿತ್ತು.

ಮರುಕ್ಷಣ ಪ್ರಳಯವೇ ಆದಂತೆ ಭಯಂಕರವಾಗಿ ಬೊಗಳುತ್ತಾ ಅವನ ಅವನ ಹಿಂದೆ ಬಿತ್ತು ಆ ಶುನಕ.

ಇದೊಂದು ಬಾಕಿ ಇತ್ತು ಎಂಬ ಭಾವನೆಯಿಂದಲೇ ಪೈ[illegible] ಉರಿದು ಹೋಗಿ ಹಿಂದೆ ತಿರುಗಿ ರಪ್ಪನೊದ್ದ ಮಹೇಶ ಅದರ ಪಕ್ಕೆಗೆ.

ಕೊಯಕೊಯವೆನ್ನುತ್ತಾ ಫುಟ್‌ಬಾಲ್‌ನಂತೆ ಮೇಲೆದ್ದಿತ್ತು ನಾಯಿ ಮುಂದಿನ ಕ್ಷಣ. ಕಾರ್ಪೊರೇಷನ್ ತೊಟ್ಟಿಯೊಳಗೋಗಿ ಬಿದ್ದು ಮೇಲೆದ್ದು ಕುಯ್ಯೋ ಮತ್ತೆ ಎಂದು ಗೋಳಿಡತೊಡಗಿತು.

ರಸ್ತೆಯ ಎಂಟ್ರೆನ್ಸ್‌ನಲ್ಲಿ ನಿಂತು ಮಹೇಶ ಎತ್ತಹೋದನೆಂದು ತಿಳಿಯದೆ ತಲೆ ಕೆರೆದುಕೊಳ್ಳುತ್ತಿದ್ದ ದೃಢಕಾಯರಿಗೆ ನಾಯಿಯ ಕೂಗು ಡೈರೆಕ್ಷನ್ ಫೈಂಡರ್‌ನಂತಹ ಕೆಲಸಮಾಡಿತ್ತೆನ್ನಬಹುದು !

ಕೂಗಾಡುತ್ತಾ ರಸ್ತೆಯಲ್ಲಿ ನುಗ್ಗಿ ಬಂದರು.

'ತಥ್ಥೇರಿ' ಎಂದುಕೊಳ್ಳುತ್ತಾ ಹೇಗೆ ಇವರ ಕಣ್ಣಿಂದ ಪಾರಾಗುವುದು ಎಂಬ ಯೋಚನೆಯೊಡನೆಯೇ ಸಣ್ಣದೊಂದು ಸರ್ಕಲ್ ಸಮೀಪಿಸಿದ ಮಹೇಶ.

ಅಲ್ಲಿನ ಟೀಸ್ಟಾಲ್‌ಗಳು ಆದಾಗ ತಾನೇ ಕ್ಲೋಸ್ ಆಗತೊಡಗಿದ್ದವು. ಚಿಲ್ಲರೆ ಅಂಗಡಿಗಳು ಒಂದೋ ಎರಡೋ ತೆರೆದಿದ್ದವು. ಜನರೂ ಅಷ್ಟಿಲ್ಲ.

ಹಾಗಿರುವಾಗಲೇ ಅದೇಕೋ ಕೇಡನ್ನು ಶಂಕಿಸತೊಡಗಿತು ಒಳ ಮನಸ್ಸು. ಅಪಾಯ......ಅಪಾಯ......ಅನ್ನತೊಡಗಿತು. ಇದುವರೆಗೆ ಅಷ್ಟೊಂದು ದೃಢಕಾಯರು ಬೆನ್ನು ಬಿದ್ದಿದ್ದಾಗಲೇ ಉಸಿರೆತ್ತದಿದ್ದ ಅಂತರಂಗ!

ಅಪಾಯ ಏನೆಂದು ಅರ್ಥವಾಗಲು ಹೆಚ್ಚು ಸಮಯ ಹಿಡಿಯಲಿಲ್ಲ. ಅರ್ಥವಾದೊಡನೆ ಟಕ್ಕನೆ ನಿಂತವು ಕಾಲುಗಳು ಸಡನ್ ಬ್ರೇಕ್ ಹಾಕಿದಂತೆ.

ಇಬ್ಬರು ಬೀಟ್ ಕಾನ್ಸ್‌ಟೇಬಲ್‌ಗಳು ಅವನ ನಾಗಾಲೋಟವನ್ನು ಗಮನಿಸಿಬಿಟ್ಟಿದ್ದರು. ಕಳ್ಳನೆಂಬ ಭಾವನೆ ಪ್ರಬಲವಾಗಿ ಒಮ್ಮೆಲೇ ನುಂಗಿ ಬಿದ್ದು ಅವನ ಎರಡೂ ಕಡೆ ಆಕ್ರಮಿಸಿ ತೋಳುಗಳನ್ನು ಬಿಗಿಯಾಗಿಡಿದರು.

ಈ ಹೊಸ ಪೀಡೆಗೆ ನಿಜಕ್ಕೂ ನಿಬ್ಬೆರಗಾದ ಮಹೇಶ. ಈ ಕ್ರಿಟಿಕಲ್ ಪೊಜಿಷನ್‌ನಿಂದ ಪಾರಾಗುವುದು ಹೇಗೆಂಬುದೇ ಅರ್ಥವಾಗದೆ ಕ್ಷಣದಲ್ಲಿ ಬ್ಲಾಂಕಾಯಿತು ಮಿದುಳು. ಇವರಿಗೆ ವಿವರಿಸುವಷ್ಟರಲ್ಲಿ ಹಿಂದಿನವರು ಬಂದು ಮೇಲೆ ಬಿದ್ದು, ಪೋಲೀಸರ ಬೆಂಡ್‌ಬೇಕಾದರೂ ತೆಗೆದು ತನ್ನ ಎಳೆದೊಯ್ಯುತ್ತಾರೆ. ಆದ್ದರಿಂದ ಅವರಲ್ಲಿ ಹಾಜರಿರುವುದರೊಳಗೆ ತಾನು ಈ ಹೀರೋಗಳಿಂದ ಪಾರಾಗಬೇಕು......

“ಏನೋ ? ನೋಡಿದರೆ ಸಿನಿಮಾ ಹೀರೋ ಇದ್ದಂತಿರುವೆ ! ಮಾಡುವುದು ಮಾತ್ರ ಹಲ್ಕಾ ಕೆಲಸ. ಏನು ನಿನ್ನ ಕೇಸು ? ರಾಬರಿ ರೇಪ್, ಮರ್ಡರ್, ಸ್ಮಗ್ಲಿಂಗ್ ಕಿಡ್‌ನ್ಯಾಪಿಂಗ್......?” ಹೋಟೆಲ್ ಸಪ್ಲಯರ್ ತಿಂಡಿಗಳ ಹೆಸರೇಳುವಂತೆ ಒಂದೊಂದೇ ಅಪರಾಧ ಪೈಲ್ ಮಾಡತೊಡಗಿದ ಒಬ್ಬ. ಇನ್ನೊಬ್ಬ ಕಾಲುಗಳ ಮೇಲೆ ಲಾಠಿಯಿಂದ ಒಂದೆರಡು ಏಟುಗಳನ್ನು ಬಿಟ್ಟ !

ಅಲ್ಲಿಗೆ ಮುಗಿಯಿತು ಮಹೇಶನ ಸಹನೆ ಸಿಕ್ಕಿದವರ ಸಿಕ್ಕಿದಂತೆ ದೋಚುವುದು ಮಾತ್ರ ತಮ್ಮ ಕರ್ತವ್ಯ ಅಂದುಕೊಂಡಿದ್ದಾರೆ ಈ ನಾಲಾಯಕ್ ಜನ ಅವರ ಔಷಧಿ ಅವರಿಗೆ ಕುಡಿಸಿದರೇನೇ ಅರ್ಥವಾಗುವುದು ಇವರಿಗೆ !

ಸುಂಯ್ಯನೆ ಮೇಲೆದ್ದು ಫಟ್ಟನೆ ಅಪ್ಪಳಿಸಿತ್ತವನ ಬಲವಾದ ಒಬ್ಬನ ಮಂಡಿ ಚಿಪ್ಪಿಗೆ. ಇನ್ನೊಬ್ಬನ ಹೊಟ್ಟೆಗೆ ರೈಟ್ ಎಲ್ಬೋ !

"ಅಯ್ಯೋ......ಅಮ್ಮಾ......" ಎಂದವರು ಕೂಗಿಕೊಳ್ಳುತ್ತಾ ಒಂಟಿ ಕಾಲ ಮೇಲೊಬ್ಬ, ಮೊಣಕಾಲ ಮೇಲೊಬ್ಬ ಕುಯಿಲಿಡತೊಡಗಿದಂತೆ ರೇಸ್ ಕುದುರೆಯು ತನ್ನ ಕಾಯಕಕ್ಕೆ ಮತ್ತೆ ಚಾಲನೆಕೊಟ್ಟ ಮಹೇಶ

ನಿಮಿಷದ ನಂತರ ಆ ಸೆಂಟರ್ ತಲುಪಿದ ದೃಢಕಾಯರು ಪಿ.ಸಿ.ಗಳಿಗೆ ಕೈಕೊಟ್ಟು ಮೇಲೆಬ್ಬಿಸಿ ಸಿಂಪತಿಯೊಡನೆ ಲೊಚಗುಟ್ಟುತ್ತಾ ವಿಷಯ ವನ್ನೆಲ್ಲಾ ತಿಳಿದುಕೊಂಡು ಅವರನ್ನಲ್ಲೇ ಬಿಟ್ಟು ತಾವು ಮಾತ್ರ ಮುಂದ ಕ್ಕೋಡಿದರು !

ಅಷ್ಟರಲ್ಲಾಗಲೇ ಅವರಿಂದ ಫರ್ಲಾಂಗ್‌ನಷ್ಟು ಮುಂದಿದ್ದ ಮಹೇಶ. ಸುಂಟರ ಗಾಳಿಯಂತೆ ಮುನ್ನುಗ್ಗುತ್ತಿದ್ದ ಅವನು ರೋಡ್ ಕ್ರಾಸ್ ಮಾಡು ತ್ತಿರುವಾಗಲೇ ಎದುರಿಗೆ ಬಂದಿದ್ದನೊಬ್ಬ ವ್ಯಕ್ತಿ.

"ಸಾರ್......ಈಗಾಗಲೇ ಬಹಳ ಬಳಲಿದ್ದೀರಿ. ಇನ್ನೂ ತೊಂದರೆ ತೆಗೆದುಕೊಳುವ ಅವಶ್ಯಕತೆಯಿಲ್ಲ. ಸುಮ್ಮನೆ ನನ್ನೊಡನೆ ಬನ್ನಿ......" ಮುಗುಳ್ನಗೆಯೊಡನೆ ಮುಕ್ತಾ ಆಹ್ವಾನವಿತ್ತ.

"ಯಾರು ನೀನು ಫ್ರೆಂಡ್ ?" ಏದುಸಿರಿನೊಡನೆ ಸಂಶಯದ ನೋಟ ಬಿಡುತ್ತಾ ಕೇಳಿದ ಮಹೇಶ.

"ನಿನ್ನ ಹಿತಾಚಿಂತಕ......ಅದರಲ್ಲಿ ಸಂಶಯನೇ ಬೇಡ !" ಎನ್ನುತ್ತಾ ಮಹೇಶನ ಕೈಹಿಡಿದು ಬಲವಂತವಾಗಿ ರಸ್ತೆಯ ಬದಿಗೆ ನಿಲ್ಲಿಸಿದ ಅಂಬಾಸಡರ್ ಕಾರಿನ ಕಡೆಗೆ ಎಳೆದೊಯ್ದ ಆ ವ್ಯಕ್ತಿ.

ಏನಾದರಾಗಲೆಂದು ಸುಮ್ಮನಾದ ಮಹೇಶ. ಸದ್ಯ ಓಡುವ ತೊಂದರೆ ತಪ್ಪಿದರಷ್ಟೇ ಸಾಕು. ಹಾಗೂ ಈ ಹಿತಚಿಂತಕ ಛತ್ರಿ ಫರಾಯಿಸಿದರೆ ಬುರುಡೆ ಎಗರಿಸಿದರಾಯಿತು !

ಕ್ಷಣಗಳ ನಂತರ ಕಾರು ಮುಂದಕ್ಕೆ ಚಲಿಸಿತು.

# ೬

ಗ್ಲಾಸ್‌ನಲ್ಲಿದ್ದ ಕೊನೆಯ ಗುಟುಕು ವಿಸ್ಕಿ ಸೇವಿಸಿ ಗ್ಲಾಸ್ ಟೇಬಲ್ ಮೇಲಿಟ್ಟು ಆ ವ್ಯಕ್ತಿಯನ್ನೇ ತೀಕ್ಷ್ಣವಾಗಿ ದಿಟ್ಟಿಸುತ್ತಾ ಸಿಗರೇಟೊಂದು ಹಚ್ಚಿಕೊಂಡ ಮಹೇಶ.

ಆ ವೇಳೆಗಾಗಲೇ ತನ್ನ ಗ್ಲಾಸ್ ಸಹ ಖಾಲಿ ಮಾಡಿದ್ದ ಆತ ಕಿರುನಗೆ ಬೀರಿದ. ಫೈವ್ ಸ್ಟಾರ್ ಬಾರ್‌ನ ಒಂದು ಮೂಲೆಯ ಟೇಬಲ್ ಆಕ್ರಮಿಸಿದ್ದರು ಇಬ್ಬರೂ.

ಅವನ ವಯಸ್ಸು ಮುವ್ವತ್ತೈದಿರಬಹುದು. ಐದೂವರಡಿ ಎತ್ತರ, ಅದಕ್ಕೆ ತಕ್ಕ ಗಾತ್ರ. ನೀಟಾಗಿ ಷೇವ್ ಮಾಡಿರುವ ಮುಖ. ಎಣ್ಣೆ ಹಚ್ಚಿರುವ ತಲೆಗೂದಲು. ಬೆಲೆಬಾಳುವ ಬಟ್ಟೆಗಳು...... ಸರ್ಕಾರಿ ಅಧಿಕಾರಿಯ ಝೋಕು. ಆದರೆ ಪೋಲೀಸಲ್ಲ!

"ಯಾರು ಫ್ರೆಂಡ್ ನೀನು? ನಿನ್ನ ಹೆಸರೇನು?" ಕೇಳಿದ ಮಹೇಶ.

"ಖಂಡಿತಾ ಹೇಳುತ್ತೇನೆ ಅದರಲ್ಲಿ ಅನುಮಾನ ಬೇಡ. ಮೊದಲು ಒಂದು ಸಾವಿರ ರೂಪಾಯಿ ಇತ್ತ ಬಿಸಾಡು!" ನಿಧಾನವಾಗಿ ಹೇಳಿದ ಆತ.

ಮುಷ್ಠಿ ಅಯಾಚಿತವಾಗಿ ಬಿಗಿದವು. "ಏಕೆ?" ಪ್ರಶ್ನಿಸಿದ ಮಹೇಶ.

"ನೋಡು ಮಿಸ್ಟರ್......ನಿನ್ನನ್ನಿಲ್ಲಿಗೆ ಅಲ್ಲಿಂದ ಕರೆ ತಂದಿದ್ದಕ್ಕೆ ಏಳು ನೂರು ರೂಪಾಯಿಗಳು: ಕಾರಿನ ಬಾಡಿಗೆ ಮುನ್ನೂರು ರೂಪಾಯಿ. ಅರ್ಥವಾಯಿತೆ?" ಆಯ್ಲಿ ನಗೆಯೊಡನೆ ಹೇಳಿದ ಆವ್ಯಕ್ತಿ.

"ಐ. ಸೀ! ಹಾಗಾದರೆ ಆಪದ್ಬಾಂಧವ ಅನ್ನು! ಇದೇ ಕೆಲಸವೇನು ನಿನ್ನದು?"

"ಹೌದು! ಹೆಸರು ಸರ್ದಾರ್. ತೆಗೀ ಗುರು ಸಾವಿರ......" ಮತ್ತೊಮ್ಮೆ ಅದೇ ನಗೆ ಪ್ರದರ್ಶಿಸುತ್ತಾ ಕೇಳಿದ ಸರ್ದಾರ್.

"ಇದು ಬಹಳ ಅನ್ಯಾಯ...... ಆಫ್ಟರಾಲ್ ಕಾರಲ್ಲಿ ಡ್ರಾಪ್ ಕೊಟ್ಟ

ದ್ದಕ್ಕೆ ಇಷ್ಟೊಂದು ದುಡ್ಡೆ ? ಏನೇ ಆದರೂ ಕೊಡಲಾರೆ......" ಮೊಂಡನಂತೆ ಹೇಳಿದ ಮಹೇಶ.

"ಗುರು......ಪೋಲೀಸರ ಕೈನಲ್ಲಿ ಸಿಕ್ಕಿದ್ದರೆ ಹತ್ತು ವರ್ಷ ಅಂದರ್ ಆಗುತ್ತಿದ್ದುದು ಗ್ಯಾರಂಟಿ. ಅದಿರಲಿ ನೀನು ದಾವೂದ್ ದಾದಾನ ಹಿಂದೆ ಬಿದ್ದಿರುವವ ತಾನೇ ? ಆದ್ರೆ ದಾವೂದ್ ನಿನ್ನ ಮೇಲೆ ತನ್ನ ಬೇಟೆ ನಾಯಿಗಳನ್ನು ಛೂ ಬಿಟ್ಟಿರುವ ವಿಷಯ ಗೊತ್ತಿದೆಯೋ ?" ಕೇಳಿದ ಸರ್ದಾರ್.

ಆ ಮಾತುಗಳನ್ನು ಕೇಳಿದೊಡನೆ ಪ್ರತಿಮೆಯಂತೆ ಕುಳಿತುಬಿಟ್ಟ ಮಹೇಶ ಏನೇನೋ ಯೋಚನೆಗಳು ತಲೆಯೊಳಗೆ. ಇವನ ಬಳಿಯೇ ತನಗೆ ಬೇಕಾದ ವ್ಯಕ್ತಿಯ ಬಗೆಗಿನ ವಿವರಗಳನ್ನು ಅರಿತುಕೊಂಡರೆ ಹೇಗೆ ಅನ್ನಿಸಿತು. ಅಷ್ಟರಲ್ಲಿಯೇ ಏನೋ ಸಂಶಯ ಎಡತಾಕಿ ಕೇಳಬೇಕೆಂದು ಕೊಂಡ ಪ್ರಶ್ನೆಗಳ ತನ್ನಲ್ಲಿಯೇ ಅಡಗಿಸಿಕೊಂಡು ಪರ್ಸ್ ತೆಗೆದು ನೂರರ ಹತ್ತು ನೋಟುಗಳನ್ನೆಣಿಸಿ ಜೊತೆಗಿಪ್ಪತ್ತು ಸೇರಿಸಿ ಟೇಬಲ್ ಮೇಲೆಸೆದು ಹೇಳಿದ. "ಒಂದೂವರೆ ಪೆಗ್ ವಿಸ್ಕಿಗೆ ಇಪ್ಪತ್ತು ರೂಪಾಯಿ !"

ಸರ್ದಾರ್ ಮುಖ ಟ್ಯೂಬ್‌ಲೈಟ್‌ನಂತೆ ಬೆಳಗಿತು. ಉಸಿರೆತ್ತದೆ ನೋಟುಗಳನ್ನು ತನ್ನ ಜೇಬಿನೊಳಗೆ ತುರುಕಿಕೊಂಡ.

"ದಾವೂದ್ ಬಗ್ಗೆ ಇನ್ನಷ್ಟು ವಿವರಗಳು ಬೇಕೆಂದರೆ...ಇನ್ನೊಂದು ಸಾವಿರ ರೂಪಾಯಿ ಇತ್ತ ತಳ್ಳು !" ಅಂದ.

"ಇದು ಬಹಳ ಜಾಸ್ತಿ ಆಯಿತು !" ಅಂದ ಮಹೇಶ.

"ನಿನ್ನಿಷ್ಟ. ನನ್ನ ಚಾರ್ಜ್‌ನಲ್ಲಿ ನಯಾ ಪೈಸೆ ಕಡಿಮೆಯಿಲ್ಲ" ಅನ್ನುತ್ತಾ ಮೇಲೆದ್ದ ಸರ್ದಾರ್.

ಅವನ ಮುಸುಡಿಗೊಂದಿಕ್ಕ ಬೇಕೆಂಬ ಆಸೆಯನ್ನು ಕಷ್ಟಪಟ್ಟು ತಡೆ ಹಿಡಿದ ಮಹೇಶ. "ಫೈವ್ ಹಂಡ್ರೆಡ್ !" ಅಂದ.

"ಎಯ್ಟ್ ಹಂಡ್ರೆಡ್ !" ಅಂದ ಸರ್ದಾರ್.

ಕೊನೆಗೆ ಏಳುನೂರ ಐವತ್ತಕ್ಕೆ ಸೆಟಲ್ ಆಯಿತು !

"ಆಲ್‌ರೈಟ್ ದೋಸ್ತ್ ! ಮೋಸ ಮಾಡುವ ಇರಾದೆಯಿದ್ದರೆ ಪ್ರಾಣಕ್ಕೆ ಅಪಾಯ ಎಂಬುದು ನೆನಪಿರಲಿ !" ಎಂದು ಎಚ್ಚರಿಸಿ ಹಣ ತೆಗೆದು ಅವನ ಕೈಗಿತ್ತ ಮಹೇಶ.

"ನಿನ್ನಂತಹ ಧಾರಾಳಿಯನ್ನು ನಾನಿದುವರೆಗೆ ಕಂಡೇ ಇರಲಿಲ್ಲ ಗುರು!" ಬಾಯಿ ಹಿಗ್ಗಲಿಸಿ ನಗುತ್ತಾ ಹೇಳಿದ ಸರ್ದಾರ್. ಇದೇ ರಸ್ತೆಯ ಕೊನೆಯಲ್ಲಿ ಹಾಳುಬಿದ್ದ ಬಂಗಲೆಯೊಂದಿದೆ. ಹೊರಕ್ಕಷ್ಟೇ ಹಾಗೆ ಕಾಣಿಸುವುದು ಒಳಗೆ ವಾಸಯೋಗ್ಯವಾಗಿದೆ. ಅಲ್ಲೀಗ ನೀನು ಹುಡುಕುತ್ತಿರುವ ದಾವೂದ್ ಗಡದ್ದಾಗಿ ತಿಂದು ಕುಡಿದು ಮಲಗಿ ಗೊರಕೆ ಹೊಡೆಯುತ್ತಿದ್ದಾನೆ ಹೋಗಿ ನಿನ್ನ ಅದೃಷ್ಟಪರೀಕ್ಷೆ ಮಾಡಿಕೊ !"

"ಥ್ಯಾಂಕ್ಸ್ ಅಂಡ್ ನೋ ಥ್ಯಾಂಕ್ಸ್ ದೋಸ್ತ್! ನೀ ಕೊಟ್ಟ ಮಾಹಿತಿ ನಿಜವಾಗಿದ್ದರೆ ನಿನ್ನ ಆರೋಗ್ಯಕ್ಕೆ ಕ್ಷೇಮ !" ಎಂದು ಹೇಳಿ ಅಲ್ಲಿಂದ ಹೊರ ನಡೆದ ಮಹೇಶ.

ಅವನೊಡಗೂಡಿಯೇ ತಾನೂ ಬಂದ ಸರ್ದಾರ್.

"ಸರ್ದಾರ್ ಭಾಯಿ.. ಏನು ಆಗಲೇ ಹೊರಟುಬಿಟ್ಟಿರಿ?" ವಿನಯದೊಡನೆ ವಿಚಾರಿಸಿದ ಕ್ಯಾಷ್‌ನಲ್ಲಿದ್ದ ವ್ಯಕ್ತಿ.

"ಕೆಲಸ ಮುಗಿಯಿತು ಹೊರಟೆ !" ಸ್ಪಷ್ಟವಾಗಿ ಹೇಳಿ ಟಲ್ ಪೇ ಮಾಡಿದ ಸರ್ದಾರ್.

ಇಬ್ಬರೂ ಬಾರ್ ಹೊರಗಡೆಗೆ ಬಂದರು.

"ಗುಡ್‌ನೈಟ್ ಗುರು......ನಾವು ಮತ್ತೊಮ್ಮೆ ಎಂದಾದರೂ ಭೇಟಿಯಾಗುತ್ತೇವೆಂದುಕೊಳ್ಳುತ್ತೇವೆ ಆಗ ನೀನೆಲ್ಲಿರುವೆಯೋ ಏನೋ ?" ಸಣ್ಣ ದನಿಯಲ್ಲಿ ಹೇಳಿದ ಸರ್ದಾರ್.

ಅವನು ಹೇಳಿದ ರೀತಿಗೆ ಅಪ್ರಯತ್ನವಾಗಿ ಜಲದರಿಸಿತು ಮಹೇಶನ ಶರೀರ. ಅವನ ಕಣ್ಣೊಳಕ್ಕೆ ತೀಕ್ಷ್ಣವಾಗಿ ನೋಡಿದ.

ಪೈಶಾಚಿಕತೆ ಪರಾಕಾಷ್ಠೆಯ ಪ್ರತಿಬಿಂಬಸಂತಿದ್ದವು ಅವನ ಕಣ್ಣುಗಳು !

ಸೋ......ಮುಂದೇನೋ ಸಾಲಿಡ್ ಸಮಸ್ಯೆಯಿದೆ !

ಮೃದುವಾಗಿ ನಕ್ಕು ಅವನ ಭುಜ ತಟ್ಟಿ ಪ್ಯಾಂಟ್ ಜೇಬುಗಳಲ್ಲಿ ಕೈ ತೂರಿಸಿ ಮುಂದಕ್ಕೆ ನಡೆದ ಮಹೇಶ.

ಅವನು ಕಣ್ಮರೆಯಾಗುವವರೆಗೆ ಅಲ್ಲಿಯೇ ನಿಂತಿದ್ದು ಗಿರ್ರನೆ ತಿರುಗಿ ಬಾರ್‌ನೊಳಕ್ಕೆ ಓಡಿದ ಸರ್ದಾರ್, ಪಬ್ಲಿಕ್ ಟೆಲಿಫೋನ್‌ನ ರಿಸೀವರ್ ಎತ್ತಿ

ಆತುರಾತುರವಾಗಿ ಡಯಲ್ ಮಾಡತೊಡಗಿದ. ಅತ್ತ ಬದಿಯಲ್ಲಿ ರಿಂಗ್ ಆದೊಡನೆ ಇನ್‌ಸರ್ಟ್ ಮಾಡಲು ಕಾಯಿನ್ ಸಿದ್ಧವಾಗಿತ್ತು ಕೈನಲ್ಲಿ !

* * * * *

ಶಿಥಿಲ ಬಂಗಲೆ ನೂರು ಗಜಗಳಷ್ಟು ದೂರವಿದೆಯೆನ್ನುವಾಗಲೇ ಆರನೇ ಇಂದ್ರಿಯ ತನ್ನ ತಗಾದೆ ಶುರು ಮಾಡಿತ್ತು. ಅಪಾಯದ ಸೈರನ್ ಮೊಳಗಿಸ ತೊಡಗಿತ್ತು.

ಬೆನ್ನುಹೊರಿಗೆ ಲೋಹ ಸ್ಪರ್ಶವಾದಂತೆ ಸಣ್ಣಗೆ ಕಂಪಿಸಿತು ಜೀವನ ಶರೀರ. ಮುಂದಕ್ಕಿಡ ಹೋದ ಹೆಜ್ಜೆಯನ್ನು ಹಾಗೆಯೇ ನಿಲ್ಲಿಸಿ ಪಕ್ಕದಲ್ಲಿ ಕಾಣುತ್ತಿದ್ದ ಮರಗಳ ಗುಂಪಿನ ಹಿಂದಕ್ಕೆ ಸಂದು ಮೊಣಕಾಲೂರಿ ಕುಳಿತು ವಾಚ್ ಮಾಡತೊಡಗಿದ ಮಹೇಶ.

ಅಲ್ಲಿಂದ ಸ್ವಲ್ಪ ದೂರದಲ್ಲಿರುವ ಚರ್ಚ್‌ನಿಂದ 'ಠಂಗ್......ಠಂಗ್' ಎಂದು ಹನ್ನೆರಡು ಗಂಟೆ ಬಾರಿಸಿತು.

ನಿರ್ಮಲವಾಗಿತ್ತು ಆಕಾಶ.....ಪಾಂಸಕಟ ಜೇಳು ಪಾಸರದಲ್ಲಿ ಹರಡಿರುವ ನಕ್ಷತ್ರ ರಾಶಿ, ತಣ್ಣಗೆ ಬೀಸುತ್ತಿರುವ ಚಳಿಗಾಳಿ. ಶಿಥಿಲ ಕಟ್ಟಡದ ಸುತ್ತಲೂ ಇರುವ ಮರಗಳು ದೆವ್ವಗಳಂತೆ ತೂಗುಯ್ಯಾಲೆಯಾಗುತ್ತಿದ್ದವು.

ಐದು ನಿಮಿಷ ಭಾರವಾಗಿ ಮುಂದಕ್ಕೆ ಸರಿಯಿತು. ಆ ವೇಳೆಗೆ ಕತ್ತಲಿಗೆ ಅಭ್ಯಸ್ತವಾದ ಕಣ್ಣುಗಳು ಕ್ಷಣಕಾಲ ಸುತ್ತಲು ತಪಾಸಣೆ ನಡೆಸಿದವು. ಅನುಮಾನಾಸ್ಪದ ಚಲನೆ ಯಾವುದೂ ಕಾಣಬರುತ್ತಿಲ್ಲ. ಆದರೂ ಇನ್ನೂ ತನ್ನ ಕೆಂಪುಕಿರಣಗಳ ಪ್ರಸಾರಕ್ಕೆ ವಿರಾಮ ಕೊಟ್ಟಿಲ್ಲ ಸಿಕ್ಸ್ತ್ ಸೆನ್ಸ್.

ಭುಜ ಎಗರಿಸಿ ಮೇಲೆದ್ದು ಮುನ್ನಡೆದ ಮಹೇಶ ಅಪಾಯಕ್ಕೆ ಸಡ್ಡು ಹೊಡೆಯಲು ಸನ್ನದ್ಧವಾಗಿ. ಬಂಗಲೆಯನ್ನು ಸಮೀಪಿಸಿದ. ಸ್ಪ್ರಿಂಗ್‌ನಂತೆ ಬಿಗಿದಿದ್ದವು ಅವಯವಗಳು ಎಂತಹ ಕ್ರಿಟಿಕಲ್ ಪೊಸಿಷನ್ ಎದುರಾದರೂ ಚಾಲೆಂಜ್ ಮಾಡಲು. ತುಸುವೇ ತೆರೆದಿದ್ದ ಬಾಗಿಲನ್ನು ತಳ್ಳಿ ನಿಶ್ಶಬ್ದವಾಗಿ ಒಳಕ್ಕೆ ಎಂಟರಾದ.

ಹಾಲ್ ದಾಟಿ ಎದುರಿಗೆ ಕಾಣಿಸುತ್ತಿದ್ದ ಕೊಠಡಿಯೊಳಕ್ಕಿಣುಕಿ ಒಳಕ್ಕಡಿಯಿಟ್ಟ. ಆಗಲೇ ಸಿಕ್ಸ್ತ್ ಸೆನ್ಸ್‌ನ ಅರ್ಭಟ ಚರಮ ಘಟ್ಟ ತಲುಪಿತ್ತು,

ಜೇಬಿನಿಂದ ಪೆನ್‌ಟಾರ್ಚ್ ತೆಗೆದು ಆನ್ ಮಾಡಿ ಕೊಠಡಿಯೊಳಗೆ ಫೋಕಸ್ ಮಾಡಿದ. ಮರುಕ್ಷಣ ಆಘಾತಗೊಂಡಂತೆ ಸ್ತಂಭಿತನಾಗಿ ನಿಂತು ಬಿಟ್ಟ.

ಅಂಗಾತಾಗಿ ಬಿದ್ದಿತ್ತೊಂದು ಭಾರೀ ಆಕಾರ ಕೊಠಡಿಯ ಮಧ್ಯದಲ್ಲಿ. ಅವರ ಎದೆಯಾಳದಲ್ಲಿಳಿದಿರುವ ಚಾಕುವಿನ ಹಿಡಿ ಮಾತ್ರ ಕಾಣಬರುತ್ತಿತ್ತು ಈಗ !

ಒಂದೇ ಜಂಪ್‌ನಲ್ಲಿ ಆಕಾರವನ್ನು ಸಮೀಪಿಸಿದ ಮಹೇಶ ಟಾರ್ಚ್ ಬೆಳಕು ಮುಖದತ್ತ ಚೆಲ್ಲಿದವನು ಕಣ್ಣು ಮುಚ್ಚಿ ಬಲವಾಗಿ ತಲೆಯೊದರಿದ. ನಂಬಲೇ ಸಾಧ್ಯವಾಗುತ್ತಿಲ್ಲ ಅವನಿಗೆ.

ದಾವೂದ್ ದಾದಾನ ಹೆಣ ಅದು !

ಅದೇಕೋ ತನ್ನ ಕ್ಯಾಲಿಕ್ಯುಲೇಷನ್ ಎಲ್ಲಾ ಉಲ್ಟಾಪಲ್ಟಾ ಆಗುತ್ತಿದೆ ಅನ್ನಿಸತೊಡಗಿತು. ಆಗಲೇ ರಕ್ತ ಹೆಪ್ಪುಗಟ್ಟಿಸುವಂತಹ ಭಯಾನಕ ಶಬ್ದ ಕೇಳಿಬಂತು ಹೊರಗಡೆ !

ಪೊಲೀಸ್ ಸೈರನ್ ಶಬ್ದ !

'ಕ್ರೀಚ್' ಎಂಬ ಶಬ್ದದೊಡನೆ ವಾಹನವೊಂದು ಕಟ್ಟಡದ ಎದುರಿಗೆ ಬಂದು ನಿಂತ ಸಪ್ಪಳ ಕೇಳಿ ಬಂತು. 'ಪೀಪ್ ಪೀಪ್' ಎಂದು ಮೊಳಗ ತೊಡಗಿದವು ಒಮ್ಮೆಲೇ ಹಲವಾರು ಪೊಲೀಸ್ ವಿಷಲ್‌ಗಳು.

ಗುಂಡಿಗೆ ಝಲ್ಲೆಂದಿತು ಮಹೇಶನಿಗೆ. ಸರ್ದಾರ್ ತನ್ನನ್ನು ಎಂತಹ ಜೇಡರ ಬಲೆಯಲ್ಲಿರುಕಿಸಿದ ಎಂಬ ಯೋಚನೆ ಮಾತ್ರಕ್ಕೆ ಹಣೆಯ ಮೇಲೆ ಸ್ವೇದ ಬಿಂದುಗಳು ಆವಿರ್ಭವಿಸಿದವು.

"ಓಡು .....ಮೊದಲಿಲ್ಲಿಂದ ಓಡು' ಎಚ್ಚರಿಸಿತು ಅಂತರಾತ್ಮ.

ಮಿಂಚಿನ ವೇಗದೊಡನೆ ಹೊರಕ್ಕೆ ಬಂದು ಹಿಂಬಾಗಿಲಕಡೆಗೆ ಧಾವಿಸಿದ ಬಾಗಿಲು ತೆರೆಯುತ್ತಿದ್ದಂತೆ ನಾಲ್ಕು ರೈಫಲ್ ನಳಿಗೆಗಳು ಎದೆಗಂಟಿಕೊಂಡವು !

"ಅಲ್ಲೇ......ಹಾಗೇ ನಿಲ್ಲು ! ಇನ್ನೊಂದೆಜ್ಜೆ ಮುಂದಿಟ್ಟರೆ ಯಮಲೋಕ ಸೇರುವೆ." ಪೊಲೀಸರ ಹಿಂದಿನಿಂದ ಪಿಸ್ತೂಲಿಡಿದಿದ್ದ ಇನ್ಸ್‌ಪೆಕ್ಟರ್ ಕಠಿಣ ಧ್ವನಿಯಲ್ಲೆಚ್ಚರಿಸುತ್ತಾ ಮುಂದೆ ಬಂದ.

ಹೇಗಿದ್ದವನು ಹಾಗಿಯೇ ಫ್ರೀಝಾಗಿ ಬಿಟ್ಟ ಮಹೇಶ. ಮುಂದಿನೆರಡು ಕ್ಷಣಗಳಲ್ಲಿ ಹ್ಯಾಂಡ್‌ಕಫ್ಸ್‌ನಿಂದಲಂಕೃತಗೊಂಡ !

ದಾವೂದ್‌ನ ಹೆಣದ ಬಳಿ ನಾಲ್ಕು ಪಿ.ಸಿ.ಗಳನ್ನು ಕಾವಲಿರಿಸಿ ಮಹೇಶನನ್ನು ಜೀಪ್‌ಗೆತ್ತಿಸಿ ಪೊಲೀಸ್ ಸ್ಟೇಷನ್‌ಗೆ ಕರೆದೊಯ್ಯುವಂತೆ ಚಾಲಕನಿಗೆ ಆದೇಶಿಸಿದ ಇನ್ಸ್‌ಪೆಕ್ಟರ್.

ತನ್ನನ್ನೀ ಸ್ಥಿತಿಗೆ ಸಿಲುಕಿಸಿದ ಸರ್ದಾರ್‌ನ ಡೆತ್‌ವಾರೆಂಟ್ ಅದೇ ಕ್ಷಣದಲ್ಲಿ ಪಾಸಾಗಿತ್ತು ಮಹೇಶನ ಮನದಲ್ಲಿ......ಸರ್ದಾರ್‌ನ ಅಬ್ಸೆನ್ಸ್‌ನಲ್ಲಿ !

# ೭

"ಐಯಾಮ್ ಸಿನ್ಸಿಯರ್ಲಿ ಸಾರಿ ಸರ್......ಆ ಮೂವರು ಮಹಾ ಕಪಿಗಳು ಏನಾದರು, ಎಲ್ಲಿ ಹೋದರೆಂಬುದು ದೇವರಾಣೆ ನನಗೆ ಗೊತ್ತಿಲ್ಲ !" ಒಂದೊಂದೇ ಶಬ್ದ ಒತ್ತಿ ಒತ್ತಿ ಮನದಟ್ಟಾಗುವಂತೆ ಹೇಳಿದಳು ಸೋಫಿಯಾ.

ಸಿಗಾರ್ ತುಟಿಗಳಿಂದ ತೆಗೆದು ಹೊಗೆ ರೈಲಿಂಜಿನ್‌ನಂತೆ ಹೊರಚೆಲ್ಲುತ ಸೀರಿಯಸ್ ಆಗಿ ಅವಳನ್ನೇ ದಿಟ್ಟಿಸಿದರು ಕರ್ನಲ್.

ಗಂಟೆಯು ಮೇಲಾಗಿತ್ತು ಅವರು ಏರ್‌ಪೋರ್ಟ್‌ಗೆ ಬಂದು. ಆಗಿಂದ ಒಂದೇ ಸಮ ಸಾಗಿತ್ತು ಅವರ ಇಂಟರಾಗೇಷನ್. ಏನೇ ಮಾಡಿದರೂ ತನಗೆ ಗೊತ್ತಿಲ್ಲವೆಂದೇ ಸಾಧಿಸುತ್ತಿದ್ದಳು ಮಹೇಶನ ಡಾರ್ಲಿಂಗ್ ಸೋಫಿಯಾ !

ಹೋಮ್‌ಮಿನಿಸ್ಟರ್ ಬಂಗಲೆಯಿಂದ ಬಂದೊಡನೆ ಚಂದನ್, ಶ್ಯಾಂರನ್ನು ಕಾಣದೆ ಫ್ಲೇರಪ್ ಆದ ಅವರು ಸೋಫಿಯಾಳ ರೀಸನ್ ಕೇಳಿದ ಮೇಲಂತೂ ಕೆಂಡಾಮಂಡಲವಾಗಿಬಿಟ್ಟಿದ್ದರು. ಹೃದಯ ಅಳುಕುತ್ತಿದ್ದರೂ ತನ್ನ ಮೊದಲಿನ ಉತ್ಸಾಹದಿಂದ ನಾರ್ಮಲ್ ಆಗಿರಲಿಲ್ಲ ಸೋಫಿಯಾ.

ಇನ್ನೈದು ನಿಮಿಷಗಳಲ್ಲಿ ಪ್ಯಾರಿಸ್ ಫ್ಲೈಟ್ ಹೊರಡುವ ಅನೌನ್ಸ್‌ಮೆಂಟ್ ಆಯಿತು.

"ಸರ್......ನಾನಿನ್ನು ಬರುವೆ !" ಅಂದಳು ಸೋಫಿಯಾ.

"ಏಜೆಂಟ್ ಸೋಫಿಯಾ......ಒಂದು ಕೋಟಿಗೆ ಸ್ವಾತಂತ್ರ್ಯ ಸಿಕ್ಕರೇನೇ ಏನೆಂದು ಹಾಳು ಮಾಡುತ್ತದೆಂದು ಹೇಳಲಾಗದು. ಈಗ ಮೂರು ಒಟು ಗೂಡಿವೆ ! ಇನ್ನೇನಾದರೂ ಅವಾಂತರವೆಸಗಿ......"

ಅವರು ಡೈಲಾಗ್ ಮುಗಿಸುವ ಮೊದಲೇ ಬಾಯಿ ಹಾಕಿದಳು ಸೋಫಿಯಾ. "ಸಾರಿಸರ್......ಆ ವಿಷಯದಲ್ಲಿ ನಾನೇನೂ ಮಾಡಲಾರೆ. ಆದರೆ ಒಂದು ಸಲಹೆಯನ್ನು ಮಾತ್ರ ನೀಡಬಲ್ಲೆ" ಅಂದಳು.

"ಏನದು ?" ಆಶಾಭಾವನೆಯೊಡನೆ ಕೇಳಿದರು ಕರ್ನಲ್.

"ನೀವು ಗೃಹಸಚಿವರ ಮನೆಗೆ ತಕ್ಷಣ ವಿಸಿಟ್ ಕೊಡುವುದು ಒಳ್ಳೆಯದು ! ಬೈ ಅಂಡ್ ಗುಡ್‌ಲಕ್ ಸರ್......" ಎನ್ನುತ್ತಾ ಫ್ಲೈಟ್ ಕಡೆಗೆ ನಡೆದುಬಿಟ್ಟಳು ಸೋಫಿಯಾ.

ಕರ್ನಲ್ ಆಶ್ಚರ್ಯದಿಂದ ಚೇತರಿಸಿಕೊಳ್ಳುವ ವೇಳೆಗೆ ವಿಮಾನ ರನ್‌ವೇ ಕ್ರಮಿಸಿ ಆಕಾಶಕ್ಕೆದ್ದಿತ್ತು. ಯೋಚನಾಗ್ರಸ್ತ ಮುಖಭಾವದೊಡನೆ ಏರ್‌ಪೋರ್ಟ್ ಆವರಣದಿಂದ ಹೊರಬಂದು ಪಾರ್ಕಿಂಗ್ ಲಾಟ್‌ನ ವಿ.ಐ.ಪಿ. ಸೆಕ್ಷನ್‌ನಲ್ಲಿದ್ದ ತಮ್ಮ ವೈಟ್ ಅಂಬಾಸಡರ್‌ನ್ನು ಹತ್ತಿ ಕುಳಿತು ಚಾಲಕ ಬಾಬುವಿಗೆ ಹೋಮ್ ಮಿನಿಸ್ಟರ್ ಬಂಗಲೆಯತ್ತ ಹೋಗಲು ಆದೇಶಿಸಿದರು.

ಸನ್ಮಾನ್ಯ ಗೃಹ ಸಚಿವರು ಪ್ರವಾಸದಲ್ಲಿರುವಾಗ ಅವರ ಆಫೀಸ್‌ನಲ್ಲಿ ತನಗೇನು ಮಾಹಿತಿ ಅಲ್ಲಿ ದೊರಕಬಹುದೆಂಬ ಕುತೂಹಲ ಕರ್ನಲ್‌ರಿಗೆ ! ಸೋಫಿಯಾಳ ಸಲಹೆಯಲ್ಲೇಲೋ ರಹಸ್ಯ ಅಡಗಿರುವುದು ಮಾತ್ರ ಸತ್ಯ !

* * * * *

ಬಾಂಬೆ ವಿ.ಟಿ. ಸ್ಟೇಷನ್‌ನಲ್ಲಿ ಟ್ರೈನ್ ಇಳಿದೊಡನೆ ಟ್ಯಾಕ್ಸಿಯೊಂದನ್ನು ಕ್ಯಾಚ್ ಮಾಡಿ ಮಹರ್‌ವಾಡ ಏರಿಯಾ ತಲುಪಿ ಇಳಿ

ಹೋಟೆಲ್ ಸಂದರ್ಶಿಸಿದ್ದರು ಚಂದನ್, ಶ್ಯಾಂ. ವೈಟರೊಬ್ಬ ಐವತ್ತರ ನೋಟೊಂದನ್ನು ಕಂಡ ಮೇಲೆ ನಡೆದ ಘಟನಾವಳಿಗಳನ್ನೆಲ್ಲಾ ವರ್ಣರಂಜಿತ ವಾಗಿ ವಿವರಿಸಿದ್ದ.

ಮಹೇಶ ಲಾಕಪ್‌ನಲ್ಲಿದ್ದಾನೆಂದು ತಿಳಿದೊಡನೆ ಇಬ್ಬರ ಮಂಡೆಯೂ ಬಿಸಿಯೇರಿತ್ತು. ಅಲ್ಲಿಂದ ಹೊರನಡೆದು ಲಾಡ್ಜೊಂದರಲ್ಲಿ ವಾಸ್ತವ್ಯ ಹೂಡಿದ ಮೇಲೂ ಮುಂದೇನು ಎಂಬುದೇ ದೊಡ್ಡ ಕೊರಗು ಅವರಿಗೆ.

ಗುರು ಬಾಂಬೆಯಲ್ಲಿದ್ದಾನೆಂಬುದಷ್ಟೇ ಗೊತ್ತು ಅವರಿಗೆ. ಮಿಕ್ಕ ವಿವರಗಳೇನೂ ಗೊತ್ತಿಲ್ಲ ಲಾಕಪ್‌ನಿಂದ ಅವನು ಹೊರಬರದೆ ಅವರೇನೂ ಮಾಡುವಂತಿಲ್ಲ. ಶ್ರೀ ಕೃಷ್ಣ ಜನ್ಮಸ್ಥಾನದಿಂದ ಅವನನ್ನು ಹೊರಕ್ಕೆ ಕರೆ ತರುವ ಬಗೆ ?

ಕೊನೆಗೊಂದು ಬ್ರಿಲಿಯಂಟ್ ಐಡಿಯಾ ಫ್ಲಾಷ್ ಆಗಿತ್ತು ಶ್ಯಾಂಗೆ....

ಅದನ್ನು ಆಚರಣೆಗಿಳಿಸಿದವನು ಮಾತ್ರ ಚಂದನ್‌ಮಿಯಾ....!

## ೮

"ತಂದನ್ನ ತಾನನಾ......ತಾನನ್ನ ತಂದಾನ
ಕುಡುಕನ್ನ ಹೀಯಾಳಿಸಬೇಡಿರಣ್ಣಾ........
ತೆಗೆದಿನ್ನ ...........ತಾನನಾ...........ತಾನಾನ ತಗದಿನ್ನಾ
ಬಾಯಿಂದ ಸತ್ಯವ ಹೊರದಬ್ಬಿಸುವುದೇ ಸಾರಾಯಣ್ಣಾ !"

ಜೋರಾಗಿ ರಾಗಯುಕ್ತವಾಗಿ ಅರಚುತ್ತಾ ಕೈನಲ್ಲಿದ್ದ ಫುಲ್‌ಬಾಟಲ್ ಸಾರಾಯಿಯ ಕೊನೆಯ ಗುಟುಕನ್ನು ಬಾಯಿಗೆ ಹುಯ್ದುಕೊಂಡು ಡರ್ರನೆ ತೇಗಿ ಖಾಲಿ ಬಾಟಲ್ ಎದುರಿಗೆ ಕಾಣಿಸುತ್ತಿದ್ದ ಪೋಲೀಸ್ ಸ್ಟೇಷನ್ ನೊಳಕ್ಕೆ ಎಸೆದ ಚಂದನ್.

"ರಾಸ್ಕಲ್..... ಸ್ಕೌಂಡ್ರೇಲ್..... ಆ ಕುಡುಕನನ್ನು ಎಳೀರನ್ನಿ....ಕೀಲುಗಳನ್ನು ಮುರಿದು ಆಸ್ಪತ್ರೆ ಸೇರಿಸೋಣ....." ಎಂದು ಅರಚುತ್ತಾ ಹೊರಕ್ಕೋಡಿ ಬಂದ ಸೈಟ್ ಇನ್‌ಚಾರ್ಜ್ ಇನ್ಸ್‌ಪೆಕ್ಟರ್.

ಅವನ ಹಿಂದೆಯೇ ಬಂದ ನಾಲ್ವರು ಪಿ.ಸಿ.ಗಳು ಚಂದನ್‌ನ ರಟ್ಟೆಗಳನ್ನು ಒಟ್ಟಾಗಿ ಹಿಡಿದುಕೊಂಡರು. ಒಬ್ಬ ಷರ್ಟ್‌ಪ್ಯಾಂಟ್ ಸೇರಿಸಿ ಅಲ್ಲಾಡದಂತೆ ಕ್ಯಾಚ್ ಮಾಡಿದ.

ರಾತ್ರಿ ಒಂಭತ್ತೂವರೆಯ ವೇಳೆ ಆಗ.

"ಥೂತ್ತೇರಿ..... ಕಳ್ಳರನ್ನಿಡಿಯಿರೋ ಅಂದರೆ ಕುಡುಕರನ್ನಿಡಿಯುವ ನಿಮ್ಮಂತಹ ನಾಮರ್ದ್‌ಗಳಿಂದಲೇ ದರೋಡೆಗಳು ಹೆಚ್ಚಾಗಿರುವುದು! ಬಿಡ್ರೋಲೇ.....ನಿಮ್ಮ ಇನ್ಸ್‌ಪೆಕ್ಟರೇನು ದೊಡ್ಡ ಗಂಡಸಾ? ಒಳ್ಳೇ ಮಾತು ಹೇಳಿದ್ದರೆ ನಾನೇ ಬರುತ್ತಿದೆ....." ತೊದಲು ನುಡಿಯಲ್ಲಿ ಕಾಮೆಂಟ್‌ಮಾಡಿದ ಚಂದನ್.

ಥಸ್....ಥಸ್.....ಎಂದು ಬೆನ್ನು, ಭುಜಗಳ ಮೇಲೆ ಬಿದ್ದವು ನಾಲ್ಕೈದು ಸರಿಯಾದ ಹೊಡೆತಗಳು. ನೋವಿಗೆ ಹಲ್ಲು ಕಚ್ಚಿದ ಚಂದನ್ ಕಾಲುಗಳನ್ನು ನೆಲದತ್ತ ಬಾರಿಸಿದ. ದರದರ ಅವನನ್ನು ಒಳಕ್ಕೆಳೆದೊಯ್ದರು ಪೋಲೀಸರು.

"ಓಹೋಹೋ.....ನೀವೆಲ್ಲಾ ಇನ್ಸ್‌ಪೆಕ್ಟರ್? ನಾನೇನಪ್ಪಾ ಮಾಡಿದೆ? ಸಾರಾಯಿ ನಿಜ ಹೇಳಿಸುತ್ತದೆಂದು ಜೋರಾಗಿ ಸಾರಿದ್ದು ತಪ್ಪೇನು?" ಸವಾಲೆಸೆದ ಚಂದನ್.

"ಖಂಡಿತಾ ತಪ್ಪಲ್ಲ...." ಗುರಾಯಿಸಿ ನೋಡುತ್ತಾ ತೋಳು ಮಡಚ ತೊಡಗಿದ ಇನ್ಸ್‌ಪೆಕ್ಟರ್ ಕೈನಲ್ಲಾಗಲೇ ಲಾಠಿ ಸಿದ್ಧವಾಗಿತ್ತು!

"ಹಾಗಿದ್ದರೆ ನನ್ನನ್ನೇಕೆ ಹಿಡಿದುತಂದರು ಈ ಸುವ್ವರ್‌ಗಳು? ಲೀಡರ್.....ಲೀಡರ್ ಸರಿಯಿರಬೇಕು ಯಾವುದಕ್ಕೂ! ಬೀಟ್ ಕೆಲಸಕ್ಕೂ ನಾಲಾಯಕ್ಕಾದ ನಿನ್ನಂತಹವರು ಇನ್‌ಚಾರ್ಜ್‌ಗಳಾದರೆ ಹೀಗೇನೇ.....!"

ಬಣಗಿಹೋದ ಬದನೆಕಾಯಂತಾಯಿತು ಇನ್ಸ್‌ಪೆಕ್ಟರ್ ವದನ ಆ ಡೈಲಾಗ್‌ಗೆ. ಪಿ.ಸಿ.ಗಳ ಎದುರಿಗೆ ತನ್ನ ಫೇಸ್ ತೆಗೆಯದಿದ್ದರೆ ತಾನು ಈ ಕೆಲಸಕ್ಕೆ ರಾಜೀನಾಮೆ ಕೊಡುವುದೇ ಒಳ್ಳೆಯದೆಂಬ ತೀರ್ಮಾನಕ್ಕೆ

ಬಂದ ಅವನು, "ಇನ್ನೂ ನೋಡುತ್ತಿರುವಿರಾ ? ಸದೆ ಬಡಿಯಿರಿ ಅವನನ್ನ!" ಎಂದು ಗರ್ಜಿಸಿದ.

ಅಷ್ಟು ಸಾಲದೆ ಪಿ.ಸಿ.ಗಳಿಗೆ. ರಪರಪರಪ ಎಂದು ದೊಂಚಲು ಶುರು ಮಾಡಿದರು

"ಕತ್ತೆಗಳ ರೋಮ ಅಲ್ಲಾಡಿಸಲೂ ನಾಲಾಯಕ್ ಜನ ನೀವು ! ನನ್ನನ್ನೇನು ಹೊಡೆದೀರಿ ! ಇವೇನು ಏಟುಗಳಾ ? ಕೋಲುಗಳಲ್ಲಿರುವ ತಾಕತ್ ಇಷ್ಟೇನಾ ?' ಇನ್ನಷ್ಟು ಚುಚ್ಚು ಮಾತುಗಳನ್ನಾಡಿದ ಚಂದನ್.

ಸ್ಟೇಷನ್‌ನಲ್ಲಾಗುತ್ತಿರುವ ಗಲಭೆಯಿಂದ ಆಕರ್ಷಿತಗೊಂಡು ಈಗಾಗಲೇ ಗುಂಪು ಸೇರತೊಡಗಿತ್ತು ರಸ್ತೆಯಲ್ಲಿ. ಇದರಿಂದ ಇನ್ನಷ್ಟು ರೊಚ್ಚಿಗೆದ್ದ ಇನ್ಸ್‌ಪೆಕ್ಟರ್.

"ಕಾನ್ಸ್‌ಟೇಬಲ್ಸ್—ಈ ಲೋಫರ್ ನಿಮ್ಮ. ನನ್ನ ಮರ್ಯಾದೆಯನ್ನು ನಡುಬೀದಿಯಲ್ಲಿ ಹರಾಜು ಹಾಕುತ್ತಿದ್ದಾನೆ. ಜೊತೆಗೆ ನಮ್ಮ ಇಲಾಖೆಯ ಪ್ರತಿಷ್ಠೆಯ ಪ್ರಶ್ನೆ ಕೂಡ. ಮೊದಲಿನವನನ್ನು ಒಳಕ್ಕೆ ಜನರ ಕಣ್ಣು ಬೀಳದೆಡೆ ಸಾಗಿಸಿ....." ಎಂದು ಆಜ್ಞಾಪಿಸಿ ಒಳಕ್ಕೆ ನಡೆದ.

"ಥೂ ಊಳಾ ! ನಾಲ್ಕು ಗೋಡೆಗಳ ಮಧ್ಯೆ ಹೊಡೆದರೆ ಗಂಡಸ್ತನ ಅಲ್ಲ ಕಣೋ ! ತಾಕತ್ತಿದ್ದರೆ ಜನರ ಮುಂದೆಯೇ ಹೊಡಿ....." ಮತ್ತಷ್ಟು ಜೋರಾಗಿ ಅರ್ಭಟಿಸಿದ ಚಂದನ್.

"ನಿಶಾ ಇನ್ನೂ ಇಳಿದ ಹಾಗಿರಲಿಲ್ಲ ..ಒಳಗೋಗಿ ಏರೋಪ್ಲೇನ್ ಹತ್ತಿ ಸಿಡಗೆ ಸಿಲುಕ್ಕಿಳಿತ್ತಾನೆ ಅಣ್ಣ !" ಎಂದು ದರದರ ಒಳಕ್ಕೆಳೆದೊಯ್ದರು ಪೊಲೀಸರು.

"ಅಪ್ಪಂದಿರಾ.. ಅಣ್ಣಂದಿರಾ..... ನೋಡಿ ಈ ಅನ್ಯಾಯವನ್ನ ! ಅನ್‌ಕ್ವಾಲಿಫೈಡ್ ಹಬ್ಬಾಗಳಿಗೆಲ್ಲಾ ಕೆಲಸ ಕೊಟ್ಟರೆ ಹೀಗೇ ಆಗುವುದು......" ಜೋರಾಗಿ ಕೂಗತೊಡಗಿಬಿಟ್ಟ ಚಂದನ್.

ಆ ವೇಳೆಗಾಗಲೇ ಅವನನ್ನು ಒಳಕೋಣೆಗೆ ಸಾಗಿಸಿದ್ದರು ಪಿ.ಸಿ.ಗಳು.

"ಎಸ್ಟೂ ದಲಿಂದರ್...... ನೋಡಿದರೆ ಜೂನಲ್ಲಿರುವ ಚಿಂಪಾಂಜಿಯನ್ನೇ ಹೋಲುವ ನೀನು ನಮ್ಮ ಕ್ವಾಲಿಫಿಕೇಷನ್ ಬಗ್ಗೆ ಮಾತಾಡುವೆಯಾ ?" ಕೆಕ್ಕರಿಸಿ ನೋಡುತ್ತಾ ಕೇಳಿದ ಇನ್ಸ್‌ಪೆಕ್ಟರ್.

ಕಷ್ಟಪಟ್ಟು ಡಿಗ್ರಿ ಪಾಸ್ ಮಾಡಿದ ಮುಖವಾ ನಿನ್ನದು? ಕಾಪಿ ಹೊಡೆದು ಪಾಸ್ ಮಾಡಿ ದುಡ್ಡು ಕೊಟ್ಟು ಡ್ಯೂಟಿ ಸೇರಿದ ನೀನು ಅನ್ ಕ್ವಾಲಿಫೈಡ್ ಅಲ್ಲದೆ ಇನ್ನೇನು?" ಮರುಪ್ರಶ್ನೆ ಹಾಕಿದ ಚಂದನ್.

ಇನ್ನು ತಡೆಯಲಾಗಲಿಲ್ಲ ಇನ್ಸ್‌ಪೆಕ್ಟರ್‌ಗೆ. ಪಿ ಸಿ ಗಳ ಕಡೆ ನೋಡಿದ ಅಷ್ಟೇ!

ಲಾಠಿಗಳ ಕರಾಳ ನೃತ್ಯ ಶುರುವಾಯಿತು ಮುಂದಿನ ಕ್ಷಣದಿಂದ. ಹತ್ತು ಏಟು ಬೀಳುವ ಹೊತ್ತಿಗೆ ಗಂಟಲ ಪಸೆ ಆರಿಹೋಯಿತು ಚಂದನ್‌ಗೆ! ಹೀಗೆ ಇನ್ನೊಂದು ಡಝನ್ ಬಿದ್ದರೆ ತನ್ನನ್ನು ಸ್ಮಶಾನಕ್ಕೆ ಟ್ರಾನ್ಸ್‌ಫರ್ ಮಾಡಬೇಕಾಗುತ್ತದೆಂದು ಗ್ಯಾರಂಟಿಯಾಗಿಹೋಯಿತು. ಇದ್ದರಿಂದ ಡೌ ಮಾಡುವುದೇ ಒಳ್ಳೆಯದೆಂಬ ತೀರ್ಮಾನಕ್ಕೆ ಬಂದು "ಅಯ್ಯೋ.....ಅಯ್ಯಯ್ಯೋ....." ಎಂದು ಐದಾರು ಸಲ ಚೀರಾಡಿ ಧೊಪ್ಪನೆ ನೆಲಕ್ಕುರುಳಿ ಮೂರ್ಛೆ ಹೋದವನಂತೆ ಕಣ್ಣು ಮುಚ್ಚಿ ತಲೆ ವಾಲಿಸಿಬಿಟ್ಟ.

"ಇಷ್ಟೇ ಇಂತಹವರದೆಲ್ಲಾ! ಸರಿಯಾಗಿ ನಾಲ್ಕೈದು ತಡೆಯುವ ಶಕ್ತಿಯಿಲ್ಲದಿದ್ದರೂ ಮಾತು ಮಾತ್ರ ಜೋರು. ಹೂಂ.....ಇವನನ್ನು ಬೆಳಿಗ್ಗೆ ವಿಚಾರಿಸಿಕೊಳ್ಳೋಣ. ದಾವೂದ್‌ನ ಕೊಲೆಗಾರನಿರುವ ಸೆಲ್‌ನೊಳಗೆ ತಳ್ಳಿ ಲಾಕ್ ಮಾಡಿ. ಎಚ್ಚರಗೊಂಡಾಗೆಲ್ಲಾ ತಲಾ ಎರಡೆರಡು ಏಟು ಹಾಕುತ್ತಿರಿ....." ಆಜ್ಞಾಪಿಸಿದ ಇನ್ಸ್‌ಪೆಕ್ಟರ್ ಝಾಡಿಸಿ ಚಂದನ್ ಪಕ್ಕೆಗೊದ್ದ.

ಸೆಲ್ ಬಾಗಿಲು ತೆರೆದುಕೊಂಡು ಒಳಕ್ಕುರುಳಿ ಬಂದ ಆಕಾರವನ್ನು ಕಂಡು ಬಂಕ್ ಮೇಲೆ ಕುಳಿತು ಏನೋ ಯೋಚಿಸುತ್ತಿದ್ದ ಮಹೇಶ ಮೆಲುವಾಗಿ ವಿಷಲ್ ಮಾಡಿದ. ರಪ್ಪನೆ ಮುಚ್ಚಿಕೊಂಡಿತು ಮತ್ತೆ ಬಾಗಿಲು.

ಯಾವುದಕ್ಕೂ ಒಳ್ಳೆಯದೆಂದು ಐದುನಿಮಿಷ ಕಣ್ಣು ಮುಚ್ಚಿಕೊಂಡೇ ಇದ್ದ ಚಂದನ್ ನಿಧಾನವಾಗಿ ಕಣ್ಣು ತೆರೆದ.

"ಏಳಪ್ಪಾ.....ಮಂಗಕುಲ ಚಕ್ರೇಶ್ವರ! ನಿನ್ನ ನಾಟಕ ಕೊನೆಗೊಳಿಸಿ ಇನ್ನಾದರೂ ತುಟಿ ತೆರೆದು ನನ್ನನ್ನು ಕೃತಾರ್ಥನನ್ನಾಗಿಸು!" ಕಿರುನಗೆಯೊಡನೆ ಹೇಳಿದ ಮಹೇಶ.

"ಚಪ್ಡಾ ಸುಲಿದುಬಿಟ್ಟರು ಗುರು ಹಲ್ಕಾನನ್ನಮಕ್ಕಳು! ಇಷ್ಟು ಜೋರಾಗಿ ಹೊಡೆಯುತ್ತಾರೆಂದು ಮೊದಲೇ ಗೊತ್ತಿದ್ದರೆ ಶ್ಯಾಂನ ಸಿಹಿ

ಮಾತುಗಳಿಗೆ ದೇವರಾಣೆ ಮರುಳಾಗುತ್ತಿರಲಿಲ್ಲ....." ಅನ್ನುತ್ತಾ ನಡು ಅಮುಕಿಕೊಂಡೇ ಮೇಲೆದ್ದು ಬಂಕ್ ಮೇಲೆ ಆಸೀನನಾದ ಚಂದನ್.

ನಡೆದ ಘಟನಾವಳಿಗಳ ಕಾರಣ ತಲೆ ಕೆಟ್ಟು ಕೆರವಾಗಿ ಏನು ಮಾಡು ವುದೆಂದು ತೋಚದೆ ಕುರ್ಚಿಯಲ್ಲಿ ಹಿಂದಕ್ಕೆ ವಾಲಿ ಹಾಗೆಯೇ ಕಣ್ಣು ಬಿಟ್ಟಿದ್ದ ಇನ್ಸ್‌ಪೆಕ್ಟರ್. ಯಜಮಾನನೇ ಹೀಗಾದಾಗ ಕೆಳಗಿನವರ ಕೇಳ ಬೇಕೆ! ಅಲ್ಲಲ್ಲಿ ಕುಳಿತು ತೂಕಡಿಸತೊಡಗಿದರು ಪಿ.ಸಿ.ಗಳು.

ಜೇಬಿನಿಂದ ಸಿಗರೇಟ್ ಪ್ಯಾಕ್ ತೆಗೆದು ಚಂದನ್‌ಗೊಂದಿತ್ತು ತಾನು ಒಂದನ್ನು ಹಚ್ಚಿಕೊಂಡ ಮಹೇಶ. "ಏನು ವಿಶೇಷ ಚಂದನ್‌ಭಾಯ್?" ಕೇಳಿದ.

"ಏನೆಂದು ಹೇಳಲಿ ಗುರು? ಬಾಸ್‌ಗೆ ತಿಳಿಯದಂತೆ ತಲೆತಪ್ಪಿಸಿಕೊಂಡು ಬರುವ ಹೊತ್ತಿಗೆ ಪ್ರಾಣ ಹೋಗಿ ಪ್ರಾಣ ಬಂತು. ಇಲ್ಲಿಗೆ ಬಂದ ಮೇಲೆ ನಿನ್ನ ಘನಕಾರ್ಯ ಪೇಪರ್‌ಗಳ ಮೂಲಕ, ಇರಾನಿ ಹೋಟೆಲ್ ಸರ್ವರ್ ಬಾಯಿಂದ ತಿಳಿಯಿತು. ಲೋಕಲ್ ಪ್ರಜೆಗಳು ನಿನ್ನ ಪಬ್ಲಿಕ್ಕಾಗಿ ನೇಣು ಹಾಕಬೇಕೆಂದು ಡಿಮಾಂಡ್ ಮಾಡುತ್ತಿದ್ದಾರೆ! ಅದುಸರಿ ಗುರು.....ದಾವೂದ್ ನನ್ನೇಕೆ ಕೊಂದೆ?" ಪ್ರಶ್ನಿಸಿದ ಚಂದನ್.

"ಪಟ್ಟನೆ ತಲೆಯ ಮೇಲೊಂದು ಮೊಟಕಿ ಕೇಳಿದ ಮಹೇಶ, "ಏಕೆ? ಎಣ್ಣೆಯ ನಿಶಾ ಇನ್ನೂ ಇಳಿದಿಲ್ಲವೇ? ಇಳಿಸಲೇನು?"

ಅಯ್ಯಯ್ಯೋ.....ಬೇಡ ತಂದೆ! ಹೊರಗಿರುವ ದೊಡ್ಡ ಮನುಷ್ಯ ಕೊಟ್ಟ ಬೇವರ್ಸಿ ಸಲಿಗೆ ಇದು. ನೀನು ಮೊದಲು ಪೊಲೀಸರ ಕೈನಲ್ಲಿ ರಿಪೇರಿ ಮಾಡಿಸಿಕೊಂಡು ಒಳಕ್ಕೆ ಹೋಗು. ಮಿಕ್ಕ ವಿಷಯ ನಾನು ನೋಡಿ ಕೊಳ್ಳುತ್ತೇನೆ ಅಂದೆ. ವಿಷಯವಾದರೂ ಏನು ಗುರು?" ತನ್ನ ನೋವೆಲ್ಲಾ ಮರೆತು ಕುತೂಹಲದೊಡನೆ ಕೇಳಿದ ಚಂದನ್.

"ಅದೆಲ್ಲಾ ಆಮೇಲೆ! ಮೊದಲಿಲ್ಲಿಂದ ಹೊರಕ್ಕೆ ಹೋಗಬೇಕು....." ದೃಢ ಧ್ವನಿಯಲ್ಲೇಳಿದ ಮಹೇಶ.

"ತಗೋ ಗುರು.....ನಿನ್ನ ಅಪೇಕ್ಷ ಸಂಗಾತಿಗಳನ್ನ!" ಅನ್ನುತ್ತಾ ಷರ್ಟ್ ಬಿಚ್ಚಿ ಮೈತುಂಬಾ ಸುತ್ತಿದ್ದ ಬ್ಯಾಂಡೇಜ್ ಬಟ್ಟೆಗಳೊಳಗೆ ಅಡಗಿಸಿಟ್ಟಿದ್ದ

ಲ್ಯೂಗರ್ ಪಿಸ್ತೂಲು 'ರಾಣಿ' ಮತ್ತು 'ರಾಜ'ನನ್ನು ಪ್ರೆಸೆಂಟ್ ಮಾಡಿದ ಚಂದನ್.

ಮಿಂಚಿದವು ಮಹೇಶನ ಕಂಗಳು. ಬಿಲ್ಟ್ ಇನ್ ಹೋಲ್‌ಸ್ಟರ್ ಇಲ್ಲದ ಕಾರಣ 'ರಾಜ' 'ರಾಣಿ'ಯರನ್ನು, ಚಂದನನ ಬ್ಯಾಂಡೇಜ್ ಬಟ್ಟೆಗಳನ್ನೇ ಮೀನ ಖಂಡಕ್ಕೆ ಸುತ್ತಿಕೊಂಡು ಅದರೊಳಕ್ಕೆ ತಳ್ಳಿದ. ತಾವಿರುವ ಸೆಲ್‌ನ ಸ್ಪ್ರಿಂಗ್ಸ್ ಪರಿಶೀಲಿಸತೊಡಗಿದವು. ಅವನ ಕಣ್ಣುಗಳು ಮುಂದಿನ ಕ್ಷಣದಿಂದ. ಹೊರಗಿರಬೇಕಾದ ಪಿ.ಸಿ. ಒಳಗೆಲ್ಲೋ ಅಚ್ಚುಕಟ್ಟಾಗಿ ಮಲಗಿರಬೇಕು! ಕಬ್ಬಿಣದ ಬಾಗಿಲು, ಬೀಗ ಗಟ್ಟಿಮುಟ್ಟಾಗಿವೆ__

"ಡೋಂಟ್‌ವರಿ ಗುರು... ನೀನೇಕೆ ತಲೆ ಕೆಡಿಸಿಕೊಳ್ಳುವೆ? ಹೊರಗಿನ ಯಜಮಾನಪ್ಪ ಅಲಂಕಾರಕ್ಕಿದ್ದಾನೇನು? ಏನಾದರೂ ಮಾಡುತ್ತಾನೆ ಬಿಡು..." ಸಿಗರೇಟ್ ಹೊಗೆ ಸ್ಟೈಲಾಗಿ ಸೀಲಿಂಗ್ ಕಡೆ ಬಿಡುತ್ತಾ ಅಂಗಾತಾಗಿ ಅಡ್ಡಾದ ಚಂದನ್.

ಸೆಲ್‌ನಲ್ಲೇ ಅತ್ತಿತ್ತ ಶತಪಥ ಹಾಕುತ್ತಾ ವಾಚ್ ಕಡೆ ನೋಡಿಕೊಂಡ ಮಹೇಶ. ಹನ್ನೆರಡಕ್ಕಿನ್ನೂ ಐದು ನಿಮಿಷಗಳಿವೆ!

ಸರಿಯಾಗಿ ಆಗಲೇ, "ಇನ್ಸ್‌ಪೆಕ್ಟರ್!" ಎಂದು ಕೂಗಿತೊಂದು ಅಧಿಕಾರಯುತ ಧ್ವನಿ ಸ್ಟೇಷನ್‌ನೊಳಗೆ.

ಗೊರಕೆ ಹೊಡೆಯುತ್ತಿದ್ದ ಇನ್ಸ್‌ಪೆಕ್ಟರ್, ತೂಕಡಿಸುತ್ತಿದ್ದ ಪಿ.ಸಿ.ಗಳು ಒಟ್ಟಿಗೆ ಗಡಿಬಡಿಸುತ್ತಾ ಎಚ್ಚರಗೊಂಡರು. ಎದುರಿಗೆ ನಿಂತಿರುವ ಆಕಾರವನ್ನು ಗಮನಿಸಿದೊಡನೆ ಎಲ್ಲರ ಕೈಕಾಲುಗಳು ಅದುರತೊಡಗಿದವು.

ಬಂದವ ಪೊಲೀಸ್ ಕಮೀಷನರ್!

"ಇನ್ಸ್‌ಪೆಕ್ಟರ್! ಇದೇನು ಪೊಲೀಸ್ ಸ್ಟೇಷನ್ನೋ ಅಥವ ಮಠವೋ ಗಡದ್ದಾಗಿ ತಿಂದು ಬಂದು ತಂಪಾಗಿ ನಿದ್ರೆ ಹೋಗಲು?" ಕ್ರೋಧದಿಂದ ಕೆಂಪಾಗಿತ್ತು ಕಮೀಷನರ್ ವದನ.

"ಸಾರಿ ಸರ್... ಮನಸ್ಸು ಸರಿಯಿಲ್ಲದೆ..." ತೊದಲಿದ ಇನ್ಸ್‌ಪೆಕ್ಟರ್.

"ಷಟಪ್! ಮನಸ್ಸು ಸರಿಯಿಲ್ಲದಿದ್ದರೆ ರಜಾ ಹಾಕಿ ಹೋಗಬೇಕಿತ್ತು. ಇಲ್ಲಿಗೆ ಬಂದಮೇಲೆ ಕರ್ತವ್ಯ ನಿರ್ವಹಣೆಗೇ ಫಸ್ಟ್ ಪ್ರಿಫರೆನ್ಸ್!" ಇನ್ನಷ್ಟು ದಂಗಾದ ಕಮೀಷನರ್.

"ಎಸ್ ಸಾರ್ !" ಅಟೆಂಕ್ಷನ್‌ನಲ್ಲಿ ನಿಂತು ಸೆಲ್ಯೂಟ್ ಮಾಡುತ್ತಾ ಹೇಳಿದ ಕಮೀಷನರ್.

"ಆಯಿತು. ಇದೊಮ್ಮೆ ಕ್ಷಮಿಸಿದ್ದೇನೆ ! ನಮ್ಮ ಇಲಾಖೆಯ ಬಗ್ಗೆ ತುಚ್ಛವಾಗಿ ಮಾತಾಡಿದ ಯಾರನ್ನೊ ಬಂಧಿಸಿದಿರಂತೆ ನಿಜವೇನು ?" ಕೇಳಿದ ಕಮೀಷನರ್.

"ಹೌದು ಸಾರ್ !"

"ಐ.ಸೀ ! ನಾನು ಅಂದುಕೊಂಡಂತೆಯೇ ಆಗಿದೆ !" ತನ್ನಷ್ಟಕ್ಕೆ ತಾನೆ ಹೇಳಿಕೊಂಡ ಕಮೀಷನರ್.

"ಏನು ಸರ್ ನೀವಂದುಕೊಂಡದ್ದು ?" ಆಶ್ಚರ್ಯದೊಡನೆ ಕೇಳಿದ ಇನ್ಸ್‌ಪೆಕ್ಟರ್.

"ನಿನ್ನೆ ಮರ್ಡರ್ ಕೇಸಲ್ಲಿ ಸಿಕ್ಕವನು, ಇವನು ದೊಡ್ಡ ಅಂತರ್‍ರಾಷ್ಟ್ರೀಯ ಗ್ಯಾಂಗೊಂದರ ಸದಸ್ಯರೆಂದು ನಮಗೆ ಅರ್ಧಗಂಟೆಯ ಹಿಂದೆ ಮೆಸ್ಸೇಜ್ ಬಂತು. ಇವರು ಬಹಳ ಅಪಾಯಕಾರಿ ವ್ಯಕ್ತಿಗಳೆಂದು, ಯಾವುದಾದರೂ ಸ್ಪೆಷಲ್ ಪ್ಲೇಸ್‌ನಲ್ಲಿ ಅವರನ್ನಿರಿಸಿರೆಂದು ಖುದ್ದು ಗೃಹಸಚಿವರೇ ಅಪ್ಪಣೆ ಕೊಟ್ಟಿದ್ದಾರೆ ಅವರನ್ನು ನನ್ನ ಕಸ್ಟಡಿಗೆ ಕೊಡು !" ಅಧಿಕಾರಯುತ ಧ್ವನಿಯಲ್ಲಿ ಆರ್ಡರ್ ಮಾಡಿದ ಕಮೀಷನರ್.

ಏಕೆ, ಏನು ಎಂಬ ಪ್ರಶ್ನೆಗಳೇ ಏಳಲಿಲ್ಲ ಇನ್ಸ್‌ಪೆಕ್ಟರ್ ಮನಸ್ಸಿನಲ್ಲಿ. "ಕಾನ್ಸ್‌ಟೇಬಲ್ಸ್......ಅವರಿಬ್ಬರನ್ನೂ ಕರೆತನ್ನಿ !" ಎಂದು ಜೋರಾಗಿ ಆಜ್ಞಾಪಿಸಿದ.

ಐದೇ ಕ್ಷಣಗಳ ನಂತರ ಕಮೀಷನರ್ ಮುಂದಿದ್ದರು ಮಹೇಶ್, ಚಂದನ್.

"ಉಸಿರೆತ್ತದೆ ನನ್ನೊಡನೆ ಬನ್ನಿ- ಏನಾದರೂ ಮಂಗ ಚೇಷ್ಟೆ ಮಾಡಿದಿರೋ ರಸ್ತೆಯಲ್ಲೇ ಸುಟ್ಟು ಬಿಸಾಡುತ್ತೇನೆ !" ವಾರ್ನ್ ಮಾಡಿದ ಕಮೀಷನರ್.

"ಲೋ ದ್ರಾಬೆ ಮುಖದವನೇ......ನಿನಗ್ಯಾರೋ ಇನ್ಸ್‌ಪೆಕ್ಟರ್ ಕೆಲಸ ಕೊಟ್ಟದ್ದು ? ಪಿ.ಸಿ. ಕೆಲಸಕ್ಕೂ ನೀನು ನಾಲಾಯಕ್ !" ಇನ್ಸ್‌ಪೆಕ್ಟರ್ ಮುಖದಲ್ಲಿ ಮುಖವಿಟ್ಟು ಇನ್ಸಲ್ಟ್ ಮಾಡಿದ ಚಂದನ್.

"ನೋಡಿ ಸಾರ್ ?" ಅಳು ಮುಖದೊಡನೆ ಕೇಳಿದ ಇನ್ಸ್‌ಪೆಕ್ಟರ್.

"ಡೋಂಟ್ ವರಿ ! ಇಂತಹವರ ಕೊಬ್ಬಿಳಿಸುವುದು ಹೇಗೆಂದು ನನಗೆ ಚೆನ್ನಾಗಿ ಗೊತ್ತು. ಸ್ಟೇಷನ್ ಕಡೆ ನಿಗಾವಹಿಸಿ" ಅನ್ನುತ್ತಾ ಚಂದನ್, ಮಹೇಶರನ್ನು ಮುಂದಿಟ್ಟುಕೊಂಡು ಹೊರನಡೆದ ಕಮೀಷನರ್.

"ಸಾರ್......ನಿಮ್ಮ ಜೀಪೆಲ್ಲಿ ?" ಸುತ್ತಲೂ ನೋಡುತ್ತಾ ಕೇಳಿದ ಇನ್ಸ್‌ಪೆಕ್ಟರ್.

"ಆ ರಸ್ತೆಯ ಬದಿಯಲ್ಲಿ.... ಕತ್ತಲಲ್ಲಿದೆ !" ಅನ್ನುತ್ತಾ ರಸ್ತೆಗೆ ಬಂದು ಬಿಟ್ಟ ಅವರಿಬ್ಬರೊಡನೆ ಕಮೀಷನರ್.

ಆಗ ನೆನಪಾಯಿತು ಇನ್ಸ್‌ಪೆಕ್ಟರ್‌ಗೆ ಕಮೀಷನರ್ ಮುಖ ತನಗೆ ಹೊಸದು. ಅವನ ಆಲೋಚನೆಗಳೊಂದು ಹಂತಕ್ಕೆ ಬರುವ ಮೊದಲೇ ಚಂದನ್‌ನ ಮಾತುಗಳು ಕಿವಿಗೆ ಶಂಖನಾದ ದೋಪಾದಿಯಲ್ಲಿ ಅಪ್ಪಳಿಸಿತ್ತು.

"ಶ್ಯಾಂಭಾಯ್..... ಕಮೀಷನರ್ ಪಾತ್ರವನ್ನು ಇಷ್ಟು ಪಕಡ್ಬಂದಿಯಾಗಿ ನಿರ್ವಹಿಸುವೆಯೆಂದು ದೇವರಾಣೆ ಅಂದುಕೊಂಡಿರಲಿಲ್ಲ. ನಮ್ಮ ಟ್ರಾನ್ಸ್‌ಪೋರ್ಟ್ ಎಲ್ಲಿ ?" ಆನಂದದ ಕೇಕೆಯೊಡನೆ ಕೇಳಿದ್ದ ಚಂದನ್.

"ಬಾಯಿ ಮುಚ್ಚೋ ಎಮ್ಮೆ ಹಾಲು ಕುಡಿದವನೆ ! ಜೀಪೂ ಇಲ್ಲ...... ಮಣ್ಣಾಂಗಟ್ಟಿಯೂ ಇಲ್ಲ !" ಕಮೀಷನರ್ ವೇಷದಲ್ಲಿದ್ದ ಶ್ಯಾಂ ರಪ್ಪನೆ ಬೆನ್ನಿಗೊಂದು ಕೊಟ್ಟು ಗದರಿದ.

ತಾನು ನಿಂತಿರುವ ನೆಲವೇ ಬಿರುಕು ಬಿಟ್ಟಂತಾಯಿತು ಇನ್ಸ್‌ಪೆಕ್ಟರ್‌ಗೆ ಮೊದಲ ಮಿಸ್ಟೇಕ್– ಬೇಡಿ ತೆಗೆದು ಮೊದಲನೆಯವನನ್ನು ಒಳಗೆ ಕೂಡಿದ್ದು. ಎರಡನೇ ಮಿಸ್ಟೇಕ್ ಎರಡನೆಯವನ ಕೈಕಾಲು ಮುರಿದು ಆಸ್ಪತ್ರೆ ಸೇರಿಸದೆ ಮೊದಲನೆಯವನಿದ್ದ ಸೆಲ್‌ಗೇ ತಳ್ಳುವ ಹುಚ್ಚು ನಿರ್ಧಾರಕ್ಕೆ ಯೋಚಿಸದೆ ಬಂದದ್ದು. ಮೂರನೇ ಮಿಸ್ಟೇಕ್ ಇಷ್ಟು ವರ್ಷ ಸರ್ವಿಸ್ ಆಗಿಯೂ ಕಮೀಷನರ್ ಮುಖ ಗುರುತಿಸದೇ ಹೋದದ್ದು.

ತನ್ನ ಕೆಲಸಕ್ಕೆ ಸಂಚಕಾರ ಬಂತೆಂದು ಗ್ಯಾರಂಟಿಯಾಗಿ ಹೋಯಿತು. ಅವನಿಗೆ. "ಮೋಸ......ವಂಚನೆ......ಅವರು ಧಗಾಕೋರರು......ಹಿಡಿಯಿರಿ...... ಹಿಡಿಯಿರಿ......" ಇದ್ದಕ್ಕಿದ್ದಂತೆ ಟಾಪ್‌ಪಿಚ್‌ನಲ್ಲಿ ಅರಚಿಕೊಂಡ.

ಎರಡುಕ್ಷಣ ಏನೂ ಅರ್ಥವಾಗದೆ ಪ್ರತಿಮೆಗಳಂತೆ ನಿಂತ ಪಿ.ಸಿ.ಗಳು

ಕಮೀಷನರ್ ಒಂದಿಗೆಳೊಡನೆ ಏಕ್‌ದಂ ಓಡಲು ಶುರು ಮಾಡಿದ್ದನ್ನು ಕಂಡು ವಿಷಯ ಅರ್ಥವಾಗಿ ಪೀಪಿಗಳನ್ನೂದುತ್ತಾ ಹಿಂದೆ ಬಿದ್ದರು.

ಸ್ಟೇಷನ್‌ನೊಳಗಿಂದಲೇ ಅವರನ್ನು ಏಮಾರಿಸಿ ಬಂದ ಧೀರರಿಗೆ ರಸ್ತೆಯಲ್ಲಿ, ಅದೂ ಕತ್ತಲ ತೆಕ್ಕೆಯಲ್ಲಿ ತಿಪ್ಪರಲಾಗ ಹಾಕಿಸುವುದು ಕಷ್ಟವೇ ?

ಪೋಲೀಸರಗಳೂ ಗಲ್ಲಿ ಗಲ್ಲಿ ಹುಡುಕುತ್ತಿರುವಂತೆಯೇ ಆ ಸ್ಟೇಷನ್‌ನಿಂದ ಫರ್ಲಾಂಗ್‌ನಷ್ಟು ದೂರಸಾಗಿ ಟ್ಯಾಕ್ಸಿಯೊಂದನ್ನು ಹತ್ತಿ ಹೋಟೆಲ್ ಇಂಪೀರಿಯಲ್ ಸೇರಿಕೊಂಡಿದ್ದರು ಮಹೇಶ ಮತ್ತವನ ಶಿಷ್ಯರು.

ಕೊಠಡಿಯಲ್ಲಿ ಟೇಬಲ್ ಮೇಲೆ ನೀಟಾಗಿ ಜೋಡಿಸಿಟ್ಟಿದ್ದ ಬಿರಿಯಾನಿ ಪಾಕೆಟ್‌ಗಳನ್ನು ಕಂಡಾಗ 'ಹೇ......ಯಾ' ಎಂದು ಜಿಂದು ಜಂಗ್ಲಿ ಕೂಗು ಹಾಕಿ ತಲೆಯಮೇಲೆ ಮೊಟಕಿಸಿಕೊಂಡರೂ ಕೇರ್ ಮಾಡದೆ ಪಕ್ಕದಲ್ಲಿದ್ದ ವಿಸ್ಕಿ ಬಾಟಲ್‌ನ ಕಾರ್ಕ್ ಬಿಚ್ಚುವುದರಲ್ಲಿ ಮಗ್ನನಾದ ಚಂದನ್ !

## ೬

"ಬಹಳ ದಿನಗಳಿಂದ ಬೊಂಬೆಯಲ್ಲಿ ಹದಿವಯಸ್ಕ ಹುಡುಗಿಯರ ಅಪಹರಣ ಜಾಲ ವ್ಯವಸ್ಥಿತವಾಗಿ ನಡೆಯುತ್ತಿದೆ. ಈ ವ್ಯವಹಾರವನ್ನು ಕೊನೆಗಾಣಿಸಲು ಸ್ಪೆಷಲ್ ಬ್ರಾಂಚ್ ಎಷ್ಟೇ ಪ್ರಯತ್ನಿಸಿದರೂ, ಈ ವ್ಯವಸ್ಥೆಯ ಹಿಂದಿರುವ ವ್ಯಕ್ತಿಗಳನ್ನಾಗಲಿ, ಮಾಯವಾದ ಹುಡುಗಿಯರನ್ನಾಗಲಿ ಟ್ರೇಸ್ ಮಾಡಲಾಗಲಿಲ್ಲ. ಇದು ಸಮರ್ಥ ತಂಡವೊಂದರ ಕಾರ್ಯಾಚರಣೆ ಎಂದು ಸ್ಪಷ್ಟವಾಗಿ ನಿರೂಪಿಸುತ್ತದೆ" ಸಿಗರೇಟ್ ಹಚ್ಚಲು ತನ್ನ ವಿವರಣೆ ಎರಡು ಕ್ಷಣ ನಿಲ್ಲಿಸಿದ ಮಹೇಶ.

ತಮ್ಮ ಬೊಂಬಾಯಿ ಪ್ರಯಾಣದ ಹಿನ್ನೆಲೆಯೇನೆಂದು ಈಗ ಕ್ಲಿಯರ್ ಆಗ ತೊಡಗಿ ಎಚ್ಚರಿಕೆಯೊಡನೆ ಕೇಳಿಸಿಕೊಳ್ಳತೊಡಗಿದ್ದರು ಚಂದನ್ ಶ್ಯಾಂ.

... ರಾಜ್ಯ ಕೇಂದ್ರ ಗ್ರಂಥಾಲಯ
ಬೆಂಗಳೂರು ...



"ನಿಮಗೆ ನಮ್ಮ ಸನ್ಮಾನ್ಯ ಗೃಹ ಸಚಿವರ ಮೊಮ್ಮಗಳು ಶಾಲಿನಿ ಗೊತ್ತಿರ ಬೇಕಲ್ಲಾವೇ ?" ಇದ್ದಕ್ಕಿದ್ದಂತೆ ಕೇಳಿದ ಮಹೇಶ.

ದೆಹಲಿಯಲ್ಲಿರುವ ಸಚಿವರ ಮೊಮ್ಮಗಳಿಗೂ, ಬಾಂಬೆಯ ಸದ್ಯದ ಘಟನೆಗಳಿಗೂ ಏನು ಸಂಬಂಧವೆಂದು ಊಹಿಸಲಾಗದೆ ಸುಮ್ಮನೆ ತಲೆ ಯಾಡಿಸಿದರು ಇಬ್ಬರೂ.

SC164CR

"ದೆಹಲಿಯ ಸೋಫಿಯಾ ಕಾಲೇಜ್‌ನಲ್ಲಿ ಓದುತ್ತಿರುವ ಶಾಲಿನಿ ಅಸಾಮಾನ್ಯ ಸೌಂದರ್ಯವತಿ. ಬ್ಯೂಟಿ ಕಾಂಟೆಸ್ಟ್‌ಗಳಲ್ಲಿ ಯಾವಾಗಲೂ ಮೊದಲ ಸ್ಥಾನ ಅವಳದೇ. ವಾರದ ಹಿಂದೆ ತನ್ನ ಗೆಳತಿಯೊಬ್ಬಳ ಮದುವೆಗೆಂದು ಬಾಂಬೆಗೆ ಬಂದವಳು, ಮದುವೆ ಚತ್ರವನ್ನು ತಲುಪಲೇ ಇಲ್ಲ ಮಧ್ಯದಲ್ಲೇ ಅದೃಶ್ಯಳಾದಳು.

"ಮದುವೆ ಮುಗಿದು ಮೂರು ದಿನಗಳಾದರೂ ಅವಳು ವಾಪಸ್ಸಾಗದಿದ್ದಾಗ ಆತಂಕಗೊಂಡು ಟ್ರಂಕಾಲ್ ಮಾಡಿದ ಅವಳ ತಂದೆಗೆ ದೊಡ್ಡ ಷಾಕ್. ಮದುವೆಗೆ ಬಂದೇ ಇಲ್ಲ ಶಾಲಿನಿ. ತಕ್ಷಣ ಗೃಹ ಸಚಿವರಿಗೆ ವಿಷಯ ತಿಳಿದು ಅವರೇ ಖುದ್ದಾಗಿ ಇಲ್ಲಿಗೆ ಬಂದಿದ್ದಾರೆ ಏರ್‌ಪೋರ್ಟ್‌ನಲ್ಲಿ ಕರ್ನಲ್‌ರ ಡ್ರೈವರ್ ಬಾಬು ಅಕಸ್ಮಾತ್ತಾಗಿ ಭೇಟಿಯಾದನಂತೆ. ಅವನಿಗೆ ನಾನೂ ಸೋಫಿಯಾ ಬಾಂಬೆಯಲ್ಲಿರುವುದು ಗೊತ್ತಿತ್ತು. ಅವನ ಮೂಲಕ ಆ ವಿಷಯ ಸಚಿವರಿಗೂ ತಿಳಿಯಿತು. ಅವರು ಬಾಂಬೆ ಬಂದೊಡನೆ ನನಗೆ ಫೋನ್ ಮಾಡಿದರು.

"ಇದು ಸ್ಪೆಷಲ್ ಬ್ರಾಂಚ್ ಸರದಿಯಲ್ಲಿ ನಡೆಯಬೇಕಾದ ತನಿಖೆಯಾದ್ದರಿಂದ ಅವರ ದಾರಿಗಡ್ಡ ಬರದಂತೆ ಸೈಲೆಂಟಾಗಿ ನಾವು ಕಾರ್ಯ ನಿರ್ವಹಿಸಬೇಕಾಗಿದೆ. ಆದ್ದರಿಂದಲೇ ಬಾಸ್‌ಗೆ ತಿಳಿಸದಂತೆ ನಿಮ್ಮನ್ನಿಲ್ಲಿಗೆ ಕರೆಸಿಕೊಂಡದ್ದು. ಅಕಸ್ಮಾತ್ ಅವರಿಗೆ ಗೊತ್ತಾದರೂ ಹೋಂ ಮಿನಿಸ್ಟರ್ ಅವರನ್ನು ಸಮಾಧಾನಿಸುತ್ತಾರಂತೆ..." ಕ್ಷಣ ಮಾತು.

"ಕಥೆಯೇನೋ ಚೆನ್ನಾಗಿದೆ ಗುರು ! ಲಾಕಪ್‌ನೊಳಗೆ ಹೇಗೆ ಪ್ರವೇಶ ಪಡೆದೆ ?" ತನ್ನ ಅನುಮಾನ ಹೊರಗಿಟ್ಟ ಚಂದನ್.

"ರಂಗಕ್ಕಿಳಿದೊಡನೆ ಅಬ್ದುಲ್ ಎಂಬ ಸುಂದರಾಂಗನೊಬ್ಬ ಹುಡುಗಿಯರ ಕಿಡ್ನಾಪಿಂಗ್ ಮಾಡುವುದರಲ್ಲಿ ಪರಿಣಿತ ಎಂಬ ತಿಳಿದುಬಂತು,

ಇನ್ನೊಂದು ವಿಶೇಷವೇನೆಂದರೆ ಶಾಲಿನಿ ಮಾಯವಾದ ದಿನದಿಂದ ಅಬ್ದುಲ್ ಸಹ ಅಂಡರ್‌ಗ್ರೌಂಡ್ ಆಗಿಬಿಟ್ಟಿದ್ದಾನೆ. ಅವನಿಗೂ ದಾವೂದ್‌ಗೂ ಏನಾದರೂ ಬಿಸಿನೆಸ್ ಲಿಂಕ್ಸ್ ಇದೆಯೇನೋ ಎಂದು ದಾವೂದ್‌ನ ಹಿಂದೆ ಬಿದ್ದೆ. ಅವನನ್ನು ಮರ್ಡರ್ ಮಾಡಿ ಬಹಳ ಇಂಟೆಲಿಜೆಂಟ್ ಆಗಿ ನನ್ನನ್ನು ಟ್ರ್ಯಾಪ್ ಮಾಡಿದ ಸರ್ದಾರ್" ಎಂದು ನಡೆದದ್ದನ್ನೆಲ್ಲಾ ವಿವರಿಸಿದ ಮಹೇಶ

ಎಲ್ಲಾ ಕೇಳಿ ಸಣ್ಣಗೆ ವಿಷಲ್ ಮಾಡಿದ ಚಂದನ್. "ಹಾಗಾದರೆ ಗುರು.... ಈ ಸರ್ದಾರ್‌ನನ್ನು ಹಿಡಿದುಕೊಂಡರೆ ಎಲ್ಲ ವಿಷಯಗಳೂ ಹೊರ ಬರುತ್ತವೆಂದಾಯಿತು !" ಅಂದ ಉತ್ಸಾಹದೊಡನೆ.

"ಕರೆಕ್ಟ್..... ಆ ರಾಸ್ಕಲ್‌ಗೆ ಎಲ್ಲ ಮಾಹಿತಿಗಳೂ ತಿಳಿದಿರುತ್ತದೆ !" ಸಿಗರೇಟ್ ತುಂಡನ್ನು ಕೆಳಕ್ಕೆಸೆದು ಕಾಲಿನಿಂದ ಹೊಸಕುತ್ತಾ ಹೇಳಿದ ಮಹೇಶ.

"ಎಲ್ಲವನ ಅಡ್ಡಾ ಮಹೇಶ್ ?" ಪ್ರಶ್ನಿಸಿದ ಶ್ಯಾಂ.

"ಕಮಾನ್ — ಅವನ ಅಡ್ರೆಸ್ ಹಿಡಿಯುವುದು ಹೇಗೆಂದು ನನಗೆ ಗೊತ್ತು ?" ಅನ್ನುತ್ತಾ ಮೇಲೆದ್ದ ಮಹೇಶ.

ರೂಮ್ ಲಾಕ್ ಮಾಡಿ ರಸ್ತೆಗೆ ಬಂದರು ಮೂವರೂ. ಟ್ಯಾಕ್ಸಿಯೊಂದನ್ನು ನಿಲ್ಲಿಸಿ ಹತ್ತಿ ಕುಳಿತು ಹೋಗಬೇಕಾದ ಜಾಗ ತಿಳಿಸಿದ ಮಹೇಶ. ಅರ್ಧಗಂಟೆಯ ನಂತರ ಒಂದು ಕ್ರೌಡೆಡ್ ಏರಿಯಾ ಪ್ರವೇಶಿಸಿ ನಿಂತಿತು ಟ್ಯಾಕ್ಸಿ. ಫೀಜ್ ಪೇ ಮಾಡಿದ ಚಂದನ್. ಪ್ರಶ್ನಾರ್ಥಕ ಭಾವದೊಡನೆ ಮಹೇಶನನ್ನು ದಿಟ್ಟಿಸಿದ ಶ್ಯಾಂ.

"ಭಾಯಿ ಲೋಗ್..... ಆ ಬಾರಿ ಮ್ಯಾನೇಜರ್‌ಗೂ ಸರ್ದಾರ್‌ಗೂ ಒಳ್ಳೆ ಪರಿಚಯ ಶ್ಯಾಂ ! ನೀನು ಹೋಗಿ ಅವನ ವಿವರಗಳನ್ನರಿತು ಬಾ. ನಾನು ಬಂದರೆ ನಮ್ಮನ್ನು ತಪ್ಪು ದಾರಿಗೆ ಕಳಿಸಿ ಸರ್ದಾರ್‌ಗೆ ಕಾಷನ್ ನೀಡುವ ಚಾನ್ಸ್ ಇದೆ" ಎಂದು ಸೂಚನೆ ನೀಡಿದ ಮಹೇಶ್.

"ನಾನು ಹೋಗುತ್ತೇನೆ ಗುರು" ಅಂದ ಚಂದನ್.

"ನಾವೇನು ಹೆಣ್ಣು ನೋಡಲು ಹೋಗುತ್ತಿಲ್ಲ ಮಾರಾಯ ! ಮಕ್ಕಳಿಗಿಲ್ಲಿ

ಪ್ರವೇಶ ಬೇರೆ ನಿಷಿದ್ಧ !" ಕಿಂಡಲ್ ಮಾಡಿದ ಶ್ಯಾಂ. ಜೊತೆಗೆ ತಲೆಯ ಮೇಲೊಂದು ಹೊಡೆತ ಬೇರೆ !

ರೇಗಿ ಹೋಯಿತು ಚಂದನ್‌ಗೆ. "ನಿನ್ನ ಈ ರೀತಿ ನನಗೆ ಎಳ್ಳಷ್ಟೂ ಹಿಡಿಸುವುದಿಲ್ಲ ಶ್ಯಾಂ. ಬಾಯಲ್ಲಿ ಹೇಳುವ ಮಾತಿಗೆ ಕೈ ಕೆಲಸ ಯಾಕೆ ?" ಗುರಾಯಿಸುತ್ತಾ ಕೇಳಿದ.

"ಶ್ಯಾಂ......ಈ ಮುನಿಸಾಯಿಯನ್ನು ಜೊತೆಯೇಕೆ ಕರೆತಂದೆ ?" ಸರ್ರನೆ ಹು ಹಾಯ್ದು ಮಹೇಶ.

"ಸಾರಿ ಗುರು !" ಎಂದು ಮುಖ ಊದಿಸಿಕೊಂಡು ಪಕ್ಕಕ್ಕೆ ಸರಿದು ನಿಂತ ಚಂದನ್.

ಕಿಲಕಿಲ ನಗುತ್ತಾ ಚಂದನ್ ತಲೆಗೂದಲು ಕೆದರಿ ಬಾರ್‌ನೊಳಕ್ಕೆ ಎಂಟರಾದ ಶ್ಯಾಂ. ಹತ್ತು ನಿಮಿಷಗಳ ನಂತರ ಹೊರಬಿದ್ದ.

"ಎನಿ ನ್ಯೂಸ್ ಎಬೌಟ್ ದಟ್ ಬಾಸ್ಟರ್ಡ್ ?" ಕೇಳಿದ ಮಹೇಶ

"ತಿಳಿಯಿತು ಗುರು ! ಜೋರ್‌ವಿಲೆ ಪ್ರಾಂತ್ಯದಲ್ಲಿ ಚಿಷೆ ರಸ್ತೆಯಲ್ಲೊಂದು ಅರಳಿ ಕಟ್ಟೆಯ ಪಕ್ಕದ ಬಂಗಲೆಯಲ್ಲಿ ಅವನ ವಾಸವಂತೆ ರಾತ್ರಿ ಹನ್ನೆರಡರ ಮೇಲೆಯೇ ಅವನು ಮನೆ ಸೇರುವುದು" ಅಂದ ಶ್ಯಾಂ

"ಆಲ್‌ರೈಟ್......ನಡೆಯಿರಿ ಹಾಗಾದರೆ" ಅನ್ನುತ್ತಾ ಅಲ್ಲಿಂದ ಸರಿದು ಪಕ್ಕದಲ್ಲಿದ್ದ ಗಲ್ಲಿಯ ಕಡೆಗೆ ನಡೆದ ಮಹೇಶ.

ಹೆಜ್ಜೆ ಹಾಕುತ್ತಿದ್ದಂತೆ ಕೆದಕಿದ ಜೇನು ಗೂಡಾಗಿತ್ತು ಅವನ ಮನ. ಸರ್ದಾರ್‌ನ ಮುಖಾಮುಖಿಯಲ್ಲಿ ಅವನ ಬಾಯಿ ಬಿಡಿಸದ ಹೊರತು ಈ ಕಾರ್ಯಾಚರಣೆಗೊಂದು ರೂಪ ದೊರಕದು. ಈ ಸೆಟಪ್ ಅರ್ಥವಾಗದ ಹೊರತು ಶತ್ರು ವಲಯವನ್ನು ಪೆನಿಟ್ರೇಟ್ ಮಾಡಲಾಗದು. ದಾವೂದ್‌ಗಾದಂತೆ ಸರ್ದಾರ್‌ಗೂ ಶತ್ರುಗಳು ಒಂದು ಗತಿ ಕಾಣಿಸಿಬಿಟ್ಟರೆ......

ಮುಂದೆ ಯೋಚಿಸಲೇ ಭಯವಾಯಿತು ಅವನಿಗೆ !

# ೧೦

"ಗುರು...... ನನಗಂತೂ ನಂಬಿಕೆಯಿಲ್ಲ. ಸಿನಿಮಾ ಕ್ಯೂನಲ್ಲಿ ನಿಂತು ಕೊನೆಗೆ ಹೌಸ್‌ಫುಲ್ ಬೋರ್ಡ್ ನೋಡಿ ವಾಪಸ್ಸಾಗುವ ಸ್ಟೇಜ್ ರೀಚ್ ಆದೆವೇನೊ ಅನ್ನಿಸುತ್ತಿದೆ. ಅವನಿಲ್ಲಿಂದ ಜಾಗ ಖಾಲಿ ಮಾಡಿಬಿಟ್ಟಂತೆ ಕಾಣುತ್ತೇವೆ!" ಕಾಂಪೌಂಡ್ ಗೋಡೆಗಂಟಿಕೊಂಡಂತೆ ಫ್ಲಾಟ್ ಆಗಿದ್ದ ಚಂದನ್ ಪಿಸಪಿಸನೆ ನುಡಿದ.

ಸಿಗರೇಟ್ ದಂ ಎಳೆಯುತ್ತಾ, ಬೆಂಕಿ ಹೊರಕಿಣುಕದಂತೆ ಅಂಗೈ ಅಡ್ಡ ಹಿಡಿದಿದ್ದ ಮಹೇಶ ಸಣ್ಣಗೆ ನಕ್ಕು ತಲೆ ಅಡ್ಡಡ್ಡ ಆಡಿಸಿದ ಚಂದನ್ ಭಾವನೆ ತಪ್ಪು ಅನ್ನುವಂತೆ.

ಅದಕ್ಕೇನೋ ಕಾಮೆಂಟ್ ಮಾಡಹೋದ ಚಂದನ್ ಬಾಯನ್ನು ಗಬಕ್ಕನೆ ಮುಚ್ಚಿದ ಮಹೇಶ. ಕತ್ತಲಿಗೆ ಅಡ್ಜಸ್ಟ್ ಆಗಿದ್ದ ಅವರ ಕಣ್ಣುಗಳಿಗೆ ಬಂಗಲೆಯಿಂದ ನೂರು ಗಜಗಳಷ್ಟು ದೂರದಲ್ಲಿ ಯಾವುದೋ ಆಕಾರ ಇತ್ತಲೇ ಬರುತ್ತಿರುವುದು ಕಾಣಿಸಿತು.

ಕಪ್ಪು ನೆರಳಂತೆ ಕತ್ತಲಲ್ಲಿ ಚಲಿಸುತ್ತಿದ್ದ ಸರ್ದಾರ್ ಬಂಗಲೆಯ ಬಳಿ ನಿಂತು ಸುತ್ತಲೂ ಪರಿಶೀಲಿಸಿದ. ಉಸಿರು ಬಿಗಿ ಹಿಡಿದು ಅಲ್ಲಾಡದೆ ಕುಳಿತ ಚಂದನ್.

ಸರ್ದಾರ್‌ನನ್ನು ಗುರುತಿಸಿದೊಡನೆ ಮಡಚಿಟ್ಟ ಸ್ಪ್ರಿಂಗ್‌ನಂತೆ ಟೈಟ್ ಆಗಿದ್ದವು ಮಹೇಶನ ಅವಯುವಗಳು ಅಷ್ಟಾಂವ ಸ್ವಲ್ಪ ದೂರಕ್ಕೆ. ಅರಳೀ ಕಟ್ಟೆಯ ಹಿಂಬದಿಯಲ್ಲಿ ಅಡಗಿದ್ದ ಶ್ಯಾಂಗೆ ಸನ್ನೆ ಮಾಡಿದ.

ಒಂದು ನಿಮಿಷ ಹಾಗೆಯೇ ನಿಂತಿದ್ದು ಆನಂತರ ಸೈಲೆಂಟಾಗಿ ಬಂಗಲೆಯ ಬಾಗಿಲನ್ನು ತೆರೆದು ಒಳಕ್ಕೆ ಹೋಗಿ ಬಾಗಿಲು ಮುಚ್ಚಿಕೊಂಡ ಸರ್ದಾರ್.

ಗೋಸ್ಟ್‌ಗಳಂತೆ ಮೇಲೆದ್ದರು ಮಹೇಶ, ಚಂದನ್. ಶ್ಯಾಂ ಇದ್ದ

ಮರೆಯಿಂದ ಹೊರ ಬಂದ ಶ್ಯಾಂ. ಮೂವರೂ ಒಟ್ಟಾಗಿ ಮುಂದಕ್ಕೆ ಚಲಿಸಿದರು.

ಅರಳೀಮರದ ಕೊಂಬೆಗಳು ಸರ್ದಾರ್ ಬಂಗಲೆಯ ಬಾಲ್ಕನಿಯವರೆಗೆ ಸ್ಪ್ರೆಡ್ ಆಗಿರುವುದನ್ನು ಗಮನಿಸಿದವು ಮಹೇಶನ ಚುರುಕು ಕಂಗಳು.

"ನೀವಿಬ್ಬರೂ ಬಂಗಲೆಯ ಹಿಂಬದಿಯಿಂದ ಬನ್ನಿ. ನಾನು ಮರದ ಮೇಲಿಂದ ಬಾಲ್ಕನಿಯಲ್ಲಿಳಿಯುತ್ತೇನೆ" ಪಿಸು ದನಿಯಲ್ಲಿ ಹೇಳಿ ಮರ ಹತ್ತ ತೊಡಗಿದ ಮಹೇಶ

ಬಂಗಲೆಯ ಹಿಂಭಾಗದ ಕಡೆಗೆ ನಡೆದರು ಶ್ಯಾಂ, ಚಂದನ್

ಮೆಲುವಾಗಿ ಯಾವುದೋ ಹಾಡು ವಿಷಲ್ ಮಾಡುತ್ತಾ ಬೆಡ್ ರೂಂನಲ್ಲಿ ಕುಳಿತು ವಿಸ್ಕಿ ಹುಯ್ದುಕೊಳ್ಳುವುದರಲ್ಲಿ ಮಗ್ನನಾಗಿದ್ದ ಸರ್ದಾರ್ ಒಂದು ಪೆಗ್ ಮುಗಿಸಿ, ಎರಡನೇ ಪೆಗ್ ಶುರು ಮಾಡುತ್ತಿರುವಾಗ ಬಾಗಿಲ ಬಳಿ ಶಬ್ದವಾಯಿತು.

ಅದುರಿಬಿದ್ದು ಅತ್ತ ನೋಡಿದ ಅವನ ರಕ್ತ ಫ್ರೀಝ್ ಆಯಿತು. ಚಳಿಜ್ವರ ಬಂದಂತೆ ಗಡಗಡ ನಡುಗತೊಡಗಿತು ಶರೀರ. ಹತ್ತಿದ್ದ ನಿಶಾ ಅದೆಲ್ಲಿ ಪರಾರಿಯಾಗಿತ್ತು ?

ಬಾಗಿಲಿಗೊರಗಿ ನಿಂತಿದ್ದರು ಮಹೇಶ, ಚಂದನ್, ಶ್ಯಾಂ !

"ಏಯ್...... ಯಾರ್‍ರೋ ನೀವು ! ಇಲ್ಲೇಕೆ ಬಂದಿರಿ ?" ಇಲ್ಲದ ಧೈರ್ಯ ತಂದುಕೊಂಡು ಆವಾಝ್ ಹಾಕಿದ ಸರ್ದಾರ್

"ಸರ್ದಾರ್__ ನನ್ನ ಗುರುತೂ ಸಿಕ್ಕಲಿಲ್ಲವೇ ?" ಅನ್ನುತ್ತಾ ಮುಂದಕ್ಕೆ ಬಂದ ಮಹೇಶ.

"ಯಾರು ನೀನು ?" ಇದೇ ಮೊದಲ ಸಲ ನೋಡುತ್ತಿರುವವನ ನೋಗಿನೊಡನೆ ಆಶ್ಚರ್ಯದ ಭಾವ ಪ್ರದರ್ಶಿಸುತ್ತಾ ಕೇಳಿದ ಸರ್ದಾರ್.

ಅವನ ಮಾತು ಪೂರ್ತಿಯಾದೊಡನೆ ಮುಷ್ಟಿ ಕಟ್ಟಿದ ಮುಖಕ್ಕಪ್ಪಳಿಸಿದ ಮಹೇಶ. ಹೊಡೆತ ತಗುಲಿದ ತಕ್ಷಣವೇ ಚಟ್ಟನೆ ಚೀರಿ ಹಿಂದಕ್ಕೆಗರಿ ಬಿದ್ದ ಸರ್ದಾರ್. ಮೂಗು ಪಚ್ಚಡಿಯಾಗಿ ಚುಟಿಸೀಳಿ ರಕ್ತ ತೊಟ ತೊಟ ತೊಟ್ಟಿಕ್ಕಲಾರಂಭಿಸಿತು.

"ಅಯ್ಯಯ್ಯೋ.... ಏನಿದು ದುಂಡಾವರ್ತಿ ?" ಗಂಟಲು ಹರಿದು ಹೋಗುವಂತೆ ಕಿರುಚಿಕೊಂಡ ಸರ್ದಾರ್.

ಅಟ್ ಎ ಟೈಂ ಮೇಲೆದ್ದವು ಚಂದನ್, ಶ್ಯಾಂರ ಬೂಟುಗಾಲುಗಳು. 'ಫಟ್ ಫಟಾರ್' ಎಂದು ಮನ ಬಂದಂತೆ ಅವನ ದೇಹವನ್ನು ಫುಟ್‌ಬಾಲ್ ಆಡಿದವು. ಬೋನಿನಲ್ಲಿ ಸಿಕ್ಕ ಪ್ರಾಣಿಯಂತೆ ಗಾಯಿಲಿಡತೊಡಗಿದ ಸರ್ದಾರ್. ಕಾಲಿನ ಮೂಳೆ, ಮೊಣಕೈ ಮೂಳೆ ಮುರಿದು ಹೊರಕ್ಕಿಣು ಕುತ್ತಾ ವಿಕೃತವಾಗಿ ತೋರಿಬರ ತೊಡಗಿದವು.

"ಸ್ಟಾಪ್ ಇಟ್ ಪ್ರಾಕ್ಟೀಸ್ ಫ್ರೆಂಡ್ಸ್.... ಈಗಾಗಲೇ ಸಾಯುವ ಸ್ಟೇಜ್ ತಲುಪಿಬಿಟ್ಟಿದ್ದಾನೆ !" ಮೈಲ್ಡ್ ಧ್ವನಿಯಲ್ಲಿ ಹೇಳಿದ ಮಹೇಶ.

ಮೇಲೆತ್ತಿದ್ದ ಕೈಗಳನ್ನು ಮನಸ್ಸಿಲ್ಲದೆ ಕೆಳಕ್ಕಿಳಿಸಿದರು ಶ್ಯಾಂ, ಚಂದನ್.

"ಯಾರ್ ಸರ್ದಾರ್.... ಈಗಲಾದರೂ ನನ್ನ ನೆನಪಾಯಿತೇ ?" ಮೊಣಕೈ ಮೂಳೆಯನ್ನು ಲೈಟಾಗಿ ಟಚ್ ಮಾಡಿ ಕೇಳಿದ ಮಹೇಶ.

ಭೋರೆಂದು ಅತ್ತ ಸರ್ದಾರ್. "ನನ್ನ ಕೊಲ್ಲಬೇಡಿ.... ಪ್ಲೀಸ್.... ಚಿತ್ರಹಿಂಸೆ ನೀಡಿಕೊಲ್ಲಬೇಡಿ ..." ಬಿಕ್ಕಿ ಬಿಕ್ಕಿ ಅಳುತ್ತಾ ಪ್ರಾರ್ಥಿಸಿದ.

"ಹಾಗಿದ್ದರೆ ನಿನಗೆ ತಿಳಿದಿರುವ ಮಾಹಿತಿಗಳನ್ನು ನಮ್ಮ ಕಿವಿಗಷ್ಟು ಹಾಕಿಬಿಡು ! ಗರ್ಲ್ಸ್ ಕಿಡ್ನಾಪರ್ ಅಬ್ದುಲ್ ಎಲ್ಲಿದ್ದಾನೆ ? ದಾವೂದ್‌ನ ಕೊಲೆಗಡುಕರ್‍ಯಾರು ? ನನ್ನನ್ನು ಅಲ್ಲೇಕೆ ಸಿಕ್ಕಿಸಿದೆ ? ಒಂದೊಂದು ಪ್ರಶ್ನೆಗೂ ನಿಜವಾದ ಉತ್ತರ.... ಈಗಲೇ.... ಬೇಕು !" ಕರ್ಕಶ ಧ್ವನಿಯಲ್ಲಿ ಕೇಳಿದ ಮಹೇಶ.

"ಪೌಂಟ್‌ಥಾವುಸ್ ಏರಿಯಾದಲ್ಲಿರುವ ಈಗ ಜನ ಹೆಚ್ಚಾಗಿ ಹೋಗದಿರುವ ಹಳೆಯ ಚರ್ಚೊಂದರಲ್ಲಿ ಅಡಗಿಕೊಂಡಿದ್ದಾನೆ ಅಬ್ದುಲ್ ? ಇತ್ತೀಚೆಗೆ ಅವನು ಸುಂದರ ಹುಡುಗಿಯೊಬ್ಬಳನ್ನು ಕಿಡ್ನಾಪ್ ಮಾಡಿದ್ದಾನೆ. ಅದಕ್ಕೋ ಅಥವಾ ಬೇರಾವುದೋ ಕಾರಣಕ್ಕೋ ಅವನನ್ನಲ್ಲಿ ಅಡಗಿಸಿಟ್ಟಿದ್ದಾನೆ ಅಕ್ಬರ್...." ಸರಸರ ಒದರಿದ ಸರ್ದಾರ್.

"ಅಕ್ಬರ್.... ಯಾರೀ ಹೊಸ ಕ್ಯಾರೆಕ್ಟರ್ ?" ಪ್ರಶ್ನಿಸಿದ ಮಹೇಶ.

"ದಾವೂದ್‌ನನ್ನು ಕೊಲ್ಲಿಸಿದವನು ಅವನೇ ! ಬಾಂಬೆ ಅಂಡರ್

ವರ್ಲ್ಡ್‌ನ ದೊಡ್ಡ ಮೀನು- ಹೆಸರಾಂತ ಸ್ಮಗ್ಲರ್. ಹೆಣ್ಣುಗಳನ್ನು ಪರದೇಶಕ್ಕೆ ರವಾನೆ ಮಾಡುವುದರಲ್ಲಿ ಪರಿಣಿತ. ಅಬ್ದುಲ್‌ಗೂ ದಾವೂದ್‌ಗೂ ಸಾಕಷ್ಟು ವ್ಯವಹಾರವಿತ್ತು, ನೀವು ದಾವೂದ್‌ನನ್ನು ಟ್ರ್ಯಾಪ್ ಮಾಡಿಬಿಟ್ಟರೆ ಅಬ್ದುಲ್ ವಿಷಯ ತಿಳಿದು ಹೋಗುತ್ತದೆಂದು ಅವನನ್ನು ಕೊಲ್ಲಿಸಿ ಅಲ್ಲಿ ಅವನಿಗಾಗಿ ಟ್ರ್ಯಾಪ್ ನಿರ್ಮಿಸಿದ್ದ ಅಕ್ಬರ್! ಆ ಪ್ಲಾನಿಂಗ್ ಎಲ್ಲಾ ಅವನದೇ. ಅವನಾಜ್ಞೆಯನ್ನು ನಾನು ಜಾರಿಗೊಳಿಸಿದೆನಷ್ಟೇ!" ವಿವರಿಸಿದ ಸರ್ದಾರ್.

"ಅಕ್ಬರ್ ಹೆಡ್‌ಕ್ವಾರ್ಟರ್ಸ್ ಎಲ್ಲಿದೆ?" ಅವನನ್ನೇ ತೀಕ್ಷ್ಣವಾಗಿ ನೋಡುತ್ತಾ ಕೇಳಿದ ಮಹೇಶ.

"ಆ ವಿಷಯ ನನಗೆ ಗೊತ್ತಿಲ್ಲ...... ಅಬ್ದುಲ್‌ಗೆ ಗೊತ್ತು. ಅಕ್ಬರ್‌ನ ರೈಟ್ ಹ್ಯಾಂಡ್ ಡೋಗ್ರಾ. ಡೋಗ್ರಾನ ಪರಮಾಪ್ತ ಸ್ನೇಹಿತ ಅಬ್ದುಲ್. ಅಬ್ದುಲ್ ತಾನೆಗರಿಸಿ ತಂದ ಹಕ್ಕಿಗಳನ್ನು ಡೋಗ್ರಾ ಮೂಲಕ ಅಕ್ಬರ್‌ನ ಹೇರಮ್‌ಗೆ ಕಳಿಸಿಕೊಡುತ್ತಾನೆ......" ದೀನನೋಟ ಬೀರುತ್ತಾ ಹೇಳಿದ ಸರ್ದಾರ್.

ತಲೆಯಾಡಿಸಿ ಶ್ಯಾಂ ಕಡೆ ತಿರುಗಿದ ಮಹೇಶ. "ಭಾಯಿ......ಇವನ ಉಪಯೋಗ ಮುಗಿಯಿತು__!" ಅಂದ ಐಸ್‌ನಷ್ಟು ತಣ್ಣನೆಯ ಧ್ವನಿಯಲ್ಲಿ.

ಮರುಕ್ಷಣ ಶ್ಯಾಂನ ಮೊಣಕೈ ಮೇಲೆದ್ದು ಕೆಳಗಿಳಿಯಿತು. ಸರ್ದಾರ್ ಗಂಟಲ ಮೇಲೆ.

'ಥನ್ ಎಂದು ಬಂದಿತ್ತು ಶಬ್ದ!

* * * * * *

"ಡೋಗ್ರಾ......!"

ಕೊಠಡಿ ಅಲ್ಲಾಡಿ ಹೋಗುವಷ್ಟು ಜೋರು ಧ್ವನಿಯಲ್ಲಿ ಕೂಗಿದ ಅಕ್ಬರ್.

ಪಕ್ಕದಲ್ಲೇ ನಿಂತು ಆ ಕೂಗಿಗಾಗಿಯೇ ಕಾಯುತ್ತಿದ್ದ ಡೋಗ್ರಾ ಎರಡೆಜ್ಜೆ ಮುಂದೆ ಬಂದು ನಮ್ರತೆಯೊಡನೆ ಕೈಕಟ್ಟಿನಿಂತ.

"ಡೋಗ್ರಾ...... ಅವರು ನಾನಂದುಕೊಂಡಂತೆಯೇ ಮಾಡಿಬಿಟ್ಟರು...... ಸರ್ದಾರ್ ಸತ್ತು ಹೋದ! ಆ ಹಲಾಲ್ಖೋರ ಸಾಯುವ ಮೊದಲು ಅಬ್ದುಲ್ ವಿಷಯ ಗಿಣಿ ಪಾಠ ಒಪ್ಪಿಸಿಯೇ ಸತ್ತಿರುತ್ತಾನೆ. ಸೋ...... ನಮಗಿನ್ನು ಅಬ್ದುಲ್‌ನ ಅವಶ್ಯಕತೆ ಕೊನೆಗೊಂಡಿತು! ನಮ್ಮವರನ್ನು ಕಳಿಸಿ ಅವನನ್ನು ಸರ್ದಾರ್ ಜೊತೆಗೆ ಕಳಿಸಿಬಿಡು!" ಹವಾನಾ ಸಿಗರ್ ಹೊಗೆ ಸೀಲಿಂಗ್ ಕಡೆ ಚಿಮ್ಮುತ್ತಾ ಆಜ್ಞಾಪಿಸಿದ ಅಕ್ಬರ್.

"ಓ. ಕೆ. ಬಾಸ್!" ಎಂದು ಹೇಳಿ ಕೊಠಡಿಯ ಹೊರಗಿದ್ದ ಹತು ಜನ ಅನುಚರರನ್ನು ಆಗಿಂದಾಗಲೇ ಅಬ್ದುಲ್‌ನ ಡೆಸ್ಪ್ಯಾಚಿಂಗ್‌ಗೆಂದು ಕಳಿಸಿ ಕೊಟ್ಟ ಡೋಗ್ರಾ.

"ನೀವಿನ್ನು ಆ ವಿಷಯದಲ್ಲಿ ನಿಶ್ಚಿಂತೆಯಾಗಿರಿ ಬಾಸ್!" ಎಂದು ಸಮಾಧಾನ ಹೇಳಿದ.

"ಡೋಗ್ರಾ...... ನಿನ್ನ ಕಾರ್ಯಕ್ಷಮತೆಯ ಬಗ್ಗೆ ನನಗೆ ಅಸೀಮ ನಂಬಿಕೆಯಿದೆ...... ಯಾರೀ ಆಗಂತುಕರು? ನಮ್ಮ ಮೇಲೇಕೆ ಅವರ ಗಮನ? ಇಷ್ಟೊಂದು ತೀವ್ರ ತನಿಖೆಯನ್ನೇಕೆ ಮಾಡುತ್ತಿದ್ದಾರೆ?" ತನ್ನಷ್ಟಕ್ಕೆ ತಾನೇ ಹೇಳಿಕೊಂಡ ಅಕ್ಬರ್.

"ಪೋಲೀಸ್ ನಾಯಿಗಳಿರಬಹುದೇ?" ತನ್ನ ಮನದಾಲೋಚನೆ ತಿಳಿಸಿದ ಡೋಗ್ರಾ.

"ನೋ...... ಡೋಗ್ರಾ...... ನೋ! ಪೋಲೀಸರಾಗಿದ್ದಲ್ಲಿ ಇಷ್ಟು ಪಕಡ್ಬಂದಿಯಾಗಿ ಕಾರ್ಯ ನಿರ್ವಹಿಸರು. ಎನಿಹೌ...... ಅವರು ಯಾರಾದರಾಗಿರಲಿ...... ಆ ಮೂವರು ನನ್ನ ಮುಂದೆ ಕೈಕಟ್ಟಿ ನಿಲ್ಲಬೇಕು! ನಮ್ಮವರನ್ನೆಲ್ಲಾ ಜೊತೆಗೂಡಿಸಿಕೊಂಡು ಹೋಗಿ ಎಲ್ಲಾ ರಸ್ತೆ, ಸಂದಿಗೊಂದಿಗಳನ್ನೆಲ್ಲಾ ತಡಕಿರಿ. ಬೆಳಗಾಗುವಷ್ಟರಲ್ಲಿ ನನಗವರ ವಿವರಗಳು ಬೇಕು!" ಗಂಭೀರವಾಗಿ ಹೇಳಿದ ಅಕ್ಬರ್.

"ಡನ್ ಬಾಸ್!" ಅಂದ ಡೋಗ್ರಾ.

"ಇನ್ನೊಂದು ಮುಖ್ಯ ವಿಷಯ. ನಾಳೆ ಸಂಜೆಗೆ ಹಡಗು ಬರುತ್ತಿದೆ.. ನಮ್ಮ ಬಳಿಯಿರುವ ಸರಕು ಈಗ ಇಪ್ಪತ್ತೈದು ಹುಡುಗಿಯರು ಮಾತ್ರ...... ಸೌದಿಗೆ ಕನಿಷ್ಠ ಐವತ್ತು ಜನರನ್ನಾದರೂ ಕಳಿಸುತ್ತೇನೆಂದು ಪ್ರಾಮಿಸ್

ಮಾಡಿದ್ದೇನೆ. ಪಾರ್ಟೀಜ್ ಇರುವ ಗ್ಯಾಪ್ ತುಂಬಲು ಇನ್ನೂ ಇಪ್ಪತ್ತೈದು ಹುಡುಗಿಯರ ಅವಶ್ಯಕತೆಯಿದೆ. ಇದುವರೆಗೆ ಆ ಕೆಲಸ ಅಬ್ದುಲ್ ನಿರ್ವಹಿಸುತ್ತಿದ್ದ. ಇನ್ನು ಮೇಲೆ ನೀನು ಏನು ಮಾಡುವೆಯೋ ನೋಡುತ್ತೇನೆ..." ಅಂದ ಅಕ್ಬರ್.

"ನೀವು ಚಿಂತಿಸದಿರಿ ಬಾಸ್! ನಾಳೆ ಸಂಜೆಯ ವೇಳೆಗೆ ನಿಮ್ಮ ಪಾರ್ಟೀಜ್ ಫಿಲಪ್ ಮಾಡುವುದು ನನ್ನ ಹೊಣೆ!" ಪ್ರಾಮಿಸ್ ಮಾಡಿದ ಡೋಗ್ರಾ.

"ಗುಡ್! ಮುಂದಿನವಾರ ಇರಾಕ್ ಹಾಗೂ ಕುವೈತ್‌ನಿಂದ ಇಬ್ಬರು ಪಾರ್ಟಿಗಳು ಬರುತ್ತಿದ್ದಾರೆ. ಅಷ್ಟರೊಳಗೆ ಈಗ ನಮಗೆ ಎದುರಾಗಿರುವ ಈ ಪೀಡೆಗಳನ್ನು ಪರಿಹರಿಸಿಕೊಳ್ಳಬೇಕು....." ಡೋಗ್ರಾನ ಬೆನ್ನು ತಟ್ಟಿ ಹೇಳಿದ ಅಕ್ಬರ್.

"ಡೆಫನೆಟ್ಲಿ! ಆ ಮೂವರನ್ನು ನಿಮ್ಮ ಪಾದದ ಮೇಲೆರುಳಿಸುತ್ತೇನೆ.... ಬಹುಬೇಗ!" ಬಡಾಯಿಕೊಚ್ಚಿದ ಡೋಗ್ರಾ.

ಅರಳಿದ ಮುಖದೊಡನೆ ಅವನನ್ನು ಬೀಳ್ಕೊಂಡು ಟೇಬಲ್‌ಮೇಲಿದ್ದ ರಿಸೀವರ್ ಎತ್ತಿ ಯಾರಿಗೋ ಡಯಲ್ ಮಾಡತೊಡಗಿದ ಅಕ್ಬರ್.

# ೧೧

ಉಪಯೋಗಿಸಲಾಗದ ಬೆಂಚುಗಳು, ಮುರಿದ ಕುರ್ಚಿಗಳು...... ಸಂಪೂರ್ಣ ಶಿಥಿಲಾವಸ್ಥೆಯಲ್ಲಿತ್ತು ಆ ಚರ್ಚ್. ಧೂಳಿನ ತೆರೆ ದಟ್ಟವಾಗಿ ಆಕ್ರಮಿಸಿಕೊಂಡಿತ್ತು. ಮೂಲೆ ಮೂಲೆಯಲ್ಲೂ ಜೇಡರಬಲೆ ಆಕ್ರಮಿಸಿಕೊಂಡಿತ್ತು. ಖುಷಿಯಿಂದ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ತೊಡಗಿದ್ದವು.

ಒಂದುಕಡೆಯ ಗೋಡೆ ಅರ್ಧಕ್ಕೆ ಮುರಿದು ಬಿದ್ದಿತ್ತು. ಇನ್ನರ್ಧ ಬಿದ್ದರೆ ಉರುಳಿ ಬಿಡುವಂತಿತ್ತು! ಇಟ್ಟಿಗೆ ಚೂರು, ಮಣ್ಣು ಕುಪ್ಪೆಗಳೋಪಾದಿಯಲ್ಲಿ ಎಲ್ಲೆಡೆ ಹರಡಿದ್ದವು.

ಒಟ್ಟಿನಲ್ಲಿ ಭೂತ ಬಂಗ್ಲಾದ ಅಪರಾವತಾರ !

ಆ ಚರ್ಚ್‌ನೊಳಗೆ ಬೆಕ್ಕಿನ ನಡಿಗೆಯೊಡನೆ ಎಂಟರಾಗಿದ್ದರು ಮಹೇಶ, ಚಂದನ್, ಶ್ಯಾಂ. ಅವರ ಹದ್ದಿನ ಕಣ್ಣುಗಳಿಗೆ ಸುಮಾರಾಗಿ ಚೆನ್ನಾಗಿರುವ ಬೆಂಚೊಂದರ ಮೇಲೆ ಕಂಬಳಿ ಹೊದ್ದು ಮಲಗಿರುವ ಆಕಾರವೊಂದು ಕಾಣಿಸಿತು.

ಅಬ್ದುಲ್ ಅವನೇ ಎಂದು ಚಹರೆಯಿಂದ ಗುರುತಿಸಿದ ಮಹೇಶ. ಕೋಳಿಯಾದ ಬಟ್ಟೆ, ಒತ್ತಾಗಿ ಬೆಳೆದಿರುವ ಗಡ್ಡ, ಎಣ್ಣೆ ಕಾಣದ ಕೂದಲು...... ಬಹಳ ದಿನಗಳಿಂದ ಈ ಗೂಡೊಳಗೆ ಟೆಂಟ್ ಹಾಕಿದಂತಿದ್ದ ಅವನು.

"ಶ್ಯಾಂ..... ಎಷ್ಟು ಬೇಗ ಕೆಲಸ ಮುಗಿಸಿಕೊಂಡು ಹೋದರೆ ಅಷ್ಟು ಒಳ್ಳೆಯದು ?" ಪಿಸು ಧ್ವನಿಯಲ್ಲಿ ಎಚ್ಚರಿಸಿದ ಮಹೇಶ.

ಹತ್ತಿರವಾದರು ಮೂವರೂ, ರಪ್ಪನೆ ಅವನ ಸೊಂಟದ ಮೇಲೊಂದು ಬಿಟ್ಟ ಚಂದನ್. "ಏಳಣ್ಣಾ.....ಏಳು !" ಎಂದು ಸುಪ್ರಭಾತ ಹಲುಕಿದ.

ಗಾಬರಿಗೊಂಡು ಎದ್ದು ಕುಳಿತ ಅಬ್ದುಲ್. ಎದುರಿಗೆ ನಿಂತಿರುವ ಪರ್ಸನಾಲಿಟಿಗಳನ್ನು ಕಂಡೊಡನೆ ನಾಲಿಗೆ ಒಣಗಿ ಹೋಯಿತು ಗುಂಡಿಗೆ ಗುಭಿಲೊಂದಿತು.

"ಏನಣ್ಣಾ......ಆರೋಗ್ಯವೇ ಎಂತಹ ಭೋಗ ಜೀವನ ನಡೆಸುತ್ತಿರುವೆ ನಮ್ಮಪ್ಪಾ.....!" ಅನ್ನುತ್ತಾ ಭುಜದ ಮೇಲೆ ಕೈಹಾಕಿದ ಚಂದನ್.

"ಯಾ......ಯಾರು ನೀವು ? ಏನೀ ದೌರ್ಜನ್ಯ ?" ಅನ್ನುತ್ತಾ ಚಂದನ್ ಕೈ ಪಕ್ಕಕ್ಕೆ ತಳ್ಳಹೋದ ಅಬ್ದುಲ್.

ಆ ಕೈ ಅರ್ಧದಲ್ಲೇ ತಡೆದು ಬಲವಾಗಿ ಹಿಂದಕ್ಕೆ ಬಗ್ಗಿಸಿದ ಶ್ಯಾಂ. ಲೋಟಕ್ಕನ ಮುರಿಯಿತು ಮೂಳೆ. ಅದೇ ಕ್ಷಣ ಎಳೆದೊಂದು ಮೂತಿಗಿಕ್ಕಿದ ಚಂದನ್

ಉಸಿರಾಡಬಾರದೆ, ಕಿರುಚಲೂ ಆಗದೆ ನೀರಿನಿಂದ ಹೊರಬಿದ್ದ

ಮೀನಿನಂತೆ ವಿಲವಿಲ ಒದ್ದಾಡಿದ ಅಬ್ದುಲ್. ಕ್ಲಾಂಪ್‌ನಂತೆ ಅವನ ಬಾಯನ್ನು ಅದುಮಿ ಹಿಡಿದಿತ್ತು ಶ್ಯಾಂ ಎಡಗೈ.

ಲೈಟರ್ ಉರಿಸಿ ಸಿಗರೇಟ್ ಹಚ್ಚಿಕೊಂಡು ಜ್ವಾಲೆಯನ್ನು ಆರಿಸದೆ ಅವನ ಅಂಗಾಲುಗಳಿಗೆ ಸೋಕಿಸಿದ ಮಹೇಶ. ಸಾವಧಾನವಾಗಿ ಚರ್ಮ ಸುಟ್ಟ ವಾಸನೆ ಬರತೊಡಗಿತು. ಎರಡಡಿ ಮೇಲಕ್ಕೆದ್ದು ಕೆಳಕ್ಕಿಳಿಯಿತು ಅಬ್ದುಲ್‌ನ ಶರೀರ.

“ಅಗ್ಲಿ ಬಾಸ್ಟರ್ಡ್ ಅಬ್ದುಲ್. ನನ್ನ ಪ್ರಶ್ನೆಗಷ್ಟು ಉತ್ತರ ಕೊಟ್ಟು ಬಿಡು. ಈ ಹಿಂಸೆಯಿಂದ ಬಚಾವ್ ಆಗು!” ಮೆಲುಧ್ವನಿಯಲ್ಲಿ ಎಚ್ಚರಿಸಿ ಶ್ಯಾಂಗೆ ಸನ್ನೆ ಮಾಡಿದ ಮಹೇಶ.

ಎಡಗೈ ತುಸುವೇ ಪಕ್ಕಕ್ಕೆ ಸರಿಸಿದ ಶ್ಯಾಂ.

“ಯಾ......ಯಾರು ನೀವು?” ಯಾತನಾಭರಿತ ಧ್ವನಿಯಲ್ಲಿ ಕೇಳಿದ ಅಬ್ದುಲ್.

ಸರಿಯಾಗಿ ಅವನ ಮೂಗಿನ ಮೇಲೇ ಗುದ್ದಿದ ಆಗ ಚಂದನ್.

“ಈ ಏಟು ಇಲ್ಲಿ ಪ್ರಶ್ನೆ ಕೇಳುವವರು ನಾವು ಎಂದು ಸೂಚಿಸಲು! ಇನ್ನೊಮ್ಮೆ ಟ್ರ್ಯಾಕ್ ತಪ್ಪಿದರೆ ಕುತ್ತಿಗೆ ಹಿಸುಕಿಬಿಡುತ್ತೇನೆ. ಸರಿಯಾಗಿ ಹಿಂದೆ ಶ್ಯಾಲಿನಿ ಎನ್ನುವ ಹುಡುಗಿಯೊಬ್ಬಳನ್ನು ಅಪಹರಿಸಿರುವೆ. ಎಲ್ಲಿದ್ದಾಳೆ ಆ ಹುಡುಗಿ ಈಗ?” ಕೇಳಿದ ಮಹೇಶ ಲೈಟ್ ಬೆಳಗಿಸಿ ಅವನ ಕಣ್ಣ ಮುಂದಿಡಿದು.

“ನಿ......ನಿಮಗ್ಯಾರೋ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಈ ವಿಷಯ ವೇನೇನೋ ನನಗೆ ಗೊತ್ತಿಲ್ಲ......!”

ಮಾತು ಮುಗಿಸುವ ಮೊದಲೇ ಲೈಟರ್ ಬಗ್ಗಿಸಿದ ಮಹೇಶ. ಹುಬ್ಬು ಬೂದಿಯಾಗಿ ರೆಪ್ಪೆ ಅರ್ಧ ಸುಟ್ಟಂತಾಯಿತು. ಅಸಹನೀಯ ನೋವಿಗೆ ಚೀರಹೋದ ಅವನ ಬಾಯನ್ನು ಅದುಮಿ ಹಿಡಿದ ಶ್ಯಾಂ. ಗೊರಗೊರ ಶಬ್ದ ಹೊರಬಂತು ಗಂಟಲಿಂದ.

“ನಿನಗೆ ಪ್ರಾಣದ ಮೇಲೆ ಆಸೆಯಿದ್ದರೆ ಇರುವ ವಿಷಯ ತಿಳಿಸಿಬಿಡು. ಖಂಡಿತಾ ನಮಗೆ ನಿನ್ನ ಪ್ರಾಣ ತೆಗೆಯುವ ಬಯಕೆಯಿಲ್ಲ. ಮೊಂಡು ಹಿಡಿದರೆ ಮಾತ್ರ ಚಿತ್ರವಧೆ ಮಾಡಿಯಾದರೂ ಬಾಯಿ ಬಿಡಿಸುವುದರಲ್ಲಿ

ಎವು ಪ್ರಚಂಡರು !" ಅಂದ ಮಹೇಶ ಲೈಟರ್ ಇನ್ನೊಂದು ಕಣ್ಣಿನತ್ತ ರುಗಿಸಿ.

"ನಿಜವಾಗಿಯೂ ನನಗೇನೂ ಗೊತ್ತಿಲ್ಲ......" ಗದ್ಗದಧ್ವನಿಯಲ್ಲಿ ಹೇಳಿದ ಬ್ದುಲ್.

ಪ್ಯಾಂಟ್ ಬೆಲ್ಟ್ ಬಿಚ್ಚಿ ಬಕಲ್ ಬಳಿ ಒಂದು ಬಟನ್ ಪ್ರೆಸ್ ಮಾಡಿದ ಕಂದನ್. ಒಂದೂವರಂಗಲದಷ್ಟು ಉದ್ದನೆಯ ಚೂಪು ಚೂರಿಯೊಂದು ಹೊರಕ್ಕಿಣುಕಿತು. ಮುರಿದ ಕುರ್ಚಿಯ ಕಾಲೊಂದನ್ನು ಕೈಗೆತ್ತಿಕೊಂಡ ್ಯಾಂ. ಅದೇ ಕ್ಷಣ ಅರೆತೆರೆದ ಅಬ್ದುಲ್‌ನ ಒಂಟಿಗಣ್ಣಿನ ಮುಂದೆ ಫಳಕ್ಕನೆ ಮಿಂಚಿತ್ತು 'ರಾಜ'ನ ಚೂಪಲಗು !

ಮುಂದಾಗಬಹುದಾದ ಯಾತನೆಯ ಊಹೆ ಮಾತ್ರಕ್ಕೇ ಅಲ್ಲಾಡಿ ಹೋದ ಅಬ್ದುಲ್. ಬೆವರಿನಿಂದ ತೊಯ್ದುಹೋಯಿತು ಶರೀರ.

"ಕಮಾನ್......ಸ್ಪೀಕ್ ಔಟ್ ಸನ್ ಆಫ್ ಎ ಬಿಚ್ !" ಗುಡುಗಿದ ಮಹೇಶ.

ಅದುವರೆಗೆ ಅಷ್ಟೋ ಇಷ್ಟೋ ಧೈರ್ಯದೊಡನಿದ್ದ ಅಬ್ದುಲ್‌ನ ಎದೆ ಕಣ್ಣಗಾಯಿತು. ಹುಲಿಯನ್ನು ಕಂಡ ಹುಲ್ಲೆಯೋಪಾದಿಯಲ್ಲಿ ಗಡಗಡ ನಡುಗುತ್ತಾ, "ನನ್ನನ್ನು ಕೊಲ್ಲದಿರಿ ಪ್ಲೀಸ್......!" ಎಂದು ಕ್ಷೀಣಧ್ವನಿಯಲ್ಲಿ ಅರ್ಥೈಸಿಕೊಂಡ.

"ಹಾಗೆ ದಾರಿಗೆ ಬಾ ಬಾಸ್ಟರ್ಡ್ ! ಹೂಂ ಹೇಳು......ಎಲ್ಲಿ ಶಾಲಿನಿ ?" ಹೂಂಕರಿಸಿದ ಶ್ಯಾಂ.

"ಹೌದು......ಅವಳನ್ನು ಕಿಡ್‌ನ್ಯಾಪ್ ಮಾಡಿದವನು ನಾನೇ ! ಹೀಗೆ ಅಪಹರಿಸಿ ತಂದವರನ್ನೆಲ್ಲಾ ಅಕ್ಬರ್ ತನ್ನ ಸ್ಥಾವರದಲ್ಲಿ ಬಂಧಿಸಿಡುತ್ತಾನೆ. ಇಲ್ಲಿಂದ ಇರಾಕ್, ಇರಾನ್, ಸೌದಿ, ಕುವೈಟ್ ದೇಶಗಳಿಗೆ ಹಡಗಿನಮೂಲಕ ಅವರನ್ನು ರವಾನಿಸುತ್ತಾನೆ. ನಾಳೆ ರಾತ್ರಿ ಸೌದಿಅರೇಬಿಯಾಗೆ ನೌಕೆ ಯೊಂದು ಹೊರಡಲಿದೆ ಅಕ್ಬರ್ ಸ್ಥಾವರದಲ್ಲಿ ನೀವು ಹುಡುಕುತ್ತಿರುವ ಹುಡುಗಿಯೂ ಸೇರಿ ಇಪ್ಪತ್ನಾಲ್ಕು ಮಂದಿಯಿದ್ದಾರೆ. ಇನ್ನೂ ಎಪ್ಪತ್ತೈದು ಹುಡುಗಿಯರು ಆ ಗುಂಪನ್ನು ನಾಳೆ ಸಂಜೆಯೊಳಗೆ ಸೇರಿಕೊಳ್ಳುತ್ತಾರೆ !" ಪಟಪಟನೆ ನುಡಿದ ಅಬ್ದುಲ್.

"ಅಕ್ಬರ್ ಒಬ್ಬನೇ ಇಷ್ಟೆಲ್ಲಾ ವ್ಯವಹಾರ ನೋಡಿಕೊಳ್ಳುತ್ತಾನೆಯೆ ?"

"ಅವನ ಅಸಿಸ್ಟೆಂಟ್ ಡೋನ್ರಾನದೇ ಎಲ್ಲ ಕೆಲಸಗಳು ಉಸ್ತುವಾರಿ. ಅವನು ಪ್ರತಿರಾತ್ರಿ ಥಾಮಸ್ ಏರಿಯಾದಲ್ಲಿರುವ ಡಾಲ್ಫಿನ್ ಹೋಟೆಲ್‌ಗೆ ಭೇಟಿ ಕೊಟ್ಟು ಅಲ್ಲಿ ಒಟ್ಟುಗೂಡಿರುವ ಹುಡುಗಿಯರನ್ನು ವ್ಯಾನ್‌ನಲ್ಲಿ ತುಂಬಿಕೊಂಡು ಸ್ಥಾವರ ಸೇರಿಸುತ್ತಾನೆ" ಹೇಳಿದ ಅಬ್ದುಲ್.

"ಗುಡ್ ! ನೀನು ಹೇಳಿದ್ದೆಲ್ಲಾ ನಿಜ ಎಂದು ಭಾವಿಸಿದ್ದೇನೆ. ಹುಡುಗಿಯರೆಲ್ಲಾ ಈಗ ಸ್ಥಾವರದಲ್ಲೇ ಇದ್ದಾರೆಯೋ ?" ಕೇಳಿದ ಮಹೇಶ.

ಹೌದೆನ್ನುವಂತೆ ತಲೆಯಾಡಿಸಿದ ಮಹೇಶ.

"ಆಲ್‌ರೈಟ್ ! ಈಗ ಕಟ್ಟಕಡೆಯ ಪ್ರಶ್ನೆ......ಅಕ್ಬರ್‌ನ ಸ್ಥಾವರ ಎಲ್ಲಿದೆ ?

ಉಗುಳು ನುಂಗಿದ ಅಬ್ದುಲ್. ಕಣ್ಣುಗಳನ್ನು ಅತ್ತಿತ್ತ ಹೊರಳಿಸಿದ. ಶ್ಯಾಂ ಹಿಡಿತದಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿದ.

ಮರುಕ್ಷಣ ಕಟಕ್ಕನೆ ಅವನ ಹೆಬ್ಬೆರಳು ತುಂಡಾಗಿ ಕೆಳಕ್ಕೆ ಬಿದ್ದಿತ್ತು ! ಫೌಂಟನ್‌ನಂತೆ ಚಿಮ್ಮಿತ್ತು ರಕ್ತ !

"ಎಲ್ಲಿದೆ ಯರ್ಾ ಸ್ಥಾವರ ?" ಸಾಫ್ಟ್‌ವಾಯ್ಸ್‌ನಲ್ಲಿ ಕೇಳಿದ ಮಹೇಶ.

ಸರಿಯಾಗಿ ಅದೇ ಸಮಯಕ್ಕೆ ಧಿಗ್ಗನೆ ಕೆಂಪು ದೀಪದನ್ನು ಅವನ ಸಿಕ್ಸ್ತ್‌ಸೆನ್ಸ್ ! 'ಡೇಂಜರ್......ಡೇಂಜರ್' ಎಂದು ಅಪಾಯದ ಅಲಾರಂ ಮೊಳಗಿಸಿತ್ತು.

ಅದೇ ಕ್ಷಣ 'ಸುಂಯ್' ಎಂಬ ಶಬ್ದವನ್ನು ಕ್ಯಾಚ್ ಮಾಡಿತ್ತು ಅವನ ಹಾವಿನ ಕಿವಿ.

"ಚಂದನ್......ಶ್ಯಾಂ......ಮೂವ್ ಫ್ರಂದಟ್‌ಸ್ಪಾಟ್ !" ಎಂದು ಎಚ್ಚರಿಸುತ್ತಾ ಹಿಂದಕ್ಕೆ ಪಲ್ಟಿಯೊಡೆದ ಮಹೇಶ.

ತಲಾ ಒಂದೊಂದು ಬೆಂಚಿನ ಹಿಂಬದಿಗೆ ಡೈವ್ ಮಾಡಿಬಿಟ್ಟರು ಚಂದನ್, ಶ್ಯಾಂ.

ಸ್ಥಾವರದ ವಿಳಾಸ ತಿಳಿಸಲು ತುಟಿ ತೆರೆದಿದ್ದನಷ್ಟೇ ಅಬ್ದುಲ್. ಶಬ್ದ ಹೊರಬರುವ ಮೊದಲೇ ದುಂಬಿಯ ಝೇಂಕಾರವನ್ನು ಹೊರಡಿಸುತ್ತಾ ಬಂದ

ಚೂರಿಯೊಂದು ಗಬಕ್ಕನೆ ಅವನ ಗಂಟಲಲ್ಲಿ ಲಾಡ್ಜ್ ಆಗಿತ್ತು ! ಕೈ ಕಾಲು ನಾಲ್ಕೈದು ಸಲ ಒದರಿ ಸ್ತಬ್ಧನಾದ ಅಬ್ದುಲ್ !

ಬಾಗಿಲ ಮುಂದಿದ್ದ ದೃಢಕಾಯ ಪಕ್ಕಕ್ಕೆ ಸರಿದೊಡನೆ ಧಡಧಡ ಒಳಕ್ಕೆ ನುಗ್ಗಿದರು ದೃಢಕಾಯರ ಗುಂಪು. ಒಟ್ಟು ಹತ್ತು ಜನ ಎಂದು ಕೌಂಟ್ ಮಾಡಿದ ಮಹೇಶ !

ಸಾರಿ......ಒಂಭತ್ತು ಅಂದುಕೊಂಡ ಮರುಕ್ಷಣ !

ಹಿಂದಕ್ಕೆ ಪಲ್ಟಿಯೊಡೆಯುತ್ತಿದ್ದಂತೆ ಅವನ ಕೈ ಬಿಟ್ಟಿತ್ತು 'ರಾಜ' ಈಗಮ ಲೀಡರ್‌ನಂತೆಕಾಣುತ್ತಿದ್ದ ಅಬ್ದುಲ್‌ನ ಎಕ್ಸಿಕ್ಯೂಟರ್ ದೃಢಕಾಯನ ಎದೆಯ ಗೂಡಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿತ್ತು ! ಪಕ್ಕಕ್ಕೆ ತನ್ನವರಿಗೆ ಒಳಕ್ಕೆ ಬರಲು ಜಾಗ ಮಾಡಿಕೊಟ್ಟಿದ್ದ ಅವನ ಕಣ್ಣುಗಳಲ್ಲಿ ಅಪನಂಬಿಕೆಯ ಭಾವ ಕಾಲುಗಳನ್ನು ಕುಸಿದು ದೇಹ ನೆರಕ್ಕುರುಳಿದವೇಲೂ !

ಈ ಅನಿರೀಕ್ಷಿತ ಆಘಾತದಿಂದ ಸ್ತಬ್ಧನಾದ ದೃಢಕಾಯರು ಚೀತರಿಸಿ ಕೊಳ್ಳುವಷ್ಟರಲ್ಲಿ ಬಿರುಗಾಳಿಯಂತೆ ಅವರ ನಡುವೆ ನುಗ್ಗಿದರು ಮಹೇಶ, ಚಂದನ್, ಶ್ಯಾಂ.

ಬೆಲ್ಟ್ ಗಿರ್ರನೆ ತಿರುಗಿಸುತ್ತಾ ಅಡ್ಡ ಸಿಕ್ಕಿದ ದೃಢಕಾಯರ ಚರ್ಮ ಸುಲಿಯುವುದರಲ್ಲಿ ಮಗ್ನನಾದ ಚಂದನ್. ಶ್ಯಾಂ ಕುರ್ಚಿಯ ಕಾಲಿಂದ ಸಿಕ್ಕವರ ತಲೆಯೊಡೆಯತೊಡಗಿದ. ಬರಿಗೈನಲ್ಲಿ ಶತ್ರುಗಳನ್ನು ಎದುರ್ಗೊಂಡವನೆಂದರೆ ಮಹೇಶನೇ ?

ಏರೋಪ್ಲೇನಿನಂತೆ ಮೇಲೆದ್ದ ಅವನೆರಡು ಕಾಲುಗಳು ಇಬ್ಬರೂ ದೃಢಕಾಯರೆದೆಗಳನ್ನು ಬಲವಾಗಿ ತಾಕಿದ್ದವು. ಫ್ಲೈಯಿಂಗ್ ಕಿಕ್ ಅಪ್ಲೈ ಮಾಡಿದೊಡನೆ ಗಾಳಿಯಲ್ಲೇ ದೇಹವನ್ನು ಒಂದು ರೌಂಡ್ ಹೊರಳಿಸಿ ದೃಢಕಾಯನೊಬ್ಬನ ಕುತ್ತಿಗೆಗೆ ಸಿಜರ್ಸ್ ಹಾಕಿದ್ದ ಮಹೇಶ ನೆಲದ ಮೇಲೆ ಕೈಗಳನ್ನು ಸ್ಟ್ರೆಚ್ ಮಾಡಿ ಲ್ಯಾಂಡಾಗಿದ್ದ. ಗಿರ್ರನೆ ಹಾಗೆ ಹೊಡೆದಿತ್ತು ಮೈ ಅರೆಕ್ಷಣದ ನಂತರ. ಆಟೋಮ್ಯಾಟಿಕ್ ಆಗಿ ಕಾಲುಗಳು ಓಪನ್ ಆಗಿದ್ದವು. ಚಕ್ರದಂತೆ ತಿರುಗಿ ತಲೆ ಕೆಳಗಾಗಿ ನೆಲಕ್ಕೆ ಬಿದ್ದ ದೃಢಕಾಯನ ತಲೆ ಫಟ್ಟನೆ ಓಪನ್ ಆಗಿ ಬುದಬುದ ರಕ್ತ ಹೊರನುಗ್ಗಿತ್ತು.

ಮೇಲೆದ್ದೊಡನೆ ನಿಂತಲ್ಲಿ ನಿಲ್ಲದೆ ಮಿಂಚಿನ ವೇಗದಲ್ಲಿ ಮೂವ್ ಆಗ

ತೊಡಗಿದ ಅವನ ಬಲಗಾಲು ಸುಯ್ಯನೆದ್ದು ಒಬ್ಬ ದೃಢಕಾಯನ ತಲೆಗೆ ಕನೆಕ್ಟ್ ಆಯಿತು. ಸವಾಟೆಯಡೆಡ್ಲಿ ಎಲಿಫೆಂಟ್ ಕಿಕ್ ಅದು ! ಈಡುಗಾಯಿ ಹೊಡೆದಂತೆ ಛಿದ್ರವಾಗಿ ತಲೆಯಿಂದ ಮಿದುಳು ಪುಳಕ್ಕನೆ ಹೊರಚಿಮ್ಮಿತು. ರಕ್ತದೊಡಗೂಡಿ ಕ್ಷಣ ಹಾಗೆಯೇ ನಿಂತಿದ್ದ ದೃಢಕಾಯನ ದೇಹ ನಿದಾನವಾಗಿ ಕೆಳಕ್ಕುರುಳಿತು.

ಹೊಡೆತಗಳನ್ನು ತಿಂದವರ ನರಳಿಕೆ, ಚೀರಾಟಗಳು ಮುಗಿಲು ತಲುಪುತ್ತಿದ್ದಂತೆಯೇ ಇನ್ನೊಂದು ಶಬ್ದವನ್ನು ಕ್ಯಾಚ್ ಮಾಡಿದ್ದವು ಮಹೇಶನ ಚುರುಕು ಕಿವಿಗಳು.

ಪೊಲೀಸ್ ಸೈರನ್ ಶಬ್ದ !

ಇಲ್ಲಿಂದ ಜಾಗ ಖಾಲಿ ಮಾಡುವ ಸಮಯ ಸನ್ನಿಹಿತವಾಯಿತು.

ಅವನು ಹಾಗೆಂದುಕೊಳ್ಳುತ್ತಿರುವಾಗಲೇ ಎರಡು ಪೊಲೀಸ್ ವ್ಯಾನ್‌ಗಳು ಬಂದು ಚರ್ಚ್ ಮುಂದೆ ನಿಂತವು. ಧಡಧಡ ಕೆಳಕ್ಕೆ ಧುಮುಕಿ ಚರ್ಚ್ ಕಡೆಗೆ ಓಡಿಬಂದರು ಪೊಲೀಸರು.

"ಗುರು__ಖಾಕಿವಾಲಾಗಳು ಪ್ರತ್ಯಕ್ಷರಾದರು !" ಸೈರಸ್‌ನಂತೆ ಟಾಪ್ ಪಿಚ್‌ನಲ್ಲಿ ಅರಚುತ್ತಾ ಮುಂದಕ್ಕೋಟಕಿತ್ತು ಕಿಟಕಿಯೊಂದರ ಮೂಲಕ ಹೊರಕ್ಕೆ ಡೈವ್ ಮಾಡಿಬಿಟ್ಟ ಮಹೇಶ.

"ಚಂದನ್ ಭಾಯ್__!" ಎಂದು ಕೂಗಿ ತಾನೂ ಶ್ಯಾಂ ಹಿಂದೆಯೇ ಡೈವ್ ಮಾಡಿದ ಮಹೇಶ ಸಹ.

"ಅಯ್ಯಯ್ಯೋ......ಲೇಟಾಟ್ ಆಂಜನೇಯ ! ಏನನ್ಯಾಯ ಇದು ? ಹುಡುಗನೊಬ್ಬನನ್ನೇ ಬಿಟ್ಟು ಇವರು ಪರಾರಿಯಾದರಲ್ಲ......" ಎಂದರಚುತ್ತಾ ಇನ್ನೊಂದು ಕಿಟಕಿಯ ಕಡೆಗೆ ಓಡಿದ ಚಂದನ್.

"ಏಯ್......ನಿಲ್ಲು......ನಿಲ್ಲು......" ಹಿಂದಿನಿಂದ ಪೊಲೀಸನೊಬ್ಬ ಕೂಗಿದ.

"ಅಯ್ಯೊ ಹೋಗಯ್ಯ......ನೀವ್ಯಾವ ಜುಜುಬಿ ಎಂದು ಕರೆದ ತಕ್ಷಣ ನಿಲ್ಲಬೇಕು !" ಓಡುತ್ತಲೇ ಕಾಮೆಂಟ್ ಮಾಡಿ ತಾನೊಂದು ಕಿಟಕಿಯನ್ನಾಯ್ದುಕೊಂಡ ಚಂದನ್.

ಮೂವರೂ ರಸ್ತೆಯಲ್ಲಿ ಕೂಡಿ ಮಿಂಚಿನ ವೇಗದೊಡನೆ ಗಲ್ಲಿಪಲ್ಲಿಗಳಲ್ಲಿ ನುಗ್ಗಿ ನಿಮಿಷಗಳಲ್ಲಿ ಅದೃಶ್ಯರಾಗಿಬಿಟ್ಟರು.

ಮೂರು ಶವ ಮತ್ತು ಏಳಲೂ ಪ್ರಾಣವಿಲ್ಲದ ರಕ್ತಸಿಕ್ತ ಮೈಗಳ ಎಂಟು ಜನ ವೃದ್ಧೆಯರು ಮಾತ್ರ ಉಳಿದರು ಚರ್ಚ್‌ನೊಳಗೆ.

ಅವರೆಲ್ಲಾ ಓಡಿಹೋದರೆಂದು ಗ್ಯಾರಂಟಿಯಾದರೂ ಯಾವುದಕ್ಕೂ ಇರಲಿ ಎಂದು ಸುತ್ತುವರೆದರು ಪೋಲೀಸರು !

# ೧೨

ರಾತ್ರಿ ಹತ್ತುವರೆಯನ್ನು ಸಮೀಪಿಸುತ್ತಿತ್ತು ವೇಳೆ.

ಬೋರ್‌ವಿಲೆ ಏರಿಯಾದಲ್ಲಿ ಟ್ಯಾಕ್ಸಿಯಿಳಿದು ಇರಾನಿ ಹೋಟೆಲೊಳಕ್ಕೆ ಪ್ರವೇಶಿಸಿದರು ಮಹೇಶ, ಚಂದನ್, ಶ್ಯಾಂ.

ಆ ಏರಿಯಾದ ರೌಡಿಗಳು, ದಾದಾಗಳು, ಕಟ್‌ಥ್ರೋಟ್‌ಗಳೊಡನೆ ತುಂಬಿ ತುಳುಕುತ್ತಿತ್ತು ಹೋಟೆಲ್. ಅಂತಹ ಜಾಗದಲ್ಲಿ ಅಂಡರ್‌ವರ್ಲ್ಡ್‌ನ ನಾನಾ ರಹಸ್ಯಗಳು ತೆರೆದ ಕಿವಿಗಳೊಳಗೆ ಬೀಳುವ ಸಾಧ್ಯತೆಯಿದೆಯೆಂಬ ನಂಬಿಕೆ ಮಹೇಶನಿಗೆ.

ಅಕ್ಬರ್ ಸ್ಥಾವರದ ವಿವರ ತಿಳಿಸುವ ವೇಳೆಗೆ ಸರಿಯಾಗಿ ಮರ್ಡರ್ ಆಗಿದ್ದ ಅಬ್ದುಲ್. ಎತ್ತೆತ್ತಲೋ ಎಳೆದೊಯ್ದು ಮತ್ತೆ ಫಸ್ಟ್ ಟಾರ್ಗೇ ಬಂದಿತ್ತು ಅಸೈನ್‌ಮೆಂಟ್. ಈಗುಳಿರುವವನೊಬ್ಬನೇ— ಜೋಗ್ರಾ ! ಅವನನ್ನಿಡಿದರೆ ಮಾತ್ರ ಅಬ್ದುಲ್‌ನ ವೇರ್ ಎಬೌಟ್ಸ್ ಟ್ರೇಸ್ ಮಾಡಲು ಸಾಧ್ಯ. ಇನ್ನು ಹದಿನೆಂಟು ಗಂಟೆಗಳಲ್ಲಿ ಅಕ್ಬರ್‌ನ ಹಡಗು ಬೊಂಬಾಯಿಂದ ಹುಡುಗಿಯರನ್ನು ಸಾಗಿಸುತ್ತದೆ. ಅದು ಬಂದರು ಬಿಡುವ ಮೊದಲೇ ಅಕ್ಬರ್‌ಗೊಂದು ಗತಿ ಕಾಣಿಸದಿದ್ದರೆ ಶಾಲಿನಿಯನ್ನೊಳಗೊಂಡ ಹತಭಾಗ್ಯ ಹುಡುಗಿಯರ ಗುಂಪಿಗೆ ಪರ್ಮನೆಂಟ್‌ಟಾಗಿ ವಿದಾಯ ಹೇಳಿದಂತೆಯೇ !

ಪುಂಖಾನುಪುಂಖವಾಗಿ ಮೇಲೆರುತ್ತಿದ್ದ ಯೋಚನೆಗಳ ದಾಳಿಗೆ ತಲೆ

ಯೊಂದರ ಖಾಲಿ ಟೀ ಕಪ್ ಟೇಬಲ್ ಮೇಲಿಟ್ಟು ಮಹೇಶ ಸಿಗರೇಟೊಂದನು ಹಚ್ಚಿಕೊಂಡ. ಚಂದನ್. ಶ್ಯಾಂ ಯಾವುದೋ ವಿಷಯದ ತೀವ್ರ ಚರ್ಚೆಯಲ್ಲಿ ತೊಡಗಿದ್ದರು.

ಸರಿಯಾಗಿ ಆಗಲೇ ಇರಾನಿ ಹೋಟೆಲ್ ಅಲ್ಲಾಡಿ ಹೋಗುವಂತೆ ಕೇಳಿ ಬಂತೊಂದು ಕೂಗು.

"ಪೋಲೀಸರು ರೈಡ್ ಮಾಡಲು ಬರುತ್ತಿದ್ದಾರೆ..... ಓಡಿಹೋಗಿ.... ತಪ್ಪಿಸಿಕೊಳ್ಳಿ.....!"

ಅವನ ಕೂಗು ಕೊನೆಗೊಳ್ಳುವ ವೇಳೆಗೆ ಹೋಟೆಲ್ ಮುಂದೆ ಬಂದು ನಿಂತವು ನಾಲ್ಕು ಜೀಪ್‌ಗಳು. ಲಾಠಿಗಳನ್ನಿಡಿದ ಪೋಲೀಸರು ಕೆಳಕ್ಕೆ ಧುಮುಕಿ ಒಳಕ್ಕೋಡಿ ಬರತೊಡಗಿದರು.

ಬಿಲದೊಳಗಿನ ಇಲಿಗಳಂತೆ ಹೊರಕ್ಕೆ ನುಗ್ಗ ತೊಡಗಿದರು. ಕಸ್ಟಮರ್‌ಗಳು. ಮನ ಬಂದಂತೆ ಲಾಠಿಗಳನ್ನು ಬೀಸತೊಡಗಿದರು ಪೋಲೀಸರು.

"ವಾಟೀಸ್ ಅವರ್ ನೆಕ್ಸ್ಟ್ ಮೂವ್ ಗುರು ? ಅಟಲಿಷ್ಟ್ ಇನ್‌ಫಾರ್ಮ್ ಮಾಡಿ ಬರುವ ಸೌಜನ್ಯವೂ ಇಲ್ಲ ಇಲ್ಲಿನ ಪೋಲೀಸರಿಗೆ......" ಎಂದು ಕಾಮೆಂಟ್ ಮಾಡುತ್ತಿದ್ದ ಚಂದನ್‌ನ ಡೈಲಾಗ್ ಕೊನೆಗೊಳ್ಳುವ ವೇಳೆಗೆ ಎದುರಿಗೆ ಹಾಜರಾದರು ನಾಲ್ವರು ಪೋಲೀಸರು.

ಶ್ಯಾಂ ಕಮೀಷನರ್ ರೋಲ್‌ನಲ್ಲಿ ಮಹೇಶ, ಚಂದನ್‌ರನ್ನು ಬಿಡಿಸಿಕೊಂಡು ಬಂದಿದ್ದ ಸ್ಟೇಷನ್ ಜನ !

"ಏನೋ ಕಳ್ಳರಾಸ್ಕಲ್‌ಗಳಾ..... ನಮ್ಮ ಕಣ್ಣಿಗೆ ಕಾಣಿಸಿಕೊಳ್ಳದೆ ಎಷ್ಟು ದಿನ ತಿರುಗಾಡಲು ಸಾಧ್ಯ ? ಬನ್ನಿ.....ಬನ್ನಿ ಸ್ಟೇಷನ್‌ಗೆ ! ಕಮೀಷನರ್ ವೇಷ ಹಾಕಿ ಟೋಪಿ ಹಾಕಿದ ನಿಮ್ಮ ತಲೆಗಳನ್ನು ಚೆಂಡಾಡಿ ಬಿಡುತ್ತೇವೆ.....!" ಅನ್ನುತ್ತಾ ಚಂದನನ ಜುಟ್ಟಿಡಿದು ಮೇಲೆತ್ತಿದ ಒಬ್ಬ.

"ನಮ್ಮ ಹಣೆಬರಹದಲ್ಲಿ ಆಸ್ಪತ್ರೆ ಸೇರಬೇಕೆಂದಿರುವಾಗ ಯಾರೇನು ಮಾಡಲು ಸಾಧ್ಯ ?" ಅನ್ನುತ್ತಾ ರಾಕೆಟ್ ವೇಗದೊಡನೆ ಆ ಕಾನ್ಸ್‌ಟೇಬಲ್ ಹೊಟ್ಟೆಗೆ ಸಾಲಿಡ್ ಪಂಚ್ ಮಾಡಿದ ಚಂದನ್.

"ಬಾಪ್‌ರೇ......!" ಎಂದರಚಿ ಹೊಟ್ಟೆ ಹಿಡಿದು ಕುಸಿದು ಕುಳಿತ ಆ ಪಿ.ಸಿ.

ಓಡಲಾಗದೆ ಅಲ್ಲಲ್ಲಿ ನಿಂತು ಸಮಯ ಕಾಯುತ್ತಿದ್ದ ಕೆಲವರು ಕಸ್ಟಮರ್ಸ್ ಈಗಂತೂ ಭಯಭ್ರಾಂತರಾದರು. ಪೋಲೀಸರ ಮೇಲೆ ಕೈ ಎತ್ತಿದರೆ ಅಲ್ಲಿರುವ ತಮ್ಮನ್ನು ಉಳಿಸಿಯಾರೇ ಪೋಲೀಸರು !

ಲಾಠಿಯೆತ್ತಿದ ಮೂವರನ್ನು ಒರಟಾಗಿ ಹಿಂದಕ್ಕೆ ತಳ್ಳಿ "ಚಂದನ್.... ಶ್ಯಾಂ .ಫಾಲೋಮಿ.....!" ಎಂದು ಕೂಗಿ ಎಕ್ಸ್‌ಪ್ರೆಸ್ ಟ್ರೈನ್‌ನಂತೆ ಹೊರಕ್ಕೆ ನುಗ್ಗಿದ ಮಹೇಶ.

ಸುಮ್ಮನಿರಲಾಗದೆ ಕೆಳಗೆ ಬಿದ್ದಿದ್ದ ಲಾಠಿಯೆತ್ತಿ ಮೂವರಿಗೂ ಎರಡೆರಡು ಬಾರಿಸಿದ ಮೇಲೆ ಲಾಠಿಗಳನ್ನಲ್ಲೇ ಎಸೆದು ಮಹೇಶನ ಹಿಂದೆ ಬಿದ್ದರು ಶ್ಯಾಂ, ಚಂದನ್ !

"ಅವರನ್ನಿಡಿಯಿರಿ ತಪ್ಪಿಸಿಕೊಳ್ಳಲು ಬಿಡಬೇಡಿ " ಕೆಳಗೆ ಬಿದ್ದ ಪಿ.ಸಿ.ಯೊಬ್ಬ ಜೋರಾಗಿ ಕೂಗಿಕೊಂಡ.

ದೂರದಲ್ಲಿ ನಿಂತು ಈ ದೃಶ್ಯವನ್ನು ಗಮನಿಸುತ್ತಿದ್ದ ಕಸ್ಟಮರ್ಸ್‌ಗೆ ಒಂದು ಸಂಗತಿ ಮಾತ್ರ ಸ್ಪಷ್ಟವಾಗಿ ಅರ್ಥವಾಗಿತ್ತು. ಸಿನಿಮಾಗಳಲ್ಲಿ ಪೋಲೀಸರನ್ನೇಕೆ ಬಫೂನ್‌ಗಳಂತೆ ತೋರಿಸುತ್ತಾರೆಂಬುದಕ್ಕೆ ಇದೊಂದು ನಿದರ್ಶನ ಸಾಲದೆ ?

ಅಲ್ಲಿಂದ ಶುರುವಾಯಿತು ಮೂರನೇ ಮಹಾಯುದ್ಧ. ದೊಡ್ಡ ದೊಂಬಿಯ ವಾತಾವರಣವೇ ಸೃಷ್ಟಿಗೊಂಡಿತು. ಶಕ್ತಿಯಿರುವವನೇ ಚಕ್ರವರ್ತಿ ಎಂಬ ಜಂಗಲ್ ರೂಲ್ ಅಪ್ಲೈ ಆಯಿತು ಅಲ್ಲಿ. ಎಲ್ಲರಿಗೂ ಅಲ್ಲಿಂದ ಮೊದಲು ಜಾಗ ಖಾಲಿ ಮಾಡುವ ಅವಾಂತರ ಆದ್ದರಿಂದ ದಾರಿ ಗಡ್ಡ ಸಿಕ್ಕ ಯಾರೇ ಆಗಲಿ ಅವರುಪಯೋಗಿಸುತ್ತಿದ್ದದ್ದು ಒಂದೇ ಮಂತ್ರ. ದೋಚು ! ಯಾರು, ಯಾರನ್ನು, ಎಕೆ, ಯಾವ ರೀತಿ ಹೊಡೆಯುತ್ತಿದ್ದಾರೆಂದು ಅರ್ಥವಾಗದ ಪರಿಸ್ಥಿತಿ. ಕ್ಷಿಪಣಿಗಳಂತೆ ರಸ್ತೆಗೆ ಹಾರಿ ಬರತೊಡಗಿದವು ಕುರ್ಚಿ, ಟೇಬಲ್, ಗ್ಲ್ಯಾಸ್ ಮತ್ತು ಪಿಂಗಾಣಿ ಪ್ಲೇಟ್‌ಗಳು.

ಆವೇಳೆಗೆ ಎರಡು ರಸ್ತೆ ಕ್ರಮಿಸಿ ಮೂರನೇ ರಸ್ತೆಯಲ್ಲಿ ರನ್ನಿಂಗ್ ರೇಸ್ ಶುರು ಮಾಡಿದ್ದರು ಗುರು, ಶಿಷ್ಯರು. ಆ ರಸ್ತೆಯ ಕೊನೆ ಸೇರುತ್ತಿದ್ದ ಹಾಗೆಯೇ ಇದ್ದಕ್ಕಿದ್ದಂತೆಯೇ ಅವರ ದಾರಿಗಡ್ಡ ಬಂತೊಂದು ಷೆವರ್ಲೆಟ್ ಕಾರು.

ಅಯೋಚಿತವಾಗಿ ಸೆಟೆಯಿತು ಮಹೇಶನ ಶರೀರ ಎಲ್ಲರೂ ಚೇತರಿಸಿಕೊಳ್ಳುವಷ್ಟರಲ್ಲಿ ಒಮ್ಮೆಲೇ ಅವರ ಮೇಲೇರಿ ಬರತೊಡಗಿತು ಕಾರು.

"ಫ್ರೆಂಡ್ಸ್ ... ಜಂಪ್ ಔಟ್ !" ಎಂದು ವಾರ್ನಿಂಗ್‌ಕೊಟ್ಟು ಪಕ್ಕಕ್ಕೆ ಲಂಘಿಸಿದ ಮಹೇಶ

ಶರವೇಗವೊಡನೆ ಎಡಕ್ಕೆ ತಿರುಗಿ ಕೆಸರು ತುಂಬಿದ ಮೋರಿಯೊಳಕ್ಕೆ ಕುಪ್ಪಳಿಸಿ ಬಿಟ್ಟ ಶ್ಯಾಂ. ಹಿಂದೆ ಮುಂದೆ ನೋಡದೆ ಅವನ ಎಡಗೈ ಪಕ್ಕದಲ್ಲಿದ್ದ ಚಂದನ್‌ನ ಸೊಂಟಕ್ಕೆ ಬಿಗಿದುಕೊಂಡಿತ್ತು.

ಕೂದಲೆಳೆಯ ಅಂತರದಲ್ಲಿ ಡೈರೆಕ್ಟ್ ಕೊಲಿಷನ್ ಮಿಸ್ ಆಗಿ ಮುಂದಕ್ಕೆ ಪಾಸಾಗಿತ್ತು ಕಾರು ವೇಗದಲ್ಲೇನೂ ಮಾರ್ಪಾಟು ಮಾಡಿಕೊಳ್ಳದೆ.

ಸರಕ್ಕನೆ ಬಿದ್ದ ಜಾಗಗಳಿಂದ ಮೇಲೆದ್ದು ಮೂವರೂ ಆ ರಸ್ತೆ ಕ್ರಮಿಸಿ ಸರ್ಕಲ್ಲೊಂದನ್ನು ಸಮೀಪಿಸಿದರು ಮರುಕ್ಷಣ ಅವರ ಮೈ ಜಲದರಿಸಿತು. ಗಂಟಲ ಪಸೆ ಆರಿಹೋಗಿ ಮೈಮೇಲೆ ಹಾವು ಚೇಳು ಹರಿದಾಡುತ್ತಿರುವ ಅನುಭೂತಿಯುಂಟಾಯಿತು.

ನಾಲ್ಕು ರಸ್ತೆಗಳನ್ನು ಕೂಡಿಸುವ ಸೆಂಟರ್ ಅದು ಅವರಿಗೋಸ್ಕರವೇ ಕಾಯುತ್ತಿರುವಂತೆ ನಾಲ್ಕು ಲಾರಿಗಳು ಹೆಡ್‌ಲೈಟ್ಸ್ ಬೆಳಗಿಸಿ ಅವರ ಕಡೆಗೆ ನುಗ್ಗಿ ಬರತೊಡಗಿದವು ?

"ಬಾಪ್‌ರೇ ಗುರು ಅಕ್ಬರ್ ಅನುಚರರು ನಮ್ಮನ್ನು ಕೊನೆಗಾಣಿಸಲೇಬೇಕೆಂಬ ಹಠ ಹಿಡಿದಂತಿದ್ದಾರೆ !" ಆಂದೋಳನೆಯೊಡನಿಂದ ಶ್ಯಾಂ.

ನಾಲ್ಕು ಕಡೆಯಿಂದಲೂ ವೇಗವಾಗಿ ಚಲಿಸಿ ಬರುತ್ತಿವೆ ಲಾರಿಗಳು.

"ಗುರು ನಾವು ಬೇಗ ಏನಾದರೂ ಮಾಡದಿದ್ದರೆ ಭಟ್ಟರ ಹೋಟೆಲ್ ಚಟ್ನಿಯಾಗುವುದು ಗ್ಯಾರಂಟಿ !" ಜೋರಾಗಿ ಕೂಗಿ ಕೊಂಡ ಚಂದನ್.

"ಮೂವ್‌ಫಾಸ್ಟ್ ಎವ್ರೆರಿ ಬಡಿ " ಅನ್ನುತ್ತಾ ಸ್ಪುಟ್ನಿಕ್ ವೇಗದೊಡನೆ ಎರಡು ರಸ್ತೆಗಳ ನಡುವೆ ಹಾದು ಹೋಗಿದ್ದ ಗಲ್ಲಿಯೊಂದರೊಳಕ್ಕೆ ತೂರಿದ ಮಹೇಶ.

ಅವನನ್ನು ಫಾಲೋ ಮಾಡಿದರು ಚಂದನ್ ಶ್ಯಾಂ.

ಕೋಪದಿಂದ ಅರ್ಭಟಿಸಿದರು ಲಾರಿಗಳಲ್ಲಿದ್ದ ದೃಢಕಾಯರು.

ಎಲ್ಲರಿಗಿಂತಾ ಮುಂದೆ ಓಡುತ್ತಿದ್ದ ಮಹೇಶನ ಕಾಲುಗಳಿಗೆ ದಿಢೀರ್ ಬ್ರೇಕ್ ಬಿತ್ತು. ಅದೇ ಗಲ್ಲಿಯಲ್ಲಿ ಅವರಿಗಾಪೋಸಿಟ್ ಆಗಿ ಜುಂಯ್ಯನೆ ಸಾಗಿ ಬರುತ್ತಿತ್ತು ಚೆವರ್ಲೆಟ್‌ಕಾರು !

"ಗುರು......ಕಳ್ಳಕೋರಮರಿಗೆ ನಮ್ಮ ಮೇಲೆ ಅದಿನ್ನೆಷ್ಟು ಹಗೆಯಿರಬೇಕು !" ಅಂದ ಚಂದನ್.

ಆ ಮಾತುಗಳನ್ನು ಕಿವಿಗೇ ಹಾಕಿಕೊಳ್ಳದೆ ಪಕ್ಕದಲ್ಲೇ ಇದ್ದ ಕಾಂಪೌಂಡ್ ಹಾರಿ ಮನೆಯ ಆವರಣದ ಕಡೆಗೆ ಸಾಗಿದ ಮಹೇಶ.

"ಗುರು......ಎಚ್ಚರಿಕೆ ! ಕಳ್ಳರೆಂದು ಇಲ್ಲದ ರೂಪ ಸೃಷ್ಟಿಸಿಬಿಟ್ಟಾರು !" ತಾನೂ ಅವನ ಹಿಂದೆಯೇ ಆವರಣಕ್ಕಿಳಿದರೂ ಕಾಷನ್ ಕೊಟ್ಟ ಚಂದನ್.

"ತಥ್ಥೇರಿ... ನಿನ್ನದೊಳ್ಳೆ ರಾಮಾಯಣವಾಯಿತು ! ಸುಮ್ಮನೆ ಬರಲಾಗದೆ ?" ಆಕ್ರೋಶದೊಡನೆ ನುಡಿದ ಶ್ಯಾಂ.

ಕೂಗುಗಳನ್ನು ಹಾಕುತ್ತಾ ಕಾರಿಳಿದು ಅವರ ಹಿಂದೆ ಬಿದ್ದರು ದೃಢಕಾಯರು. ಆ ಮನೆಯ ಸುತ್ತಲೂ ಸ್ಪ್ರೆಡ್ ಆಗತೊಡಗಿದರು.

ಅಷ್ಟರಲ್ಲಾಗಲೇ ಹಿಂದಿನ ಕಾಂಪೌಂಡ್ ಎಗರಿ ಆ ರಸ್ತೆಯನ್ನೇ ಬಿಟ್ಟು ಬೇರೊಂದು ರಸ್ತೆ ತಲುಪಿ ನಿರಾಳವಾಗಿ ಉಸಿರಾಡತೊಡಗಿದ್ದರು ಗುರು ಶಿಷ್ಯರು. ಒಂದೆಡೆ ಎರಡುಕ್ಷಣ ನಿಂತು ಸುತ್ತಲೂ ವಾತಾವರಣದ ತಪಶೀಲು ನಡೆಸಿದರು ಅನುಮಾನಾಸ್ಪದ ವ್ಯಕ್ತಿಗಳ ದರ್ಶನವಾಗಲಿಲ್ಲ.

ನಿಟ್ಟುಸಿರುಗರೆದು ನಿಧಾನವಾಗಿ ಮುಂದಕ್ಕೆ ನಡೆಯತೊಡಗಿದರು. ಅಲ್‌ಮೋಸ್ಟ್ ಅರ್ಧ ಗಂಟೆ ಹೀಗೆಯೇ ಸಾಗಿತು ಅವರ ಪಯಣ. ರಸ್ತೆಗಳಲ್ಲಿ ಜನ ಸಂಚಾರ ಬಹಳ ಕಡಿಮೆ. ವಾಹನಗಳೂ ಅಷ್ಟಾಗಿ ಕಾಣ ಬರುತ್ತಿಲ್ಲ.

ಆಗಲೇ ಇದ್ದಕ್ಕಿದ್ದಂತೆ ಅಪಾಯದ ಸುಳಿವು ಸೋಕಿತು ಮಹೇಶನ ಮಿದುಳಿಗೆ. ಪರಿಸರವನ್ನು ಸದಾ ವಾಚ್ ಮಾಡುತ್ತಲೇ ಇರುವ ಅವನ ಆರನೇ ಇಂದ್ರಿಯ ರೆಡ್ ಸಿಗ್ನಲ್ ಫ್ಲಾಷ್ ಮಾಡಿತು. ಮುಂದಕ್ಕಿಡಲು ಮೇಲೆತ್ತಿದ್ದ ಕಾಲನ್ನು ಹಾಗೆಯೇ ಕೆಳಕ್ಕಿಳಿಸಿ ನಿಂತಲ್ಲೇ ಫ್ರೀಝ್ ಆದ.

ಏನೋ ಐಬಿದೆ ಇಲ್ಲಿ ?

ಆ ಐಬು ಏನೆಂದು ಅರ್ಥವಾದಾಗ ಝಲ್ಲೆಂದಿತ್ತು ಗುಂಡಿಗೆ. ಅವನ ಚೇತರಿಸಿಕೊಳ್ಳುವಷ್ಟರಲ್ಲಿ ಅಲ್ಲಿಯವರೆಗೆ ಕತ್ತಲಲ್ಲಿ ನಿಂತಿದ್ದ ಲಾರಿಗಳು ಗರಗರ ಶಬ್ದದೊಡನೆ ಸ್ಟಾರ್ಟಾಗಿ ಭೂತಗಳಂತೆ ಮೇಲೇರಿಬರತೊಡಗಿದವು. ಮೂವರ ಹೃದಯಗಳೂ ಕ್ಷಣ ನಿಂತು ಮುಂದಿನ ಕ್ಷಣ ನಗಾರಿಗಳಂತೆ ಸೌಂಡ್ ಮಾಡ ತೊಡಗಿದವು.

ಓಡದೇ ಬೇರೆ ವಿಧಿಯೇ ಇರಲಿಲ್ಲ ಮೂವರಿಗೂ. ಶತ್ರುಗಳನ್ನು ಬೈದುಕೊಳ್ಳುತ್ತಲೇ ರನ್ನಿಂಗ್‌ರೇಸ್ ಶುರು ಮಾಡಿದರು. ಅರ್ಧ ಫರ್ಲಾಂಗ್ ಮುಂದೆ ಬರುವಷ್ಟರಲ್ಲಿ ಎದುರಿನಲ್ಲೂ ಕಾಣಿಸಿಕೊಂಡಿತು ಲಾರಿಗಳ ಒಂದು ತಂಡ !

ಸಡನ್ನಾಗಿ ನಿಂತುಬಿಟ್ಟ ಮಹೇಶ. ಅತ್ತ ದರಿ..... ಇತ್ತ ಲಾರಿ !

ಅಯಾಚಿತವಾಗಿ ಎಡಪಾರ್ಶ್ವದತ್ತ ಹರಿಯಿತು ಗಮನ. ಪ್ರವಾಹ ದಂತೆ ಹರಿಯುತ್ತಾ ಬೊಂಬಾಯಿಯ ಕೊಳಕನ್ನೆಲ್ಲಾ ಹೊತ್ತು ಸಮುದ್ರದ ಒಡಲಿಗೆ ಸೇರಿಸುವ ಡ್ರೈನೇಜ್ ಕಾಲುವೆ ಕಾಣಿಸಿತು.

ವಾಟ್ ಎ ಲವ್ಲಿ ಎಸ್ಕೇಪ್ ರೂಟ್ !

"ಫಾಲೋ ಮಿ ಫ್ರೆಂಡ್......!" ಅನ್ನುತ್ತಾ ಡೈರೆಕ್ಟ್ ನೀರಿಗೆ ಡೈವ್ ಮಾಡಿದ ಮಹೇಶ.

"ಚೆನ್ನಾಗಿ ಬಾಳಿ ಬದುಕಿ ಛತ್ರದಲ್ಲಿ ಸತ್ತ ಅನ್ನುವಂತೆ ನಮಗೆ ಕೊನೆ ಯಲ್ಲಿ ಈ ಕೊಳಕು ಕಾಲುವೆಯೇ ಗತಿಯಾಯಿತೆ ಲೇಟೆಸ್ಟ್ ಆಂಜನೇಯ !" ಎಂದು ಜೋರಾಗಿ ಕೂಗುತ್ತಾ ಶ್ಯಾಂನೊಡಗೂಡಿ ನೀರಿಗೆ ಬಿದ್ದ ಚಂದನ್.

ಸಡನ್ ಬ್ರೇಕ್‌ಗಳೊಡನೆ ನಿಂತವು ಲಾರಿಗಳು. ನಾನಾಕಾಮೆಂಟ್ ಗಳೊಡನೆ ಕೆಳಕ್ಕಿಳಿದು ಮುಕ್ಕಿದರು ದೃಢಕಾಯರು. ಅವರು ಡ್ರೈನೇಜ್ ಸಮೀಪಿಸುವಷ್ಟರಲ್ಲಿ ಪ್ರವಾಹದ ವೇಗದಲ್ಲಿ ಸಿಕ್ಕಿ ಅರ್ಧ ಕಿಲೋಮೀಟರ್ ಗಿಂತಲೂ ಹೆಚ್ಚು ಅಂತರದಲ್ಲಿದ್ದವು ಅವರು ಕೊಲ್ಲಬೇಕೆಂದುಕೊಂಡಿದ್ದ ಪ್ರತ್ಯರ್ಥಿಗಳ ದೇಹಗಳು !

# ೧೩

"ಸಾವನ್, ಡೋಗ್ರಾ ಬಂದನೇ ?" ಕೊಠಡಿಯಲ್ಲಿ ಅತ್ತಿಂದಿತ್ತ ಸರ್ವೆ ಅಕ್ಬರ್ ತಟಕ್ಕನೆ ನಿಂತು ಬಾಗಿಲ ಬಳಿಯಿದ್ದ ದೃಢಕಾಯನಲ್ಲಿ ಪ್ರಶ್ನಿಸಿದ.

"ಇನ್ನೂ ಬಂದಿಲ್ಲ ಬಾಸ್ !" ನಮ್ರತೆಯೊಡನೆ ನುಡಿದ ಸಾವನ್.

"ಹುಡುಗಿಯರೆಷ್ಟು ಸಿಕ್ಕರು ?"

"ಹತ್ತು ಹುಡುಗಿಯರು ಬಾಸ್ !"

"ರಾಸ್ಕಲ್......ನಾನು ಹೇಳಿದ್ದೇನು ನೀವು ಮಾಡುವುದೇನು ? ಹೆಗ್ಗಣಗಳಂತೆ ತಿಂದು ಹಂದಿಗಳಂತೆ ಮೈ ಬೆಳೆಸುವುದರ ವಿನಹ ನಿಮಗೆ ಬೇರೇನು ಕೆಲಸ ಬರುತ್ತದೆ ?" ಸಹನೆ ಕಳೆದುಕೊಂಡು ಕಿರುಚಿದ ಅಕ್ಬರ್.

ಆಗಲೇ 'ಟ್ರಿಣ್ – ಟ್ರಿಣ್.....' ಎಂದು ಟೆಲಿಫೋನ್ ಮೊಳಗತೊಡಗಿತು.

ಅದರ ಕಡೆಗೆ ಸಿಡುಕಿನಿಂದ ನೋಡಿ ರಿಸೀವರ್ ಎತ್ತಿ ಕಿವಿಗಾನಿಸಿದ ಅಕ್ಬರ್ ಅತ್ತಬದಿಯ ಮಾತುಗಳನ್ನು ಕೇಳಿದೊಡನೆ ರಕ್ತವೆಲ್ಲ ಇಂಗಿಹೋಗಿ ಸಂಪೂರ್ಣ ಬೆಳ್ಳಗಾಯಿತು ಅವನ ಮುಖ. ನಿಲ್ಲಲೂ ಶಕ್ತಿಯಿಲ್ಲದವನಂತೆ ಕುರ್ಚಿಯಲ್ಲಿ ಕುಸಿದು ಕುಳಿತ.

ಆ ಕ್ಷಣವೇ ಕೊಠಡಿಯೊಳಕ್ಕೆ ಬಂದ ಸಾವನ್. ಅದಾಗತಾನೇ ಹೊರಕ್ಕೆ ಹೋಗಿದ್ದ ಅವನು. "ಬಾಸ್" ಅಂದ ಮೆಲುಧ್ವನಿಯಲ್ಲಿ.

ಏನೆಂಬಂತೆ ತಲೆ ಕುಣಿಸಿದ ಅಕ್ಬರ್.

"ಡೋಗ್ರಾ......ನಮ್ಮವರೊಡನೆ ಹಾರ್ಬರ್‌ನಲ್ಲಿ ಸಿಕ್ಕಿದ್ದಾನೆ."

"ಆಲ್‌ರೈಟ್...ಈಗಲೇ ಬರುತ್ತೇನೆಂದು ಹೇಳು" ಅಂದ ಅಕ್ಬರ್.

ಬಾಸ್ ಅಷ್ಟೊಂದು ಮಾಡಿ ಕೂಗಿದ್ದಾನೆಂದರೆ ಯಾರಿಗೋ ಗ್ರಹಚಾರ ಕಾದಿದೆಯೆಂದೇ ತರ್ಕಿಸಿದ ಸಾವನ್. ಸದ್ಯ ತನಗೆ ಕುತ್ತು ಬರದಿದ್ದರೆ ಸಾಕು ಅಂದುಕೊಳ್ಳುತ್ತಾ ಹೊರನಡೆದ.

ಕೆದಕಿದ ಜೇನುಗೂಡಂತಾಗಿದ್ದ ತಲೆಯನ್ನು ತಹಬಂದಿಗೆ ತರುವ ವಿಫಲ ಪ್ರಯತ್ನದಲ್ಲಿ ತೊಡಗಿ ಹಾಲ್‌ಗೆ ಬಂದ ಅಕ್ಬರ್. ಯಾವ ಕ್ಷಣದಲ್ಲಾದರೂ ಎಕ್ಸ್‌ಪ್ಲೋಡ್ ಆಗುವ ಟೈಂಬಾಂಬ್‌ನಂತಿದೆ ಅವನ ಮನಸ್ಸತ್ವ

"ಡೋಗ್ರಾ......ಹೋದ ಕೆಲಸವೇನಾಯಿತು ?" ಮೆಲ್ಲಗಿನ ಧ್ವನಿಯಲ್ಲೇ ಕೇಳಿದ.

"ಸಾರಿ ಸರ್......ಅವರು ತಪ್ಪಿಸಿಕೊಂಡುಬಿಟ್ಟರು !" ತಲೆ ತಗ್ಗಿಸಿ ಸೋಲಿನ ಧ್ವನಿಯಲ್ಲಿ ಉತ್ತರಿಸಿದ ಡೋಗ್ರಾ.

ಅವನ ಮಾತು ಮುಗಿಯುವ ಮೊದಲೇ ವಿಪರೀತ ವೇಗದೊಡನೆ ಮೂವ್ ಆಗಿತ್ತು ಅಕ್ಬರ್‌ನನ ಬಲಗೈ. ಹ್ಯಾಮರ್‌ನಂತೆ ಸಾಗಿ ಡೋಗ್ರಾನ ಮುಖವನ್ನು ಫಟಾರನೆ ಸಂಪರ್ಕಿಸಿತು. ಚಿಟ್ಟನೆ ಚೀರಿದ ಡೋಗ್ರಾ. ತುಟಿ ಸೀಳಿ ರಕ್ತಧಾರೆ ಹರಿಯತೊಡಗಿತು.

"ಬ್ಲಡಿ ಬಾಸ್ಟರ್ಡ್......ಐ ವಿಲ್ ಕಿಲ್ ಯು......ನಿನ್ನ ಕಾರ್ಯ ಕೌಶಲ್ಯದ ಬಗ್ಗೆ ನಂಬಿಕೆಯಿಟ್ಟುಕೊಂಡಿದ್ದದ್ದೇ ತಪ್ಪಾಯಿತು. ಬರಿಗೈಗಳೊಡನೆ ವಾಪಸ್ಸಾಗಲು ನಾಚಿಕೆಯಾಗಲಿಲ್ಲವೇ ?" ಉದ್ರೇಕದೊಡನೆ ಕಿರುಚಿದ ಅಕ್ಬರ್.

ಡೋಗ್ರಾನ ಹಿಂದೆ ನಿಂತಿದ್ದ ಇಪ್ಪತ್ತು ದೃಢಕಾಯರ ಗುಂಡಿಗೆಗಳು ಗುಬಗುಬನೆನ್ನತೊಡಗಿದವು. ಲಾರಿಗಳ ಮೂಲಕ ಚೇಸಿಂಗ್ ಮಾಡಿದ್ದ ಹೀರೋಗಳವರು !

"ಅವರ್ಯಾರೆಂದಾದರೂ ತಿಳಿದುಕೊಂಡೆಯಾ ?" ಮತ್ತೊಮ್ಮೆ ಕಿರುಚಿದ ಅಕ್ಬರ್.

ಗೊತ್ತಿದ್ದರಲ್ಲವೇ ಏನಾದರೂ ಹೇಳುವುದು ? ಎಲ್ಲರೂ ದೇಹಗಳನ್ನು ಹಿಡಿಮಾಡಿಕೊಂಡು ತಲೆತಗ್ಗಿಸಿ ನಿಂತರು. ಅವರ ಮೌನಕಂಡು ತಾರಕ ಸ್ಥಾಯಿ ತಲುಪಿತು ಅಕ್ಬರ್ ಆಕ್ರೋಶ್.

"ಡಾಮಿಟ್......ಅವರ್ಯಾರೆಂದು ನಾನು ಹೇಳುತ್ತೇನೆ ಕೇಳಿ......ಡರ್ಟಿ ಡಾಗ್ ಅಬ್ದುಲ್ ತಾನೂ ಸತ್ತು ನಮ್ಮ ತಲೆಗಳಿಗ ಆಪತ್ತು ತಂದೂ! ಹೋಂ ಮಿನಿಸ್ಟರ್ ಮೊಮ್ಮಗಳು ಶಾಲಿನಿಯನ್ನು ಕಿಡ್‌ನ್ಯಾಪ್ ಮಾಡಿದ್ದಾನವನು. ಇದುವರೆಗೆ ಸ್ಪೆಷಲ್ ಬ್ರಾಂಚ್‌ನವರಿಗೆ ನಮ್ಮ ಉಸಿರೂ ತಾಕದಂತೆ ಎಚ್ಚರಿಕೆ

ಯಿಂದ ನಡೆದುಕೊಂಡಿದ್ದೆವು. ಈಗ ಹೋಂಮಿನಿಸ್ಟರ್ ಬ್ಲಡ್‌ಹೌಂಡ್‌ಗಳ ಹಿಂಡವನ್ನೇ ನಮ್ಮ ಮೇಲೆ ಛೂ ಬಿಟ್ಟಿದ್ದಾನೆ. ದೆಹಲಿಯಿಂದ ಬಂದ ಆ ಮೂವರೂ ಸೀಕ್ರೇಟ್ ಏಜೆಂಟ್ಸ್. ಅವರಲ್ಲೊಬ್ಬ ಕಿರಾತಕ! ಕಿಲ್ ಮಾಸ್ಟರ್ ಎಂದವನ ಬಿರುದು. 'ಜಿಂಕೆ' ಅವನ ಕೋಡ್‌ನೇಮ್!" ಮಾತು ನಿಲ್ಲಿಸಿದ ಅಕ್ಬರ್.

ಪಕ್ಕದಲ್ಲೇ ಬಾಂಬ್ ಬಿದ್ದಿದ್ದರೂ ಷಾಕ್‌ಗೊಳಗಾಗುತ್ತಿರಲಿಲ್ಲವೇನೋ ಡೊಗ್ರಾ ಮತ್ತವನ ಕಟ್ ಥ್ರೋಟ್ಸ್.

ಬಾಪ್‌ರೇಬಾಪ್! ತಾವಿದುವವರೆಗೆ ಎಡತಾಕಿದ್ದು ಇಂಟರ್‌ನ್ಯಾಷನಲ್ ಕ್ರೈಮ್ ಸಿಂಡಿಕೇಟ್ ಗೋಲ್ಡನ್ ಗ್ಯಾಂಗ್ ಅನ್ನೆ ಸಿಕ್ಕಿದೆಡೆಯೆಲ್ಲಾ ಧೂಳೀಪಟ ಮಾಡುತ್ತಿರುವ ಬ್ಲಡ್‌ಹಂಟರ್ ಎಂದು ಹೆಸರಾಂತ ಇಂಟರ್‌ಪೋಲ್‌ನ ಏಕೈಕ ಕಿಲ್‌ಮಾಸ್ಟರ್ ಕೆ 7 ನೊಡನೆಯೇ ?

ಅವರಿಗರಿವಿಗೇ ಬರದಂತೆ ಕಂಪಿಸಿದವು ಅವಯವಗಳು. ನಾಲಿಗೆ ಒಣಗಿ ಹೃದಯದ ಬಡಿತ ಏರುಪೇರಾಯಿತು.

"ಈಗರ್ಥವಾಯಿತೆ ನಾನೇಕೆ ಭಯಪಡುತ್ತಿದ್ದೇನೆಂದು ?" ಗಂಭೀರವಾಗಿ ಕೇಳಿದ ಅಕ್ಬರ್.

ಎಲ್ಲರೂ ಗಂಗೆತ್ತುಗಳಂತೆ ತಲೆಯಾಡಿಸಿದರು.

"ಇನ್ನು ನಾವು ತೆಗೆದುಕೊಳ್ಳಬೇಕಾದ ಸ್ಟೆಪ್ ಒಂದೇ......ಆ ಮೂವರನ್ನು ಇಲ್ಲವಾಗಿಸುವುದು ! ಇಲ್ಲವೇ ನಾವು ಝಂಡಾ ಎತ್ತುವುದು ! ಸದ್ಯದ ಪರಿಸ್ಥಿತಿಯಲ್ಲಿ ಸ್ಥಾವರ ಖಾಲಿ ಮಾಡುವುದು ಸಾಧ್ಯವೇ ಇಲ್ಲ"ಹೇಳಿದ ಅಕ್ಬರ್.

"ಡೋಂಟ್‌ವರಿ ಬಾಸ್" ಅಷ್ಟೊಂದು ಎಕ್ಸ್‌ಟ್ರೀಮ್ ಸ್ಟೆಪ್ ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ. ನನಗೆ ಮೂರು ಗಂಟೆಗಳಷ್ಟು ಟೈಂ ಕೊಡಿ. ಆ ಮೂವರನ್ನೂ ಹೆಡೆಮುರಿಕಟ್ಟಿ ಕರೆತರುತ್ತೇನೆ" ರೋಷದೊಡನೆ ಹೇಳಿಕೊಂಡ ಡೋಗ್ರಾ.

ಅವನನ್ನೇ ತೀಕ್ಷ್ಣವಾಗಿ ದಿಟ್ಟಿಸಿ ಹೇಳಿದ ಅಕ್ಬರ್ "ನಿನ್ನ ಆಗಮನವನ್ನೇ ಎದುರು ನೋಡುತ್ತಿರುತ್ತೇವೆ ಡೋಗ್ರಾ. ಗುಡ್‌ಲಕ್."

"ಅಲ್ಲಿ ನೋಡು ಗುರು ....ಅದೇ !" ಸಣ್ಣಗೆ ವಿಷಲ್ ಮಾಡಿ ಡಾಲ್ಫಿನ್ ಹೋಟೆಲ್ ಕಡೆ ತೋರಿಸಿದ ಚಂದನ್.

ಅವರಿಂದ ನೂರು ಮಾರುಗಳಷ್ಟು ದೂರದಲ್ಲಿತ್ತು ಡಾಲ್ಫಿನ್ ಹೋಟೆಲ್. ಅಬ್ದುಲ್ ಮಾತುಗಳು ನೆನಪಾದವು ಮಹೇಶನಿಗೆ. ಮೂವರೂ ಸಿಗರೇಟ್ ಹಚ್ಚಿಕೊಂಡು ಹೋಟೆಲ್ ಕಡೆಗೆ ಹೆಜ್ಜೆ ಹಾಕಿದರು.

ಫುಲ್‌ರಷ್ ಹೋಟೆಲ್‌ನೊಳಗೆ ಆರ್ಡರ್ ಮಾಡುವವರ ಜೋರು..... ವೈಟರ್‌ಗಳ ಹಡಾಹುಡಿಯ ಓಡಾಟ. ಜ್ಯೂಕ್‌ಬಾಕ್ಸ್‌ನ ಜೋರು ಧ್ವನಿಯನ್ನು ಮೀರಿಸುತ್ತಿರುವ ಪ್ಲೇಟ್, ಗ್ಲಾಸ್‌ಗಳ ಸಪ್ಪಳ.

ಮೂವರೂ ತಲೆ ಬಗ್ಗಿಸಿಕೊಂಡು ಹೋಗಿ ಮೂಲೆಯ ಟೇಬಲ್ಲೊಂದನ್ನು ಆಕ್ರಮಿಸಿಕೊಂಡರು. ಕೆಲವರು ತಮ್ಮನ್ನೇ ಕೆಕ್ಕರಿಸಿ ನೋಡುತ್ತಿರುವುದನ್ನು ಗಮನಿಸಿ ಮೈರೋಮಗಳು ನಿಮಿರಿ ನಿಂತವು ಮಹೇಶನಿಗೆ.

ಆರು ನಿಮಿಷಗಳ ನಂತರ ಅವರ ಟೇಬಲ್ ಬಳಿಗೆ ಬಂದ ವೈಟರ್. ಅವನ ಮುಖದ ಮೇಲಿದ್ದ ಉದಾಸೀನ ಭಾವವನ್ನು ಕಂಡು ಎಗರಿಸಿ ಎದೆಗೊಡೆಯಬೇಕೆಂಬ ಆಸೆ ಚಂದನ್. ಮಹೇಶನ ಟೆನ್ಷನ್ ಗಮನಿಸಿ ತೆಪ್ಪಗಾದ.

"ಏನು ಬೇಕು ?" ಕೇಳಿದ ವೈಟರ್. ಭಿಕ್ಷೆ ಬೇಡಲು ಬಂದವರನ್ನು ಟ್ರೀಟ್ ಮಾಡುವ ರೀತಿಯಲ್ಲಿತ್ತು ಅವನ ಟ್ರೀಟ್‌ಮೆಂಟ್.

ಅವರ ಮೌನವನ್ನು ಕಂಡು ಅಸಹನೆಯಿಂದ ಸಿಡುಕಿದ ವೈಟರ್ "ಏನುಬೇಕು ಅಂದರೆ ಹೀಗೆ ಸುಮ್ಮನಿದ್ದರೆ ಹೇಗೆ ? ಮಾತು ಬರುವುದಿಲ್ಲವೇ ?"

"ಮಾತು ನಿನಗಿಂತಾ ಚೆನ್ನಾಗಿ ಬರುತ್ತದೆ ಸರ್ವರಣ್ಣ......ಮೊದಲು ಮರ್ಯಾದೆಯಿಂದ ಮಾತಾಡುವುದನ್ನು ಕಲಿ. ಏಕೆಂದರೆ ದಿನಗಳು ಮೊದಲಿನಂತಿಲ್ಲ !" ಶಾಂತಧ್ವನಿಯಲ್ಲೇ ತನ್ನ ಕೋಪವನ್ನು ಬಾಯಿಬಿಟ್ಟ ಚಂದನ್ ತಡೆಯಲಾಗದೆ.

ಅವನನ್ನೇ ನುಂಗುವಂತೆ ನೋಡಿದ ವೈಟರ್. ಮುಖ ಬೀಟ್‌ರೂಟ

ರಂಗಿಗೆ ತಿರುಗಿತು "ಈ ಪುರಾಣವೆಲ್ಲಾ ಬೇಡ.... ಏನು ಬೇಕೋ ಬೇಗ ಹೇಳಿ !" ಅಂದ.

"ಡೋಗ್ರಾ ಬೇಕಾಗಿತ್ತು !" ಅಂದ ಮಹೇಶ ಮೆಲ್ಲನೆ.

ಒಮ್ಮೆಲೇ ಉಗುಳು ನುಂಗಿದ ವೈಟರ್. ತಕ್ಷಣ ಚೇತರಿಸಿಕೊಂಡು ಅವನ ಮಾತು ಸರಿಯಾಗಿ ಕೇಳಿಸಿಕೊಳ್ಳದವನಂತೆ, "ದೋಸೆಗಳು ಬೇಕೆ ? ಅವು ಸಿಕ್ಕುವುದಿಲ್ಲ !" ಅಂದ ಸೊಟ್ಟ ಮುಖದೊಡನೆ.

"ದೋಸೆಗಳಲ್ಲವೋ ಬೇವಕೂಫ್......ಡೋಗ್ರಾ....ಡೋಗ್ರಾ ಬೇಕು ನಮಗೆ. ಅಂಡರ್‌ಸ್ಟ್ಯಾಂಡ್ ?" ಕಾಲರ್ ಹಿಡಿದು ಮುಂದಕ್ಕೆಳೆದುಕೊಂಡು ಡಿಚ್ಚಿ ಹೊಡೆದು ಹೇಳಿದ ಶ್ಯಾಂ.

ಕಿಟಾರನೆ ಕಿರುಚಿ ಹಿಂದಕ್ಕೆ ಬಿದ್ದ ವೈಟರ್, ಮೂಗಿನ ಹೊಳ್ಳೆಗಳಿಂದ ಧಾರಾಕಾರವಾಗಿ ಪ್ರವಹಿಸತೊಡಗಿದ ರಕ್ತವನ್ನು ತಡೆಯಲು ಪ್ರಯತ್ನಿಸುತ್ತಾ.

ಸರಿಯಾಗಿ ಆಗಲೇ ಒಳಗಿನ ಕೊಠಡಿಯೊಳಗಿಂದ ಹೊರಕ್ಕೆ ಬಂದ ಡೋಗ್ರಾ. ಅವನ ಹಿಂದೆ ಸುಮಾರು ಇಪ್ಪತ್ತೈದು ದೃಢಕಾಯರ ಗುಂಪು.

"ನಾನೇ ಡಿಯರ್ ಕಿಲ್ ಮಾಸ್ಟರ್.....ನಿನಗೆ ಬೇಕಾದ ಡೋಗ್ರಾ ನಾನೇ ! ನಿಮಗೋಸ್ಕರವೇ ಇಲ್ಲಿ ಬೆಳಗಿಂದಲೂ ಕಾಯುತ್ತಿದ್ದೆ....." ಅನ್ನುತ್ತಾ ತನ್ನವರ ಕಡೆ ತಿರುಗಿ ಸಿಡಿಲಿನಂತಹ ಧ್ವನಿಯಲ್ಲಿ ಆರ್ಡರ್ಸ್ ಪಾಸ್ ಮಾಡಿದ, "ಅವರನ್ನು ಬಂಧಿಸಿ ಅದಕ್ಕೆ ಮೊದಲು ಕೀಲು ಕೀಲನ್ನು ಮಾತಾಡಿಸಿಬಿಡಿ !"

ಮರುಕ್ಷಣ ಮೂವರು ಏಜೆಂಟರನ್ನು ಸುತ್ತುವರೆದರು ದೃಢಕಾಯರು.

ತಕ್ಷಣ ಕರೆಂಟ್‌ನಂತೆ ಚಲಿಸಿದರು ಮಹೇಶ, ಚಂದನ್, ಶ್ಯಾಂ. 'ಫಟ್, ಫಟ್, ಫಟ್' ಎಂದು ಸಿಡಿಗುಂಡುಗಳಂತೆ ದೃಢಕಾಯರ ಮುಖಗಳನ್ನು ತಾಕಿದವು ಅವರ ಬಿಗಿದ ಮುಷ್ಟಿಗಳು. ಹಾಹಾಕಾರದೊಡನೆ ಹಿಂದಕ್ಕುರುಳಿದರು ದೃಢಕಾಯರು.

"ಗಂಡಸರಾದವರು ಮುಂದೆ ಬನ್ನಿರೋ......" ಎಂದು ಚಾಲೆಂಜ್ ಮಾಡುತ್ತಾ ಇದ್ದ ಜಾಗದಿಂದ ಕುಪ್ಪಳಿಸಿ ಟೇಬಲ್ಲೊಂದರ ಮೇಲೆ ನಿಂತು ಡಾಲ್ಫಿನ್ ಹೋಟೆಲ್‌ನ ಎಲ್ಲೆಡೆ ತನ್ನ ಆವಾರ್ಜ್ ಪಸರಿಸುವಂತೆ

ಗರ್ಜಿಸುತ್ತಾ ಸಿಕ್ಕಿದವರ ಸಿಕ್ಕಿದಂತೆ ಸದೆ ಬಡಿಯಲು ಶುರು ಮಾಡಿಬಿಟ್ಟ ಚಂದನ್.

"ಮೊದಲು ಅವನನ್ನು ಹಿಡಿದುಕೊಳ್ಳಿ !" ಕೂಗಿದನೊಬ್ಬ ದೃಢಕಾಯ.

ಪಕ್ಕದಲ್ಲೇ ಇದ್ದ ಕರ್ಚಿಯನ್ನೆತ್ತಿ ಅವನ ಮೇಲೆಸೆದ ಶ್ಯಾಂ. 'ಹೋ' ಎಂದು ಹುಯಿಲಿಟ್ಟ ಅವನು.

ಈ ಗಲಭೆ ಶುರುವಾದೊಡನೆ ಒಳಗಿದ್ದ ಕಸ್ಟಮರ್‍ಸ್ ತಲಾ ಒಂದೊಂದು ದಿಕ್ಕಿಗೆ ದೌಡಾಯಿಸಿ ತಮ್ಮ ಸೇಫ್ಟಿ ನೋಡಿಕೊಂಡಿದ್ದರು. ಎಲ್ಲರೂ ಸ್ಪಾಟ್‌ನಿಂದ ಎಸ್ಕೇಪ್ ಆಗಿರಲಿಲ್ಲ. ಬಿಟ್ಟಿ ಮಜಾ ತೆಗೆದುಕೊಳ್ಳಲು ಒಂದಷ್ಟು ಜನ ಅಷ್ಟು ದೂರದಲ್ಲಿ ನಿಂತು ಫೈಟಿಂಗನ್ನು ವಾಚ್ ಮಾಡ ತೊಡಗಿದ್ದರು.

ಇನ್ನೊಂದು ಕುರ್ಚಿ ಮೇಲಕ್ಕೆತ್ತಿ ಒಗೆದು, ಮುರಿದ ಆ ಕುರ್ಚಿ ಕಾಲನ್ನು ಕೈನಲ್ಲಿಡಿದು ದೃಢಕಾಯರ ನಡುವೆ ನುಗ್ಗಿ ವಿಜೃಂಭಿಸತೊಡಗಿದ ಶ್ಯಾಂ.

ಈ ದೃಶ್ಯವನ್ನು ಗಮನಿಸುತ್ತಿದ್ದಂತೆ ಎಣೆಯಿಲ್ಲದಷ್ಟು ಕೋಪಗೊಂಡ ಡೋಗ್ರಾ. ಗುಂಡಿಗೆ ಜಲದರಿಸುವಂತೆ ಗರ್ಜಿಸುತ್ತಾ ತೊಡೆತಟ್ಟಿ ಮೇಲೆಗರಿ ಮಹೇಶನೆದೆಗೆ ತನ್ನೆರಡು ಕಾಲುಗಳನ್ನು ಸಂಪರ್ಕಿಸುವ ಪ್ರಯತ್ನ ಮಾಡಿದ.

ನೀಟಾಗಿ ಆದರೆ ಬಹಳ ಸ್ಮೂತಾಗಿ ಆ ಕಿಕ್‌ನ ದಾರಿಯಿಂದ ಪಕ್ಕಕ್ಕೆ ಸ್ಪಿನ್ ಆದ ಮಹೇಶ. ಗುರಿಸಿಲುಕದ ಕಾರಣ ಬ್ಯಾಲೆನ್ಸ್ ಕಳೆದುಕೊಂಡ ಡೋಗ್ರಾ, ನೇರ ಹೋಗಿ ಗೋಡೆಗೆ ಗುದ್ದಿಕೊಂಡ. ಅವನ ಆಕ್ರೋಶ ಈಗಂತೂ ಮುಗಿಲುಮುಟ್ಟಿತು.

ಆ ವೇಳೆಗೆ ಹೋಟೆಲನ್ನು ಸ್ಟ್ರೀಟ್ ಫೈಟಿಂಗ್ ಲೆವೆಲ್‌ಗೆ ತಂದು ಬಿಟ್ಟಿದ್ದರು ಮಹೇಶನ ಶಿಷ್ಯೋತ್ತಮರು. ಫಟ್ ಫಟಾರ್ ಶಬ್ದಗಳೊಡನೆ ಏಟು ತಿಂದವರ ಚೀರಾಟಗಳೊಡನೆ, ಆರ್ತನಾದಗಳೊಡನೆ ತುಂಬಿ ಹೋಯಿತು ಡಾಲ್ಫಿನ್ ಹೋಟೆಲ್. ಕುರ್ಚಿ, ಟೇಬಲ್‌ಗಳು ಕಾರ್ಪೊರೇಷನ್ ಲಾರಿಗೆ ಮಾತ್ರ ಲಾಯಕ್ಕಾಗ ತೊಡಗಿದವು.

ಮೂವರೂ ಇತ್ತ ಕಡೆಗೇ ಕಾನ್‌ಸನ್ಟ್ರೇಟ್ ಮಾಡಿರುವಾಗಲೇ ಹೊರಗಿನಿಂದ ಸರಸರನೆ ಒಳಕ್ಕೆ ನುಗ್ಗಿದರು ಇನ್ನೂ ಇಪ್ಪತ್ತೈದು ಮಂದಿ

ದೃಢಕಾಯರು. ಅವರ ಕೈಗಳಲ್ಲಿ ಸೈಕಲ್ ಚೈನ್ಸ್ ರಾಡ್ಸ್ ಮುಂತಾದ ಅವತಾರಗಳು !

ಅವರನ್ನು ಕಣ್ಣಂಚಿನಿಂದ ಗಮನಿಸಿದೊಡನೆ ಸಂಪೂರ್ಣ ಅಲರ್ಟಾದ ಮಹೇಶ. ಶರವೇಗದಲ್ಲಿ ಆಲೋಚಿಸತೊಡಗಿತ್ತು ಮಿದುಳು. ಅವರು ಐವತ್ತು ಜನ ಅಥವ ಈಗ ಒಂದತ್ತು ಜನ ಕಡಿಮೆಯಾಗಿರಬಹುದು ! ಆದರೆ ತಾವು ಮೂರೇ ಜನ ; ತಕ್ಷಣ ಒಂದು ನಿರ್ಧಾರಕ್ಕೆ ಬಂದುಬಿಟ್ಟ.

"ಚಂದನ್.....ಶಾಂ... ಇವರ ವಿಷಯ ಆಮೇಲೆ ನೋಡಿಕೊಳ್ಳೋಣ. ಮೊದಲಿಲ್ಲಿಂದ ಜಾಗ ಖಾಲಿ ಮಾಡಿ..... ಕಮಾನ್..... ಮೂವ್......" ಎಂದು ಜೋರಾಗಿ ಕೂಗಿ ಹೇಳಿ ಒಂದು ಕಿಟಕಿಯ ಕಡೆ ಓಡಿ ಕರ್ಟನ್ ಎಳೆದು ಹೊರಕ್ಕೆ ಜಂಪ್ ಮಾಡಿಬಿಟ್ಟ.

ಅವನ ಕೂಗು ಕೇಳಿದೊಡನೆ ತಾವೂ ಕಿಟಕಿಯತ್ತ ಓಡುವ ಪ್ರಯತ್ನ ಮಾಡಿದರು ಚಂದನ್, ಶ್ಯಾಂ. ಆದರೆ ಅರ್ಧದಲ್ಲೇ ಹಠಾತ್ ತಡೆ ಯೊದಗಿತ್ತು. ಹಿಂದಿನಿಂದ 'ಫಟ್ ಫಟ್' ಎಂದು ನಾಲ್ಕು ರಾಡ್‌ಗಳು ತಲೆಯ ಹಿಂಬದಿಗೆ ಮುತ್ತಿಟ್ಟಿದ್ದವು !

ಕಣ್ಣುಗಳ ಮುಂದೆ ಟೆಕ್ನಿಕಲರ್ ಚಿತ್ರಗಳು ಪ್ರತ್ಯಕ್ಷವಾಗಿ ಅವು ಬ್ಲಾಕ್ ಅಂಡ್ ವೈಟಾಗಿ ಕೊನೆಗೆ ಸಂಪೂರ್ಣ ಬ್ಲಾಕ್ ಆಗಲು ಬಹಳ ಹೊತ್ತು ಹಿಡಿಯಲಿಲ್ಲ. ಮೂರ್ಛೆ ಹೋಗಿ ತಲೆ ನೆಲಕ್ಕೆ ವಾಲಿಸಿಬಿಟ್ಟರು ಇಬ್ಬರೂ.

"ಮುಖ್ಯವಾದವನು ತಪ್ಪಿಸಿಕೊಂಡ......ಅವನನ್ನು ಹಿಡಿಯಿರಿ !" ಕಿರುಚಿದ ಡೋಗ್ರಾ.

# ೧೪

"ಶಾಭಾಷ್ ಡೋಗ್ರಾ......ನಿನ್ನ ಮೇಲೆ ನನಗಿರುವ ನಂಬಿಕೆಯನ್ನು ಉಳಿಸಿಕೊಂಡೆ !" ಅಭಿಮಾನದೊಡನೆ ಬೆನ್ನು ತಟ್ಟಿ ವಿಕಟವಾಗಿ ನಕ್ಕ ಅಕ್ಬರ್.

ಡೋಗ್ರಾನ ಎದೆ ಎರಡಂಗುಲ ಹೆಚ್ಚಿಗೆ ಉಬ್ಬಿತು !

"ಇಂದು ಸಂಜೆಗೆ ಹಡಗು ಬರಲಿದೆ. ಕಡಿಮೆ ಇರುವ ಹುಡುಗಿಯರ ಸಂಖ್ಯೆಯನ್ನು ತಕ್ಷಣ ಫಿಲಪ್ ಮಾಡಲು ಏರ್ಪಾಟು ಮಾಡು...... ಅಲ್ಲಿಯ ವರೆಗೆ ಕಿಲ್ ಮಾಸ್ಟರ್ ನಮ್ಮ ಸ್ಥಾವರಕ್ಕೆ ಬರಲಾಗದಂತೆ ನಮ್ಮವರೆಲ್ಲರನ್ನು ಛೂ ಬಿಡು. ಷಿಪ್ ಪ್ರಯಾಣ ಶುರು ಮಾಡಿದೊಡನೆ ಈ ಇಬ್ಬರು ಏಜೆಂಟರ್ ಕತ್ತು ಮುರಿದು ಸಮುದ್ರಕ್ಕೆಸೆದುಬಿಡು ನಾವು ಒಂದಷ್ಟು ದಿನ ಭೂಗತರಾಗೋಣ...... ಈ ಗೊಡವೆಗಳೆಲ್ಲಾ ಸ್ವಲ್ಪ ತಣ್ಣಗಾದ ಮೇಲೆ ಮತ್ತೆ ದಂಧೆ ಶುರು ಮಾಡೋಣ......" ತನ್ನ ಪ್ಲಾನ್ ವಿವರಿಸಿದ ಅಕ್ಬರ್.

ಅವನೆದುರಿಗೆ ಡೋಗ್ರಾ ಜೊತೆಗೆ ಇನ್ನು ಮುವ್ವತ್ತು ಅನುಚರರು ನಿಂತಿದ್ದರು. ಒಂದೆಡೆ ನೆಲೆದ ಮೇಲೆ ಮೂರ್ಛೆ ಹೋದ ಶ್ಯಾಂ, ಚಂದನ್ ರಿದ್ದರು.

"ಓ.ಕೆ. ಬಾಸ್...... ಈ ಸಲ ಮಹೇಶ ನನ್ನ ಕೈನಿಂದ ತಪ್ಪಿಸಿಕೊಳ್ಳ ಲಾರ. ತಕ್ಷಣ ಹೊರಟು ಎಲ್ಲಾ ಏರ್ಪಾಟುಗಳನ್ನು ಮಾಡುತ್ತೇನೆ" ಸಗರ್ವದೊಡನೆ ಹೇಳಿದ ಡೋಗ್ರಾ.

"ಆಲ್‌ರೈಟ್..... ಹೊರಡು ನೀನು" ಅಂದ ಅಕ್ಬರ್.

ತನ್ನ ಅನುಚರರೊಡನೆ ಹೊರನಡೆದ ಡೋಗ್ರಾ.

"ಸಾವನ್ !" ಕರೆದ ಅಕ್ಬರ್, "ಈ ಇಬ್ಬರನ್ನೂ ಎತ್ತಿಕೊಂಡು ಹೋಗಿ ಹುಡುಗಿಯರಿರುವ ಕೊಠಡಿಯಲ್ಲಿ ಬಂಧಿಸಿಡು."

ಮುಂದಿನ ನಿಮಿಷ ಶ್ಯಾಂ, ಚಂದನ್‌ರ ಅಚೇತನ ದೇಹಗಳು ಭೀತಿ

ಯಿಂದ ಕಂಗಾಲಾಗಿ ಗೋಡೆಗಳಿಗಂಟಿಕೊಂಡು ಕುಳಿತಿದ್ದ ಹುಡುಗಿಯರು ಸೆಲ್‌ನೊಳಗಿದ್ದವು.

ಮುಚ್ಚಿದ್ದ ಬಾಗಿಲುಗಳ ಬಳಿ ಇಬ್ಬರು ಮೆಷಿನ್‌ಗನ್ ಗಾರ್ಡ್‌ಗಳನ್ನಿರಿಸಿ ಎಚ್ಚರಿಕೆ ನೀಡಿ ಅಲ್ಲಿಂದ ಹೊರಟ ಸಾವನ್.

ಅಲ್ಲಿಯವರೆಗೆ ಸುಮ್ಮನೆ ಒಂದೆಡೆ ಕುಳಿತಿದ್ದ ಶಾಲಿನಿ ತಡಮಾಡದೆ ಎದ್ದು ಶ್ಯಾಂ, ಚಂದನ್‌ರನ್ನು ಸಮೀಪಿಸಿದಳು. ಅವರ ಮುಖಗಳನ್ನು ಚೆನ್ನಾಗಿ ಗಮನಿಸಿದೊಡನೆ ದಿಗ್ಭ್ರಮೆ, ಸಂತಸ ಉಕ್ಕಿ ಬಂದು ಕಕ್ಕಾಬಿಕ್ಕಿಯಾದಳು.

"ಮೈಗಾಡ್..... ಶ್ಯಾಂ, ಚಂದನ್ !" ಅಯಾಚಿತವಾಗಿ ಉದ್ಗರಿಸಿದಳು.

"ಇವರು ನಿನ್ನ ಪರಿಚಯದವರೇ ಶಾಲಿನಿ ?" ಕೇಳಿದಳೊಬ್ಬ ಹುಡುಗಿ.

ಹೌದೆನ್ನುವಂತೆ ತಲೆಯಾಡಿಸಿ ಕೊಠಡಿಯಲ್ಲಿದ್ದ ಕೂಜಾ ನೀರನ್ನು ತಂದು ಅವರ ಮುಖಗಳ ಮೇಲೆ ಸಿಂಪಡಿಸಿದಳು ಶಾಲಿನಿ.

ಬೆಚ್ಚಿ ಕಣ್ಣು ತೆರೆದರು ಚಂದನ್, ಶ್ಯಾಂ. ಮರುಕ್ಷಣ ಎದುರಿಗೆ ನಿಂತಿರುವ ಶಾಲಿನಿಯನ್ನು ಕಂಡು ವಿಸ್ಮಯಗೊಂಡರು.

"ಶಾಲಿನಿ !" ಅಂದ ಸಂಭ್ರಮದೊಡನೆ ಚಂದನ್.

ಗೃಹ ಸಚಿವರ ಮನೆಗೆ ಕರ್ನಲ್‌ರೊಡನೆ ಆಗಾಗ ಎಡತಾಕುವ ಅವರು ಅವಳಿಗೆ ಚೆನ್ನಾಗಿಯೇ ಪರಿಚಯ. "ಭಯ್ಯ" ಎಂದು ಯಾವಾಗಲೂ ಅವರನ್ನು ಸಂಬೋಧಿಸುವ ಅವಳ ಕಣ್ಣುಗಳು ತುಂಬಿ ಬಂದು ಬಿಕ್ಕಿದಳು.

"ಡೋಂಟ್ ವರಿ ಬೆಹನ್ !" ಅವಳ ಕಣ್ಣೀರೊರೆಸಿ ತಲೆ ಸವರಿ ಹೇಳಿದ ಶ್ಯಾಂ. "ನಾವು ಬಂದೆವಲ್ಲಾ.....ಇನ್ನು ನಿನ್ನನ್ನಾರು ಟಚ್ ಮಾಡುವರೋ ನೋಡೋಣ."

"ಭಯ್ಯ...... ಬಂದವರು ನೀವಿಬ್ಬರೇನಾ ?" ಅರ್ಧೋಕ್ತಿಯಲ್ಲಿ ಮಾತು ನಿಲ್ಲಿಸಿದಳು ಶಾಲಿನಿ.

ಮಹೇಶನ ಆರಾಧಕಿಯರಲ್ಲೊಬ್ಬಳು ಅವಳು !

"ನಿನ್ನ ಹೀರೊ ಬಂದಿದ್ದಾನಮ್ಮಾ ! ಈ ಗುಂಪಿಗೆ ಗ್ರಹಚಾರ ವಕ್ರಿಸಿದೆ. 'ಜಿಂಕೆ'ಯ ರೂಪದಲ್ಲಿ !" ಭವಿಷ್ಯ ನುಡಿದ ಚಂದನ್.

# ೧೫

ಫಾಸ್ಟಾಗಿ ಬಂದು ಗಲ್ಲಿಯೊಂದರ ಮುಂದೆ ಸಡನ್ ಬ್ರೇಕ್‌ನೊಡನೆ ನಿಂತಿತು ಕಾರು. ಅದರಿಂದ ಕೆಳಕ್ಕಿಳಿದು ಮುಂದೆ ಕಾಣುತ್ತಿದ್ದ ಹೆಂಚಿನ ಮನೆಯನ್ನು ಸಮೀಪಿಸಿದ ಡೋಗ್ರಾ.

ಆ ಕಾರನ್ನು ಹಿಂಬಾಲಿಸಿ ಬಂದ ಟ್ಯಾಕ್ಸಿಯನ್ನು ನೂರುಗಜಗಳಷ್ಟು ದೂರದಲ್ಲೇ ನಿಲ್ಲಿಸಿ ಟ್ಯಾಕ್ಸಿಯಿಂದ ಕೆಳಕ್ಕಿಳಿದ ಮಹೇಶ ಫೇರ್ ಸಲ್ಲಿಸಿ ಡೋಗ್ರಾನ ಕಾರಿನ ಬಳಿಗೆ ಬಂದು ನಿಂತ.

ಹತ್ತು ನಿಮಿಷಗಳ ನಂತರ ಕಾರಿನ ಬಳಿಗೆ ಬಂದು ಹತ್ತಿ ಕುಳಿತು ಸ್ಟಾರ್ಟ್ ಮಾಡಿದ ಡೋಗ್ರಾ. ರಿವ್ಯೂ ಮಿರರ್ ಪರಿಶೀಲಿಸಿ ತೃಪ್ತಿಗೊಂಡು ಕಾರು ಮುನ್ನಡೆಸಿದ. ಅರ್ಧಗಂಟೆಯ ಪ್ರಯಾಣದ ನಂತರ ಬಾಂಬೆ ಸಿಟಿ ಲಿಮಿಟ್ಸ್ ಸಮೀಪಿಸಿತು ಕಾರು.

"ಹಲೋ ಫ್ರೆಂಡ್ ಡೋಗ್ರಾ.....ಹೌ ಆರ್ ಯು ?" ಸ್ವೀಟ್ ವಾಯ್ಸ್‌ನಲ್ಲಿ ಕೇಳಿದ ಹಿಂದೆ ಸೀಟಿನ ಕೆಳಗೆ ಫ್ಲಾಟ್ ಆಗಿ ಈಗ ಮೇಲೆದ್ದ ಮಹೇಶ.

ಎಲೆಕ್ಟ್ರಿಕ್ ಶಾಕ್ ತಗುಲಿದವನಂತೆ ಅದುರಿಬಿದ್ದು ಹಿಂದೆ ತಿರುಗಹೋದ ಡೋಗ್ರಾ.

"ನೋ......ನೋ.....ಡೋಂಟ್ ಮೂವ್ ದೋಸ್ತ್ ! ತಿರುಗಿ ನೋಡುವ ಅವಶ್ಯಕತೆಯೂ ಇಲ್ಲ !" ಅನ್ನುತ್ತಾ ಎಡ ಅಂಗೈನ ಹರಿತಕೊನೆಯಿಂದ ಅವನ ಕುತ್ತಿಗೆಯ ಹಿಂಬದಿಗೆ ಚಾಪ್ ಮಾಡಿದ ಮಹೇಶ. ಬಲಗೈನಲ್ಲಿದ್ದ 'ರಾಣಿ' ಅವನ ತಲೆಗೆ ಪ್ರೆಸ್ ಆಗಿತ್ತು !

ತುಟಿಕ್ ಪಿಟಿಕ್ ಅನ್ನದೆ ಸ್ಟೇರಿಂಗ್ ಬಿಟ್ಟು ಸ್ಮೃಹೆ ಕಳೆದುಕೊಂಡು ಸೀಟಿನ ಮೇಲೆ ಉರುಳಿಕೊಂಡ ಡೋಗ್ರಾ. ತಕ್ಷಣ ಮುಂದಿನ ಸೀಟಿಗೆ ಜಾರಿ ಕಾರುನಿಲ್ಲಿಸಿದ ಮಹೇಶ.

ಎತ್ತ ನೋಡಿದರು ಪೊದೆಗಳು, ಗಿಡಮರಗಳೇ ತುಂಬಿರುವ ಪ್ರದೇಶ ಅದು. ತನ್ನ ಕೆಲಸಕ್ಕೆ ಪ್ರಶಸ್ತವಾದ ಜಾಗ !

ಕಾರಿನ ಡಿಕ್ಕಿ ತೆಗೆದು ಅಲ್ಲಿದ್ದ ನೈಲಾನ್ ಹಗ್ಗದ ಸುರುಳಿಯನ್ನು ತಂದು ಡೋಗ್ರಾನ ಕೈಕಾಲುಗಳನ್ನು ಬಿಗಿದು ಕಟ್ಟಿದ್ದ ಮಹೇಶ. ಅವನನ್ನು ಭುಜದ ಮೇಲೆ ಹೊತ್ತು ತಂದು ಎರಡು ಪೊದೆಗಳ ನಡುವೆ ಇಳಿಸಿ ಎಡ ಕಿವಿಯ ತಳ ಭಾಗದಲ್ಲಿನ ಸೂಕ್ಷ್ಮ ನರವನ್ನು ಮೃದುವಾಗಿ ಮೀಟಿದ.

ಜೋರಾಗಿ ಕಂಪಿಸುತ್ತ ಕಣ್ಣು ತೆರೆದ ಡೋಗ್ರಾ. ಎದುರಿಗೆ ಒಂದಡಿ ಉದ್ದದ ಸ್ಪ್ರಿಂಗ್‌ನೈಫ್ ಹಿಡಿದು ಕಾಲಯಮನಂತೆ ನಿಂತಿರುವ ಮಹೇಶ ಕಾಣಿಸಿದ !

"ಈ ನೈಫ್ ನಿನಗಾಗಿ ಕೊಂಡು ತಂದೆ ಫ್ರೆಂಡ್ ಡೋಗ್ರಾ ! ಇದು ನಿನ್ನ ಶರೀರದ ಮೇಲೆ ಸರ್ಕಸ್ ಮಾಡಬಾರದೆಂಬ ಆಸೆಯಿದ್ದರೆ ನಿನಗೆ ತಿಳಿದಿರುವ ವಿಷಯಗಳನ್ನೆಲ್ಲಾ ಒದರಿಬಿಡು !" ಉತ್ತೇಜಕ ನಗೆಯೊಡನೆ ಹೇಳಿದ ಮಹೇಶ.

"ನನಗೇನೂ ಗೊತ್ತಿಲ್ಲ......ನನ್ನ ಬಾಯಿಂದ ನಿನಗೆ ಬೇಕಾದ ಒಂದು ಶಬ್ದವೂ ಬರುವುದಿಲ್ಲ. ಗೋ ಟು ಹೆಲ್ !" ಮೊಂಡನಂತೆ ನುಡಿದ ಡೋಗ್ರಾ.

"ಎಲ್ಲರೂ ಮೊದಲು ನಿನ್ನಂತೆಯೇ ಹೇಳುವುದು. ಅಬ್ದುಲ್ ಸಹ ಹೀಗೆಯೇ ಹೇಳಿದ ! ನಿನ್ನಂತಹವರೊಡನೆ ಟೈಂ ವೇಸ್ಟ್ ಮಾಡಬಾರದು. ಆದ್ದರಿಂದ ಪ್ರಥಮ ಸ್ಟೆಪ್ ಆಗಿ......" ಅನ್ನುತ್ತಾ ನೈಫ್‌ನ ಮೊನೆ ಬಲಗಣ್ಣು ಕೆಳಗಿರಿಸಿ ನೀಟಾಗಿ ಕತ್ತರಿಸಿದ ಮಹೇಶ.

ಸಂಪೂರ್ಣ ಕಣ್ಣು ಕ್ಷಣದ ನಂತರ ಎಗರಿ ಕೆಳಗೆ ಬಿತ್ತು !

ತನ್ನ ದೇಹದ ತೂಕವೆಲ್ಲವನ್ನೂ ಅವನ ಮೇಲೆ ಹಾಕಿ ಅಲ್ಲಾಡಲಾಗದಂತೆ ಬಿಡದ ಪಟ್ಟು ಹಿಡಿದ ಮಹೇಶ. ಕಣ್ಣಿದ್ದ ಜಾಗದಲ್ಲೀಗ ದೊಡ್ಡ ಬೊಕ್ಕೆ ! ಫೌಂಟನ್‌ನಂತೆ ಹರಿದುಬಂದ ರಕ್ತ ತನ್ನ ಬಟ್ಟೆಗೆ ಸಿಡಿಯುತ್ತಿದ್ದರೂ ಕದಲಲಿಲ್ಲ ಮಹೇಶ.

ಐದು ನಿಮಿಷಗಳ ನಂತರ ಬಾಯಮೇಲಿನ ಹಿಡಿತ ಸಡಲಿಸಿ ನೈಫ್ ಎಡಗಣ್ಣು ಪಾಪೆಯ ಕೆಳಗಿರಿಸಿ ಭೀಷಣ ನಗೆ ನಕ್ಕ. "ನೆನಪಾಯಿತೇ ?" ಮೃದುವಾಗಿ ಕೇಳಿದ.

ಉಳಿದಿದ್ದ ಕಣ್ಣಲ್ಲಿ ಧಾರಾಕಾರವಾಗಿ ನೀರು. "ನಿನ್ನ ಸ್ನೇಹಿತರು, ಹುಡುಗಿಯರು ಅಕ್ಬರ್‌ನ ಹೆಡ್‌ಕ್ವಾರ್ಟರ್ಸ್‌ನಲ್ಲಿದ್ದಾರೆ. ಇನ್ನೆರಡು ಹಡಗು

ಬರುತ್ತದೆ. ಬಾಂಬೆ ಬಂದರಿಂದ ನಾಲ್ಕು ಕಿಲೋಮೀಟರ್‌ಗಳಷ್ಟು ದೂರದಲ್ಲಿ ಶಿಥಿಲ ಬೌದ್ಧಾಲಯವೊಂದಿದೆ. ಅದೇ ಅಕ್ಬರ್ ಸ್ಥಾವರ.........!" ಇನ್ನೂ ಚೂರು ಬದುಕುವ ಆಸೆಯನ್ನಿರಿಸಿಕೊಂಡಿದ್ದ ಡೋಗ್ರಾ ಕ್ಷೀಣಧ್ವನಿಯಲ್ಲುಸುರಿದ.

"ಪವಿತ್ರ ದೇವಾಲಯಗಳನ್ನೆ ನಿಮ್ಮ ಹಾಳು ಕೆಲಸಗಳಿಗೆ ಉಪಯೋಗಿಸುವಿರಾ ಬಾಸ್ಟರ್ಡ್ ?" ಅನ್ನುತ್ತಾ ನೈಫ್ ಅವನ ಎದೆಯಾಳದೊಳಕ್ಕಿಳಿಸಿ ಕೈ ಒಂದು ಸುತ್ತು ತಿರುವಿದ ಮಹೇಶ. ಈ ಸಲ ಬಾಯಿ ಮುಚ್ಚಲಿಲ್ಲ.

ಡೋಗ್ರಾನ ಕೊನೆಯ ಕೂಗು ನರಕದ ಬಾಗಿಲು ತಟ್ಟಲಿ ಎಂಬ ಆಶಯ ?

* * * * *

ಬೌದ್ಧಾಲಯದಿಂದ ಕಿಲೋಮೀಟರ್ ದೂರದಲ್ಲೇ ಕಾರು ನಿಲ್ಲಿಸಿ ಕಾಲ್ನಡಿಗೆಯಲ್ಲೇ ಸ್ಥಾವರದತ್ತ ಸಾಗಿದ ಡೋಗ್ರಾನಂತೆಯೇ ತನ್ನ ಚಹರೆಯನ್ನು ಹೈಕ್ಲಾಸಾಗಿ ಮಾರ್ಪಾಟು ಮಾಡಿಕೊಂಡಿದ್ದ ಮಹೇಶ. ಅಲ್ಲಿಂದ ಸ್ವಲ್ಪ ದೂರದಿಂದ ಸಮುದ್ರದಲೆಗಳ ಉದ್ಘೋಷ ಕೇಳಿಬರುತ್ತಿತ್ತು. ಅಲೆಗಳ ಮೇಲೆ ತೊನೆದಾಡುತ್ತಿರುವ ನಾಲ್ಕು ಮೋಟರ್ ಲಾಂಚ್‌ಗಳ ದರ್ಶನವೂ ಆಯಿತು. ಹುಡಗಿಗೆ ಹುಡುಗಿಯರನ್ನು ಸಾಗಿಸುವ ಟ್ರಾನ್ಸ್‌ಪೋರ್ಟ್ಸ್ !

ತೀಕ್ಷ್ಣವಾಗಿ ಸುತ್ತಲೂ ಗಮನಿಸುತ್ತಾ ಆಲಯವನ್ನು ಸಮೀಪಿಸಿದ ಮಹೇಶ. ಹೊರಗಡೆ ಕಾಷಾಯ ವಸ್ತ್ರಗಳನ್ನು ಧರಿಸಿ ಭಿಕ್ಷುಗಳಂತೆ ಪೋಸ್ ಕೊಡುತ್ತಾ ಕುಳಿತಿರುವ ಐವತ್ತರವರೆಗಿದ್ದ ದೃಢಕಾಯರ ತಂಡ ಕಾಣಿಸಿತು. ಮೆಷಿನ್‌ಗನ್ಸ್, ಪಿಸ್ತೂಲುಗಳು ಹೊರಕ್ಕೆ ಕಾಣಿಸುತ್ತಿಲ್ಲ. ನಿಲುವಂಗಿಗಳೊಳಗಿವೆ ಎನ್ನುವುದರಲ್ಲಿ ಸಂಶಯವಿಲ್ಲ !

ಇನ್ನಷ್ಟು ಭಿಕ್ಷುಗಳು ಆಲಯದ ಸುತ್ತಲೂ ಗಸ್ತು ತಿರುಗುತ್ತಿದ್ದರು. ಅಕ್ಬರ್‌ನ ಭದ್ರತಾ ವ್ಯವಸ್ಥೆಗೆ ತಲೆದೂಗುತ್ತಾ ಆಲಯಕ್ಕೆ ಹತ್ತಿರವಾದ ಮಹೇಶ.

"ಡೋಗ್ರಾ..... ನಿನ್ನ ಆಗಮನಕ್ಕಾಗಿಯೇ ಕಾಯುತ್ತಿದ್ದಾರೆ ಬಾಸ್" ಹತ್ತಿರಕ್ಕೆ ಓಡಿಬಂದು ಹೇಳಿದ ಒಬ್ಬ ದೃಢಕಾಯ.

ತನ್ನ ಮೇಕಪ್ ಪ್ರಥಮ ಪರೀಕ್ಷೆಯಲ್ಲಿ ಪಾಸಾಯಿತು ಎಂಬ ಸಂತಸ ದೊಡನೆಯೇ ಒಳಕ್ಕೆ ಪ್ರವೇಶಿಸಿದ ಮಹೇಶ.

ಹೊರಕ್ಕೆ ಹಾಳುಬಿದ್ದ ಬೌದ್ಧ ದೇವಾಲಯದಂತೆ ಕಂಡರೂ ಒಳಭಾಗ ಸುಸಜ್ಜಿತವಾಗಿ ಅಲಂಕರಿಸಲ್ಪಟ್ಟಿತ್ತು. ಎಲ್ಲೆಲ್ಲೂ ದೇದಿಪ್ಯಮಾನವಾಗಿ ಬೆಳಗುತ್ತಿರುವ ಪ್ಯಾಟ್‌ಲೈಟ್ಸ್.

"ಕಮಾನ್ ಡೋಗ್ರಾ ನಿನಗಾಗೇ ಕಾಯುತ್ತಿದ್ದೆ !" ಉದ್ಗಾರಿಸಿದ ಅಕ್ಬರ್.

"ಸಾರಿ ಬಾಸ್... ಏರ್‌ಪಾರ್ಟುಗಳನ್ನು ಮಾಡುವುದರಲ್ಲಿ ತಡವಾಯಿತು" ಅಂದ ಮಹೇಶ ಡೋಗ್ರಾನ ಧ್ವನಿಯನ್ನನುಕರಿಸಿ, ಮನಸ್ಸಿನಲ್ಲಿ ಮಾತ್ರ ಪುಕಪುಕ.

ಅಕ್ಬರ್ ಯಾವುದನ್ನೂ ಗಮನಿಸುವ ಸ್ಥಿತಿಯಲ್ಲಿರಲಿಲ್ಲ. ನೇರ ಮಹೇಶ ನನ್ನು ಪಕ್ಕದ ಕೊಠಡಿಯೊಳಕ್ಕೆ ಕರೆದೊಯ್ದ.

ಅಲ್ಲಿ ಉದ್ದನೆಯ ನಿಲುವಂಗಿ, ತಲೆಗೆ ಬರ್ನಾಸುಗಳನ್ನು ಧರಿಸಿದ್ದ ಇಬ್ಬರು ಆಜಾನುಬಾಹುಗಳು ಕುಳಿತಿದ್ದರು. ಅರೇಬಿಯಾ ಅತಿಥಿಗಳು ಎಂದು ಅರ್ಥವಾಗಲು ಕ್ಷಣವೂ ಹಿಡಿಯಲಿಲ್ಲ. ಪೊಗವಸ್ತ್ರಾದ ಹುಡುಗಿ ಯರನ್ನು ನೋಡಲು ಜೊಲ್ಲು ಸುರಿಸುತ್ತಿರಬೇಕು ಬಾಸ್ಟರ್ಡ್ಸ್!

"ಡೋಗ್ರಾ...... ಸೌದಿ ಅರೇಬಿಯಾಗೆ ಹೊರಡುವ ಷಿಪ್ ಸಿದ್ಧವಾಗಿದೆ. ಇವರು ಅಲ್ಲಿನ ನಮ್ಮ ಪ್ರತಿನಿಧಿಗಳು- ಮಿಕ್ಕ ಸರಕೆಲ್ಲಿ ?" ಕೇಳಿದ ಅಕ್ಬರ್.

"ಇನ್ನು ಕಾಲುಗಂಟೆಯಲ್ಲಿ ಅವರ ಆಗಮನವಾಗುತ್ತದೆ ಬಾಸ್...... ನೀವು ಮಾತಾಡುತ್ತಿರಿ. ನಾನು ಎಲ್ಲ ಸಿದ್ಧತೆಗಳನ್ನು ಮುಗಿಸುತ್ತೇನೆ." ಅನ್ನುತ್ತಾ ಜಾಗ ಖಾಲಿ ಮಾಡಿದ ಮಹೇಶ.

ನಿಧಾನವಾಗಿ ಮುನ್ನಡೆಯುತ್ತಾ ಎಡಪಾರ್ಶ್ವದ ಕೊಠಡಿಯ ಕಡೆ ನೋಡಿದ ಇಬ್ಬರು ದೃಢಕಾಯರು ಬಾಗಿಲ ಮುಂದೆ ನಿಂತಿದ್ದರು. ಇನ್ನಷ್ಟು ಮಂದಿ ಅಲ್ಲಲ್ಲಿ ನಿಂತು ಏನೋ ಚರ್ಚಿಸುತ್ತಿದ್ದರು.

ಆ ಕೊಠಡಿಯ ಮೇಲೆ ಕೇಂದ್ರೀಕೃತಗೊಂಡವು ಮಹೇಶನ ಕಣ್ಣು ಗಳು. ಬಾಗಿಲು ಓಪನ್ ಮಾಡಿಸಲೇನು ಅಡ್ಡಿ ?

ಟೀವಿಯಿಂದ ನಡೆದು ಬಾಗಿಲು ತೆರೆಯುವಂತೆ ಕಣ್ಣಿನಲ್ಲೇ ಸೂಚಿಸಿದ. ಬಾಗಿಲು ತೆರೆದೊಡನೆ ಒಳಕ್ಕೆ ಬರುವಂತೆ ಅವರನ್ನು ಕರೆದ.

ಅವರು ಒಳಕ್ಕೆ ಬಂದೊಡನೆ ಬಾಗಿಲು ಮುಚ್ಚಿ ಬೋಲ್ಟ್ ಬಿಗಿದ. ಏನೋ ಯೋಚಿಸುತ್ತಿದ್ದ ಚಂದನ್. ಶ್ಯಾಂ ಟೆನ್ಷನ್‌ನೊಡನೆ ಮೇಲೆದ್ದು ಸ್ಟೆಡಿಯಾಗಿ ನಿಂತರು.

"ನೋಡಿದರೇನೂ ಪ್ರಯೋಜನವಿಲ್ಲ ಗೆಳೆಯರೇ..... ಚೆನ್ನಾಗಿ ಬಾರಿಸಿ. ಆದರೆ ಶಬ್ದ ಮಾತ್ರ ಬರಬಾರದಷ್ಟೆ !" ಅಂದ ಮಹೇಶ ಒರಿಜಿನಲ್ ವಾಯ್ಸ್‌ನಲ್ಲಿ.

ಧ್ವನಿ ಗುರುತು ಹಿಡಿದೊಡನೆ ಆನಂದತುಂದಿಲರಾಗಿ ಅಕ್ಷರಶಃ ಗಿಳಿದರು ಶ್ಯಾಂ, ಚಂದನ್. ಮಹೇಶನ ಆಜ್ಞೆಯನ್ನು ಅಕ್ಷರಶಃ ಪಾಲಿಸಿ ವೃಧ್ಧರಾಯು ರನ್ನು ಹದಿನೈದೇ ಸೆಕೆಂಡ್‌ಗಳಲ್ಲಿ ಫ್ಲಾಟ್ ಮಾಡಿದರು.

"ಗುರು......!" ಎಂದು ವಿಷಲ್ ಹಾಕಹೋದ ಚಂದನ್

"ಷಟಪ್ ! ಶ್ಯಾಂ......ಇನ್ನು ಹತ್ತು ನಿಮಿಷಗಳಲ್ಲಿ ರಾಜ್ಯ ರಿಸರ್ವ್ ಪೊಲೀಸ್ ಇಲ್ಲಿ ಇಳಿಯಲಿದೆ ಗೃಹಸಚಿವರ ಕೃಪಾಡದಿಂದ. ನಾನು ಅಕ್ಬರ್ ವಿಷಯ ಗಮನಿಸುತ್ತೇನೆ. ಮಿಕ್ಕ ಕೆಲಸ ನೀವು ನೋಡಿಕೊಳ್ಳಿ......" ಎಂದು ಆದೇಶಿಸಿ ಹಿಂದೆ ತಿರುಗಿ ಕ್ಷಣಗಳಲ್ಲಿ ಅದೃಶ್ಯನಾದ.

ವೃಧ್ಧರಾಯರ ಮೆಷಿನ್‌ಗನ್ಸ್ ಹಿಡಿದು ಹುಡುಗಿಯರನ್ನು ಹಿಂದಿಟ್ಟು ಕೊಂಡು ಹೊರಕ್ಕೆ ಬರಲು ರೆಡಿಯಾದರು ಚಂದನ್, ಶ್ಯಾಂ.

ಸೀರಿಯಸ್ಸಾಗಿ ಕೊಠಡಿಯೊಳಕ್ಕೆ ಬರುತ್ತಿರುವ ಡೋಗ್ರಾನನ್ನ ನೋಡಿ "ಎಲ್ಲಿ ಹುಡುಗಿಯರು ?" ಎಂದು ಕೋಪದಿಂದ ಆರ್ಭಟಿಸಿದ ಅಕ್ಬರ್.

ಮರುಕ್ಷಣ 'ಧನ್' ಎಂದು ಕ್ಲೋಸ್ ಆದವು ಬಾಗಿಲುಗಳು. ದಿಗ್ಭ್ರಾಂತನಾದ ಅಕ್ಬರ್.

"ಡೋಗ್ರಾ ವಾಟ್‌ದಿಸ್ ? ತಲೆಕೆಟ್ಟಿದೆಯೋ ?" ಕೂಗುತ್ತಾ ಎದ್ದ.

"ನಾನು ನಿನ್ನ ಕಾವಲು ನಾಯಿ ಡೋಗ್ರಾ ಅಲ್ಲ ಅಕ್ಬರ್..... ನಿನ್ನ ಹಿತಚಿಂತಕ ಮಹೇಶ!" ಅನ್ನುತ್ತಾ ಮುಖದ ಮೇಕಪ್ ಎಡಗೈನಿಂದ ಅಳಿಸಿದ

ಮಹೇಶ. ಬಲಗೈನಲ್ಲಿ 'ರಾಣಿ' ಪ್ರತ್ಯಕ್ಷವಾಗಿದ್ದಳು.

"ಮೈಗಾಡ್.....ಮೈಗಾಡ್.....ಎಂತಹ ಮೋಸ !" ತೊದಲಿದ ಅಕ್ಬರ್. ಷಾಕ್‌ನಿಂದ ಇನ್ನು ಚೇತರಿಸಿಕೊಂಡಿರಲಿಲ್ಲ ಅವನು.

"ಹುಡುಗಿಯರ ಮಾನ ಪ್ರಾಣಗಳೊಡನೆ ಚೆಲ್ಲಾಟವಾಡುವ ನಿನ್ನಂತಹ ಫ್ಲೆಷ್ ಮರ್ಚೆಂಟ್ಸ್ ಬದುಕಿರಬಾರದು. ಅಕ್ಬರ್ ! ನಿಮ್ಮಂತಹವರಿಗೆ ನನ್ನ ಕೋರ್ಟ್‌ನಲ್ಲಿ ಒಂದೇ ಶಿಕ್ಷೆ, ಮರಣದಂಡನೆ.....!" ಅನ್ನುತ್ತಾ ಟ್ರಿಗರ್‌ನ ನೇವರಿಸಿದ ಮಹೇಶ.

ಥನ್ .ಥನಾಥನ್......

ಬೆಂಕಿಯುಂಡೆಗಳು ಹೊರಬಿದ್ದವು 'ರಾಣಿ'ಯ ನಳಿಗೆಯಿಂದ ಮೂರು ಗುಂಡುಗಳೂ ಒಟ್ಟಿಗೆ ಬಂದಷ್ಟು ಫಾಸ್ಟ್ ಷೂಟಿಂಗ್ !

ಬುಲೆಟ್ಸ್ ಹಣೆಗಳನ್ನು ಡ್ರಿಲ್ ಮಾಡಿದ ಜೋರಿಗೆ ಹಿಂದಕ್ಕೆ ಬಿದ್ದ ಅಕ್ಬರ್ ಮತ್ತವನ ಟ್ರೇಡ್ ಸಂಗಾತಿಗಳು ಐದಾರುಕ್ಷಣ ವಿಲವಿಲ ಒದ್ದಾಡಿದ ರಷ್ಟೇ. ಆಮೇಲೆ ಅವರ ಅರೆತೆರೆದ ನಿಸ್ತೇಜ ಕಣ್ಣುಗಳು ಸೀಲಿಂಗ್ ಬಿಟ್ಟು ಅತ್ತಿತ್ತ ಅಲ್ಲಾಡಲಿಲ್ಲ.

ತಾವು ಹೋಗುವ ರೂಟ್ ಮೇಲೆ ಆಗಲೇ ಅವರಿಗೆ ತೀವ್ರ ಗಮನ !

ಆಗಲೇ ಹೊರಗಡೆ ತಮ್ಮ ಕೈಚಳಕ ಪ್ರದರ್ಶಿಸಲು ಶುರುಮಾಡಿದ್ದರು ಚಂದನ್, ಶ್ಯಾಂ. ಮೆಷಿನ್‌ಗನ್‌ಗಳ ಭಯಂಕರ ಗರ್ಜನೆ_ದೃಢಕಾಯರ ಆಕ್ರಂದನ......

ಹೊರಗೂ ಶುರುವಾಗಿತ್ತು ಬೊಂಬಾರ್ಡಿಂಗ್ !

ರಿಸರ್ವ್ ಪೊಲೀಸರ ಆಗಮನವಾಗಿಬಿಟ್ಟಿದೆ !

ತಮಗೆ ಮಾರ್ಗದರ್ಶನ ನೀಡುವ ನಾಯಕನೇ ಕಾಣದೆ ಕಂಗಾಲಾದರು ದೃಢಕಾಯರು ಗೊಂದಲದ ಬೀಡಾಯಿತು ಆ ಪ್ರದೇಶ. ಒಳಗೆ, ಹೊರಗೆ ತೀವ್ರಗೊಂಡ ಬುಲೆಟ್ ದಾಳಿಯನ್ನು ವ್ಯವಸ್ಥಿತವಾಗಿ ಎದುರಿಸ ಲಾಗದೆ ವಿನಃ ಹಿಂದತ್ತ ಪರಾರಿಯಾಗುವ ಸನ್ನಾಹ ನಡೆಸಿದರು.

ಆದರೆ ಅರ್ಧ ಕಿಲೋಮೀಟರ್‌ನಷ್ಟು ಜಾಗವನ್ನು ಅಡಿಬಿಡದಂತೆ ಸುತ್ತುವರಿದಿದ್ದ ರಿಸರ್ವ್ ಪಡೆ ಆ ಗ್ಯಾಂಗಿನಿಂದ ಒಬ್ಬನನ್ನು ತಪ್ಪಿಸಿಕೊಳ್ಳಲು ಬಿಡಲಿಲ್ಲ !

## ೧೬

ಬೆಳಿಗ್ಗೆ ಒಂಬತ್ತು ಗಂಟೆಗೆ ಬಾಂಬೆ ಐ.ಜಿ.ಪಿ ಯ ಮನೆಯೊಳಕ್ಕೆ ಎಂಟರಾದ ಗುರು, ಶಿಷ್ಯರಿಗೆ ಹಾಲ್‌ನಲ್ಲಿ ಕುರ್ಚಿಯಲ್ಲಿ ಕುಳಿತಿರುವ ಪರ್ಸ ನಾಲಿಟಿಗಳನ್ನು ಕಂಡು ಎಣೆಯಿಲ್ಲದಷ್ಟು ಗಾಬರಿಯಾಯಿತು.

"ಗುರು......ರಾಂಗ್ ಅಡ್ರಸ್‌ಗೆ ಬಂದುಬಿಟ್ಟಿದ್ದೇವೆ. ಮೊದಲಿಲ್ಲಿಂದ ಜಾಗ ಖಾಲಿ ಮಾಡೋಣ ಬಾ......" ಎಂದು ಅವಸರಿಸಿದ ಚಂದನ್ ಮಾತಿಗೆ ತಲೆಯಾಡಿಸುತ್ತಾ ಗಿರ್ರನೆ ತಿರುಗಿದರು ಶ್ಯಾಂ, ಮಹೇಶ.

"ಬ್ಲಡಿ ಫೂಲ್ಸ್ - ಸ್ಟಾಪ್ ವೇರ್ ಯು ಆರ್ !" ದೊಡ್ಡ ಧ್ವನಿಯಲ್ಲಿ ಗದರಿಸಿದರು ಕರ್ನಲ್ ದಿನೇಶ್‌ಕುಮಾರ್.

ಕಲ್ಲುವಿಗ್ರಹಗಳಂತೆ ಎಲ್ಲಿದ್ದವರು ಹಾಗೆಯೆ ನಿಂತುಬಿಟ್ಟರು ಮೂವರು.

"ನಿಮ್ಮ ಘನಕಾರ್ಯಗಳು ಪೂರ್ತಿಯಾದವೆ ? ಇನ್ನೂ ಚೂರುಪಾರು ಉಳಿಸಿ ಬಂದಿರುವಿರಾ ?" ಕಠೋರ ಧ್ವನಿಯಲ್ಲಿ ಕೇಳಿದರು ಕರ್ನಲ್.

"ಹೆಮಂಡವರ ಮೇಲೆ ಕಪ್ಪೆ ಎಸೆಯುವುದು ನಿಜವಾಗಿಯೂ ಒಳ್ಳೆಯ ಕೆಲಸವಲ್ಲ ಕರ್ನಲ್ !" ಅನ್ನುತ್ತಾ ಒಳಗಿನ ಬಾಗಿಲಿಂದ ಒಳಕ್ಕಡಿಯಿಟ್ಟರು ಸನ್ಮಾನ್ಯ ಗೃಹಸಚಿವರು.

ಅವರ ಬಲಗೈ ಮೊಮ್ಮಗಳು ಶಾಲಿನಿಯ ಹೆಗಲ ಮೇಲೆ !

ಈ ಸಂಘಟನೆಗಳ ಹಿಸ್ಟರಿ ತಿಳಿಯದ ಐ.ಜಿ.ಪಿ ಗೊಂದಲಗೊಂಡು ಎಲ್ಲರನ್ನೂ ದಿಟ್ಟಿಸತೊಡಗಿದ.

"ಬನ್ನಿ ಒಳಗೆ......" ಅನ್ನುತ್ತಾ ಕೊಠಡಿಯೊಳಗೆ ನಡೆದರು ಕರ್ನಲ್. ಗೃಹಸಚಿವರು ಮತ್ತು ಐ.ಜಿ.

ಹಿಂಬಾಲಿಸುವುದೋ ಬೇಡವೊ ಎಂಬ ದ್ವೈಲಮಾದಲ್ಲಿ ಬಿದ್ದು ನಿಂತಲ್ಲಿಯೆ ಇದ್ದರು ಗುರು, ಶಿಷ್ಯರು.

ಆಗಲೇ ಒಳಕ್ಕೆ ಬಂದ ಕರ್ನಲ್‌ರ ಡ್ರೈವರ್ ಬಾಬು ಈ ಗಲಾಟೆಯ ವಿವರಗಳೇನೂ ಗೊತ್ತಿಲ್ಲದೆ, "ಮಹೇಶ್......ಅತ್ತ ಹೋಗಬೇಡಿ. ಬಾಸ್

ಇದ್ದಾರೆ. ಹೀಗೆ ಪರ್ರಾರಿಯಾಗಿ್ನಿ..." ಎಂದು ಸಣ್ಣ ಧ್ವನಿಯಲ್ಲಿ ಎಚ್ಚರಿಸಿದ.

ಆ ಮಾತುಗಳು ನೀಟಾಗಿ, ನೇರವಾಗಿ ಹೋಗಿ ಕರ್ನಲ್‌ರ ಕಿವಿಯಲ್ಲಿ ತೂರಿದವು.

"ಆ ದೊಡ್ಡ ಮನುಷ್ಯನನ್ನು ನಿಮ್ಮೊಡಗೂಡಿಯೇ ಕರೆತನ್ನಿ. ನಿಮಗೆ ಮಾಡುವ ಮರ್ಯಾದೆಯನ್ನೇ ಅವನಿಗೂ ಮಾಡೋಣ......" ಗಂಭೀರ ಧ್ವನಿಯಲ್ಲಿ ಹೇಳಿದರು ಕರ್ನಲ್.

ನಡುಗಿಬಿಟ್ಟ ಬಾಬು. ನಿಮ್ಮ ಹಣೆಬರಹ ಎಂದು ಸನ್ನೆಯಲ್ಲೇ ಸೂಚಿಸಿ ಮೆಲ್ಲಗೆ ಅಲ್ಲಿಂದ ಜಾರಿಕೊಂಡ !

ರೂಮಿನೊಳಕ್ಕಡಿಯಿಡುವಾಗಿಲೇ ಎಡಗಣ್ಣು ಹೊಡೆಯುತೊಡಗಿತ್ತು ಗುರುಶಿಷ್ಯರಿಗೆ. ಬೆಂಗಳೂರಿನ ಸ್ಕೈ ಟ್ರೈನಿಂಗ್ ಸ್ಕೂಲ್‌ನ ರಿಗರಸ್ ಟ್ರೈನಿಂಗ್ ಅಟೆಂಡ್ ಮಾಡಿ ಆಗಲೇ ವರ್ಷಕ್ಕೆ ಹತ್ತಿರ. ಈಗ ಅಸೈನ್‌ಮೆಂಟ್ ಯಶಸ್ವಿಯಾಗಿದ್ದರೂ ತಮಗೆ ತಿಳಿಸದೆ ಅಕಿಸ್ತಿನೊಡನೆ ವರ್ತಿಸಿದ್ದಕ್ಕಾಗಿ ಅದೆಷ್ಟು ದಿನ ಆ ಕೋಂಪೆಯಲ್ಲಿ ಕಳೆಯಬೇಕಾಗುತ್ತದೋ ಎಂದು ತಳಮಳಗೊಂಡಿದ್ದವು ಅವರ ಮನಗಳು.

ಆದ್ದರಿಂದಲೇ ಜೀವಾವಧಿ ಶಿಕ್ಷೆಗೆ ಗುರಿಯಾದ ಕೈದಿಗಳಂತೆ ಅನೀಚ ನಗೆಯೊಡನೆ ಕೈಗಳನ್ನು ಹಿಂದೆ ಕಟ್ಟಿ ಟೇಬಲ್ ಮುಂದೆ ನಿಂತರವರು. ಗೃಹ ಸಚಿವರು ಎಷ್ಟೇ ಹೇಳಿದರೂ ಕೂರಹೋಗಲಿಲ್ಲ ಅವರು.

ಹೇಳಿದರೆಂದು ಸ್ಟೈಲಾಗಿ ಕುಳಿತಬಿಟ್ಟರೆ ಕ್ಯಾಂಪ್‌ನಲ್ಲಿ ಒಂದು ವಾರ ಸತತವಾಗಿ ಕಳಿತಿರುವ ಶಿಕ್ಷೆಯನ್ನೇ ನೀಡುವಂತೆ ಕರ್ನಲ್ ಆದೇಶಿಸಿದರೂ ಆಶ್ಚರ್ಯವಿಲ್ಲ. ಅದೂ ಕಲ್ಲು ನೆಲದ ಮೇಲೆ !